بِسْمِ اللهِ الرَّحْمٰنِ الرَّحِیْمِ نَحْمَدُهٗ وَنُصَلِّیْ عَلٰی رَسُوْلِهِ الْکَرِیْمِ وَعَلٰی عَبْدِهِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 16

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

21 ಏಪ್ರೆಲ್ 2022, 21 ಶಹಾದತ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
19 ರಮಝಾನ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

شَهْرُ رَمَضَانَ الَّذِیْٓ اُنْزِلَ فِیْهِ الْقُرْاٰنُ
هُدًی لِّلنَّاسِ وَبَیِّنٰتٍ مِّنَ الْهُدٰی وَالْفُرْقَانِ ۚ
فَمَنْ شَهِدَ مِنْکُمُ الشَّهْرَ فَلْیَصُمْهُ (البقرۃ:186)

(ಅಲ್‌ಬಖರ : 186)

**ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ಅಬೂಬಕರ್(ರ) ರವರ ಮಹಾನತೆ

(1897) ಹಝ್ರತ್ ಅಬೂ ಹುರೈರ(ರ) ರಿಂದ ವರದಿಯಾಗಿದೆ. ರಸೂಲುಲಾಹ್(ಸ) ನುಡಿದರು. ಯಾರು ಅಲ್ಲಾಹನ ಮಾರ್ಗದಲ್ಲಿ ಜೋಡಿ ಸಮೇತ ಖರ್ಚು ಮಾಡುವನು, ಅವನಿಗೆ ಸ್ವರ್ಗದ ಬಾಗಿಲುಗಳಿಂದ ಧ್ವನಿ ನೀಡಲಾಗುವುದು. ಓ ಅಲ್ಲಾಹನ ದಾಸರೇ! ಈ (ಬಾಗಿಲು) ಉತ್ತಮವಾಗಿದೆ. ಅಂದಹಾಗೆ ನಮಾಝ್ ನಿರ್ವಹಿಸುವವರಿಗೆ ನಮಾಝಿನ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ಜಿಹಾದ್ ಮಾಡುವವರಲ್ಲಿ ಸೇರುವರೋ ಅವರಿಗೆ ಜಿಹಾದಿನ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ಉಪವಾಸ ಮಾಡುವವರಲ್ಲಿ ಸೇರುವರೋ ಅವರನ್ನು ರಂಜಾನ್ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ದಾನ ಮಾಡುವವರಲ್ಲಿ ಸೇರುವರೋ ಅವರಿಗೆ ದಾನದ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಅಗ ಹಝ್ರತ್ ಅಬೂಬಕರ್(ರ) ಅದನ್ನು ಕೇಳಿ ಹೇಳಿದರು. ಹೇ ನಬಿವರ್ಯರೇ! ನನ್ನ ತಂದೆ ತಾಯಿಯರು ನಿಮ್ಮ ಮೇಲೆ ಬಲಿದಾನಗೊಳ್ಳಲಿ, ಯಾರು ಆ ಬಾಗಿಲುಗಳಿಂದ ಕರೆಯಿಸಿಕೊಳ್ಳಲಾಗಯುತ್ತದೆಯೋ ಅವರಿಗೆ ಯಾವುದರ ಅವಶ್ಯಕತೆಯೂ ಇರಲಿಕ್ಕಿಲ್ಲ. (ಹುಝೂರ್(ಸ) ಹೇಳಿದರು). ಇವೆಲ್ಲ ಬಾಗಿಲುಗಳಿಂದಲೂ ಕರೆಯಿಸಿಕೊಳ್ಳುವಂತಹ ಒಬ್ಬರು ಯಾರಾದರೂ ಇದ್ದಾರೆಯೇ? ಅವರು ಹೇಳಿದರು. ಹೌದು ನೀವು ಸಹ ಅವರಲ್ಲಿ ಒಬ್ಬರಾಗಬಹುದೆಂದು ಆಶಿಸುತ್ತೇನೆ.

**ಟಿಪ್ಪಣಿ :** ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲಾಹ್ ಶಾಹ್ ಸಾಹಿಬ್(ರ) ಹೇಳುತ್ತಾರೆ. ಝೌಜೈನ್ ತಾತ್ಪರ್ಯ ಯಾವುದೇ ಜೀವಿಯ ಜೋಡಿ ಎಂಬುದಾಗಿದೆ. ಈ ಸಂಬಂಧ ಕಿತಾಬುಲ್ ಜಿಹಾದ್ 1, ಫಝ್ಲುಲ್ ಫಿಖಾ ಫೀ ಸಬೀಲಿಲ್ಲಾಹ್, ರಿವಾಯತ್ ಸಂಖ್ಯೆ 2841 ನೋಡಿರಿ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಸ್ಸೌಮ್, ಮುದ್ರಣ ಖಾದಿಯಾನ್)**

**"ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್" ನಿಂದ ಪವಿತ್ರ ರಮಝಾನ್ ತಿಂಗಳ ಮಹತ್ವ ತಿಳಿದು ಬರುತ್ತದೆ.**
**ಈ ತಿಂಗಳು ಹೃದಯದ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ, ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ.**
**ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಮಗ್ರಿಬ್ ನಮಾಝಿನ ಕೆಲವು ನಿಮಿಷಗಳ ಮೊದಲು ಪವಿತ್ರ ರಂಝಾನ್ ತಿಂಗಳ ಚಂದ್ರನ ದರ್ಶನವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಗ್ರಿಬ್ ನಮಾಝ್ ನಿರ್ವಹಿಸಿ ಮಸೀದಿಯ ಛಾವಣಿಯ ಮೇಲೆ ಚಂದ್ರನನ್ನು ನೋಡಲು ಹೋಗಿ ಚಂದ್ರನನ್ನು ನೋಡಿ ಪುನಃ ಮಸೀದಿಗೆ ತೆರಳಿ ಹೇಳಿದರು: ಕಳೆದ ರಂಝಾನ್ ನಿನ್ನೆ ಕಳೆದುಹೋದಂತೆ ತೋರುತ್ತದೆ, **ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್** ಪವಿತ್ರ ಖುರ್‌ಆನಿನಲ್ಲಿ ಪ್ರಕಟವಾದ ರಮಝಾನ್ ತಿಂಗಳ ಹಿರಿಮೆಯನ್ನು ತೋರಿಸುವ ನುಡಿಗಟ್ಟು ಕೂಡ ಆಗಿದೆ. ಈ ತಿಂಗಳು ಹೃದಯ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ. ಮತ್ತು ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ, ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ. ಆತ್ಮ ಶುದ್ಧಿ ಎಂದರೆ ದುಷ್ಪ್ರೇರಕ ಆತ್ಮವು ಕಾಮೇಚ್ಛೆಗಳಿಂದ ದೂರ ಉಳಿಯುವುದು ಮತ್ತು ಹೃದಯವು ಸಾಕ್ಷಾತ್ಕಾರಗೊಳ್ಳುವುದು ಎಂದರೆ ಅದೃಶ್ಯ ವಿಷಯಗಳ ಬಾಗಿಲು ಅವನ ಮೇಲೆ ತೆರೆಯಲಾಗುವುದು ಅದರಿಂದ ಅವನು ಅಲ್ಲಾಹನನ್ನು ನೋಡುವನು. ಹೀಗಾಗಿ **ಉನ್‌ಝಿಲ ಫೀಹಿಲ್ ಖುರ್‌ಆನ್** ನಲ್ಲಿ ಇದನ್ನೇ ಸೂಚಿಸಲಾಗಿದೆ. ಉಪವಾಸದ ಪ್ರತಿಫಲವು ದೊಡ್ಡದಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ರೋಗಗಳು ಮತ್ತು ಕಾಯಿಲೆಗಳು ಈ ಅನುಗ್ರಹದಿಂದ ಮನುಷ್ಯನನ್ನು ಕಸಿದುಕೊಳ್ಳುತ್ತವೆ, ನನ್ನ ಯೌವನದಲ್ಲಿ ನಾನು ಒಮ್ಮೆ ಉಪವಾಸವನ್ನು ಸುನ್ನತ್ ಅಹ್ಲುಲ್ ಬೈತ್ ಎಂದು ಕನಸು ಕಂಡೆ ಎಂದು ನನಗೆ ನೆನಪಿದೆ, ನನ್ನ ಬಗ್ಗೆ ದೇವರ ಪ್ರವಾದಿ ಹೇಳಿದರು: **ಸಲ್ಮಾನು ಮಿನ್ನಾ ಅಹ್ಲಲ್ ಬೈತಿ–** ಸಲ್ಮಾನ್ ಅಂದರೆ **ಅಸ್ಸುಲ್‌ಹಾನ್** ಅಂದರೆ ಆ ವ್ಯಕ್ತಿಯಿಂದ ಎರಡು ಸಂಧಾನಗಳು ನಡೆಯುವುವು. ಒಂದು ಆಂತರಿಕ, ಇನ್ನೊಂದು ಬಾಹ್ಯ ಇದನ್ನು ಅವನು ಪ್ರೀತಿಯಿಂದ ಮಾಡುವನು ಖಡ್ಗದಿಂದ ಅಲ್ಲ. ನಾನು ಹುಸೈನ್‌ನ ವಿಧಾನದ ಹಾಗೆ ಯುದ್ಧದ ರೀತಿಯಲ್ಲಿ ಅಲ್ಲ ಬದಲಿಗೆ ನಾನು ಹಸನ್‌ನ ವಿಧಾನದ ಹಾಗೆ ಯುದ್ಧ ಮಾಡದ ರೀತಿಯಲ್ಲಿದ್ದೇನೆ. ಇದು ನನಗೆ ಉಪವಾಸದ ಸಂಕೇತ ಎಂದು ತಿಳಿದು ಬಂತು. ಆದ್ದರಿಂದ ನಾನು ಆರು ತಿಂಗಳು ಸತತವಾಗಿ ಉಪವಾಸಗಳನ್ನು ಅನುಷ್ಠಿಸಿದೆ. ಆ ಕಾಲದಲ್ಲೇ ನಾನು ನೋಡಿದೇನೆಂದರೆ ದಿವ್ಯಪ್ರಕಾಶದ ಕಂಬಗಳು ಆಕಾಶದ ಕಡೆಗೆ ಹಾದುಹೋಗುತ್ತಿದೆ, ಈ ದಿವ್ಯಪ್ರಕಾಶದ ಕಂಬಗಳು ಭೂಮಿಯಿಂದ ಆಕಾಶದ ಕಡೆಗೆ ಹಾದು ಹೋಗುತ್ತಿದೆಯೋ ಅಥವಾ ನನ್ನ ಹೃದಯದಿಂದ ಎಂಬುದನ್ನು ಖಚಿತವಾಗಿರಲಿಲ್ಲ. ಆದರೆ ಇದೆಲ್ಲವೂ ಯೌವನದಲ್ಲಿ ಸಂಭವಿಸಿತ್ತು ಮತ್ತು ಆ ಸಮಯದಲ್ಲಿ ನಾನು ಬಯಸುತ್ತಿದ್ದರೆ ನಾಲ್ಕು ವರ್ಷಗಳ ಕಾಲ ಉಪವಾಸ ಮಾಡಬಹುದಿತ್ತು.

**(ಮಲ್‌ಫೂಝಾತ್, ಸಂಪುಟ-3, ಪುಟ-424, ಪ್ರಕಟಿತ 2018 ಖಾದಿಯನ್)**

**ಅಂತ್ಯ ತೀರ್ಮಾನದ ದಿನವನ್ನು ನಿರಾಕರಿಸುವ ಕಾರಣ ಅನಿಷ್ಟತೆ ಮತ್ತು ಗಂಭೀರತೆಯ ಅಭಾವ ಉಂಟಾಗುತ್ತದೆ. ಹೃದಯವು ಜ್ಞಾನದಿಂದ ವಂಚಿತನಾಗುತ್ತದೆ. ಅದೇ ಕಾರಣದಿಂದ ಮನುಷ್ಯನು ನಿಶ್ಚಿತವಾದ ಮತ್ತು ಯಥಾರ್ಥತೆಯನ್ನು ಧೈರ್ಯದಿಂದ ನಿರಾಕರಿಸುತ್ತಾನೆ ಮತ್ತು ಅದರ ಮೇಲೆ ಯೋಚಿಸಲು ಸಿದ್ಧನಾಗುವುದಿಲ್ಲ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಅನ್ನಹ್ಲ್ ವಚನ-23- **ಫಲ್ಲಝೀನ ಲಾ ಯು ಮಿನೂನ ಬಿಲ್‌ಆಖಿರತಿ ಖುಲೂಬುಹುಮ್ ಮುನ್‌ಕಿರತುಂವ್ವಹುಮ್ ಮುಸ್ತಕ್ಬಿರೂನ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಈ ವಚನದಲ್ಲಿ ಅಲ್ಲಾಹನು, ಏಕನಾಗಿರುವುದು ಅಷ್ಟೊಂದು ಸತ್ಯವಾಗಿದ್ದರೆ ಜನರು ಅದನ್ನು ಏಕೆ ನಿರಾಕರಿಸುತ್ತಾರೆ? ಎಂಬ ಪ್ರಶ್ನೆಯ ಉತ್ತರವನ್ನು ನೀಡಲಾಗಿದೆ. ಅದರ ಉತ್ತರವೇನೆಂದರೆ, ಈ ನಿರಾಕರಣೆಯು

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

## ಅನ್ಯ ಧರ್ಮಿಯರು ಇಸ್ಲಾಮ್ ಧರ್ಮದ ವಿರೋಧವಾಗಿ ವರ್ತಿಸಲು ಹಾಗೂ ಆರೋಪಿಸಲು ಮಸೀಹ್ ಮೌಊದ್(ಅ) ರವರೇ ಕಾರಣ ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಬಾರೀ ಬಹುಮಾನ

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನವನ್ನು ನಾವು ಅವರ "ಅಲ್ ಬಿರಾಗ್" ಎಂಬ ಗ್ರಂಥ, ರೂಹಾನಿ ಖಝಾಯಿನ್ ಸಂ 3 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. 1897 ರಲ್ಲಿ ಕ್ರೈಸ್ತರಾದ ಅಹ್ಮದ್ ಶಹ್ ಎಂಬುವನು 'ಉಮ್ಮೇಹಾತುಲ್ ಮೂಮಿನಿನ್' ಹೆಸರಿನ ಒಂದು ಗ್ರಂಥವನ್ನು ಬರೆದನು. ಅದರಲ್ಲಿ ಅವನು ಹಝ್ರತ್ ರಸೂಲುಲ್ಲಾಹ್(ಸ) ರವರ ಧರ್ಮಪತ್ನಿಯರ ಬಗ್ಗೆ ಅತ್ಯಂತ ಅವಹೇಳನಕಾರಿ ಶಬ್ಧಗಳನ್ನು ಬಳಸಿ ಮುಸಲ್ಮಾನರಿಗೆ ನೋವುಂಟು ಮಾಡಿದನು. ಅದು ಮುದ್ರಣಗೊಂಡ ಮೇಲೆ ಅದರ ಸುಮಾರು ಒಂದು ಸಾವಿರ ಪ್ರತಿಗಳನ್ನು ಉಚಿತವಾಗಿ ಭಾರತದ ಗೌರವಯುತ ಮುಸಲ್ಮಾನರವರಿಗೆ ಕಳುಹಿಸಿಕೊಟ್ಟನು. ಆಗ ಅಂಜುಮನ್ ಹಿದಾಯತುಲ್ ಇಸ್ಲಾಂ, ಲಾಹೋರ್ ಸರಕಾರಕ್ಕೆ ಅದನ್ನು ತಡೆಹಿಡಿಯಲು ದೂರು ನೀಡಿತು. ಮತ್ತು ಅದರ ಲೇಖಕರನ್ನು ಶಿಕ್ಷಿಸುವಂತೆ ಕೋರಿದರು. ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ಆ ರೀತಿ ದೂರು ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ಅವರ ಅಬಿಪ್ರಾಯವೇನಿತ್ತೆಂದರೆ ಗ್ರಂಥ "ಉಮ್ಮಹಾತುಲ್ ಮೂಮಿನೀನ್" ನಲ್ಲಿ ಮಾಡಲಾದ ಆರೋಪಗಳಿಗೆ ತಕ್ಕುದಾದ ಉತ್ತರಗಳನ್ನು ಬರೆಯಬೇಕು. ಮತ್ತು ಅವರು ಹರಡಿಸಿದ ವಿಷಕ್ಕೆ ಅಮೃತ ಒದಗಿಸಬೇಕು. ಕೇವಲ ದೂರು ನೀಡಿ ಮೌನವಹಿಸುವುದರಿಂದ ನಮ್ಮ ಅಸಹಾಯಕತೆ ಹಾಗೂ ದುರ್ಬಲತೆಯನ್ನು ಎತ್ತಿಹಿಡಿದಂತಾಗುತ್ತದೆ. ಜನರು, ಅವರಿಗೆ ಉತ್ತರ ನೀಡುವ ಸಾಮರ್ಥ್ಯವಿಲ್ಲ ಹಾಗೂ ಲೇಖಕನ ಆರೋಪಗಳು ಧರ್ಮಸಮ್ಮತವಾಗಿವೆ ಎಂದ ಹಾಗಾಗುತ್ತದೆ ಎಂಬ ಆತಂಕ ವ್ಯಕ್ತಪಡಿಸಿದ್ದರು. ಆಗಲೇ ಅಹ್ಮದ್ ಶಾಹ್ ಯಾವ ಮುಸಲ್ಮಾನನಿಗೂ ಅದರ ಉತ್ತರ ನೀಡಲು ಸಾಧ್ಯವಿಲ್ಲ ಎಂದು ಕುಟುಕಿದನು. ಅಂತಹದರಲ್ಲಿ ಕೇವಲ ದೂರು ನೀಡಿ ಉತ್ತರ ಕೊಡದಿರುವುದು ಅತ್ಯಂತ ಅವಹೇಳನ ಹಾಗೂ ಅಪಮಾನದ ವಿಷಯವಾಗುವುದು ಮತ್ತು ಅದು ಇಸ್ಲಾಮ್ ಧರ್ಮಕ್ಕೆ ದ್ರೋಹ ಬಗೆದಂತಾಗುವುದು. ಮಸೀಹ್(ಅ) ಅವರ ಅಭಿಮತವೇನಿತ್ತೆಂದರೆ ಕೇವಲ ಉಮ್ಮುಲ್ ಮೂಮಿನೀನರ ಮೇಲಿನ ಆರೋಪಗಳಿಗೆ ಮಾತ್ರ ಉತ್ತರ ನೀಡುವುದಲ್ಲ. ಬದಲು ಹಿಂದೆ ಮಾಡಲಾದ ಎಲ್ಲಾ ಆರೋಪಗಳಿಗೂ ಉತ್ತರ ಬರೆಯಬೇಕು. ಅವರು ಉತ್ತರ ನೀಡಲು ಒತ್ತಾಯಿಸಿದರ ಜೊತೆಯಲ್ಲಿ ಈ ಉತ್ತರ ಬರೆಯುವವನು ಹೇಗಿರಬೇಕು, ಅದಕ್ಕಿರುವ ಅಗತ್ಯವಾದ ಶರತ್ತುಗಳೇನು ಎಂಬುದರ ಕುರಿತು ಸಲಹೆಗಳನ್ನು ಸಹ ನೀಡಿದರು. ಉತ್ತರಗಳನ್ನು ಬರೆಯಲು ನಿಯುಕ್ತಗೊಳಿಸುವ ಮೊದಲು ಅವನು ಬರೆದ ಹಿಂದಿನ ಗ್ರಂಥಗಳು ಎಷ್ಟೊಂದು ಮೌಲ್ಯಯುತವಾಗಿದ್ದವು ಎಂಬುದನ್ನು ಸಹ ನೋಡಬೇಕಾಗುವುದು. ಇಂತಹುದೇ ಕೆಲವು ಉಪಯುಕ್ತ ಸಲಹೆಗಳನ್ನು ಒಳಗೊಂಡ ಒಂದು ಗ್ರಂಥ 'ಅಲ್‌ಬಿಲಾಗ್ ಅಂಜುಮನ್ ಹಿಮಾಯತುಲ್ ಇಸ್ಲಾಮ್ ಮತ್ತು ಉಲಮಾಅಗಳಿಗೆ ಇತ್ತ ಗಮನಹರಿಸಲು ಬರೆದರು. ಈ ಗ್ರಂಥಧ ಇನ್ನೊಂದು ಹೆಸರು "ಫರ್ಯಾದೆ ದರ್ದ್" ಎಂದಾಗಿದೆ. ಅವರು ಹೇಳಿದರು. ಇದು ಹೃದಯದ ಅಂತರಾಳದಿಂದ ಬರೆದ ಗ್ರಂಥವಾಗಿದೆ. ಅದನ್ನು ಹಗುರವಾಗಿ ಪರಿಗಣಿಸಬೇಕು. ಅಂಜುಮನ್ ಹಿಮಾಯತುಲ್ ಇಸ್ಲಾಮ್ ಲಾಹೋರಿನ ಸ್ಥಾಪನೆಯು 1883 ರಲ್ಲಾಯಿತು. ಇದು ಹುಝೂರ್(ಅ) ಬರಾಹೀನ್ ಅಹ್ಮದಿಯಾದ ಮೂರು ಮೊದಲ ಸಂಪುಟಗಳನ್ನು ಬರೆದಿದ್ದ ಕಾಲದ ಮಾತಾಗಿದೆ. 4ನೇ ಸಂಪುಟ ಇನ್ನು ಬರೆಯಬೇಕಾಗಿತ್ತು. ಖಾಜಿ ಖಲೀಫ ಹಮೀದುದ್ದೀನ್ ಅಂಜುಮನಿನ ಸ್ಥಾಪಕರಾಗಿದ್ದರು ಮತ್ತು ಅವರೇ ಅದರ ಮೊದಲ ಅಧ್ಯಕ್ಷರಾಗಿದ್ದರು. ಹಾಜಿ ಮೀರ್ ಶಂಸುದ್ದೀನ್, ಖಾನ್ ನಜ್ಮುದ್ದೀನ್ ಮತ್ತು ಡಾ॥ ಮು. ದೀನ್ ನಾಝೀರ್ ಅವರುಗಳು ಅದರ ಪ್ರಮುಖ ಸದಸ್ಯರಾಗಿದ್ದರು. 1928 ರಿಂದ 1934 ರವರೆಗೆ ಡಾ॥ ಸರ್ ಮುಹಮ್ಮದ್ ಇಕ್ಬಾಲ್ ಅವರು ಸಹ ಅದರ ಅಧ್ಯಕ್ಷರಾಗಿದ್ದರು.

ಧರ್ಮದ ಪವಿತ್ರ ಕಾರ್ಯಗಳನ್ನು ಎತ್ತಿ ಹಿಡಿಯುವಂತಹ ಸಾಮರ್ಥ್ಯ ಪ್ರಸಕ್ತ ಅಂಜುಮನಿಗೆ ಇದ್ದಿರಲಿಲ್ಲ.

ಅಂಜುಮನಿನ ಕೆಲ ಮಾತುಗಳ ಕುರಿತು ಮತ್ತು ಅಂಜುಮನಿನ ಸ್ಥಿತಿಯ ಬಗ್ಗೆ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಈ ಕೆಳಗೆ ಪ್ರಸ್ತುತಪಡಿಸಲಿದ್ದೇವೆ. ಈ ಸಂಬಂಧ ನಾವು ಮೊದಲಾಗಿ ಪ್ರಸ್ತುತಪಡಿಸುವುದೇನೆಂದರೆ ಅಂಜುಮನ್ ತನ್ನ ಮೊದಲ ಕರ್ತವ್ಯ, ಮಾಡಲಾದ ಆರೋಪಗಳಿಗೆ ಉತ್ತರ ನೀಡುವ ಬದಲಿಗೆ ಅಂತಹ ಸೂಕ್ಷ್ಮ ಅವಸ್ಥೆಯಲ್ಲಿ ಕೇವಲ ದೂರು ನೀಡಿ ಮೌನವಹಿಸಿ ಕುಳಿತುಕೊಂಡಿದ್ದರು. ಇದು ಯಾವ ರೀತಿಯ ಜಾಣತನವಾಗಿದೆ? ವಾಸ್ತವದಲ್ಲಿ ಅದರ ಕಾರಣವೇನೆಂದರೆ ಅವರಲ್ಲಿ ಉತ್ತರ ನೀಡುವ ಸಾಮರ್ಥ್ಯವೇ ಇರಲಿಲ್ಲ.

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ.

ಮುಸಲ್ಮಾನರಿಂದ ಸಾವಿರಾರು ರೂಪಾಯಿಗಳನ್ನು ಧರ್ಮದ ವಿರೋಧಿಗಳ ಉತ್ತರವನ್ನು ನೀಡುವ ಸಲುವಾಗಿ ಸಂಗ್ರಹಿಸುತ್ತಾರೆ. ಆದರೆ ಅಂತಹ ಸಂದರ್ಭದಲ್ಲಿ ಕೇವಲ ಮೂರು ನಾಲ್ಕು ಪುಟದ ದೂರಾಧಾರಿತ ಅರ್ಜಿಯನ್ನು ಸರಕಾರಕ್ಕೆ ಸಲ್ಲಿಸಿ ಜನರಿಗೆ ನಾವು ಏನು ಮಾಡಬೇಕಾಗಿತ್ತು, ಅದನ್ನು ಮಾಡಿದೆವು ಎಂದು ನಂಬಿಸುತ್ತಾರೆ. ಆದರೆ ಸ್ವಯಂ ಅವರೇ ಜನರಿಗೆ ತಿಳಿಸಿಕೊಟ್ಟಿದ್ದರು. ನಮ್ಮ ಮೊದಲ ಉದ್ದೇಶವೇ ಸಮಯ ಸಮಯಕ್ಕೆ ವಿರೋಧಿಗಳಿಗೆ ಉತ್ತರವನ್ನು ನೀಡುವುದಾಗಿದೆ. ಅಂದಹಾಗೆ ಯಾರು ಎಂದಾದರೂ ಅವರ ಪತ್ರಿಕೆ, ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರೂ ನೋಡಿದವರಿಗೆ ಕಂಡಿರಬೇಕು, ಪತ್ರಿಕೆಯ ಮುಖಪುಟದಲ್ಲಿ ಈ ವಾಗ್ದಾನ ಬರೆದಿರುತ್ತಾರೆ. ನಾವು ಬೇಕಂತಲೇ ಅಂಜುಮನ್ ಅದನ್ನು ತಳ್ಳಿಹಾಕುತ್ತದೆ ಎಂದು ಹೇಳುವುದಿಲ್ಲ. ಆದರೆ ವಾಸ್ತವವೇನೆಂದರೆ ಅಂಜುಮನಿಗೆ ವಿರೋಧಿಗಳಿಗೆ ಉತ್ತರ ನೀಡುವಂತಹ ಅವರ ಬಾಯಿ ಮುಚ್ಚಿಸುವಂತಹ ಮತ್ತು ಅವರ ಶಂಕೆ ಅನುಮಾನಗಳನ್ನು ಆಕ್ಷೇಪಗಳನ್ನು ತಳ್ಳಿ ಹಾಕುವಂತಹ ಧರ್ಮಜ್ಞಾನ ಇಲ್ಲ. ಕ್ರೈಸ್ತರಿಂದ ಸುಮಾರು 60 ವರ್ಷಗಳ ಹಿಂದಿನಿಂದ ಆರೋಪಗಳ ಮೇಲೆ ಆರೋಪ ಬರುತ್ತಿವೆ. ನಮ್ಮ ವಿಷವನ್ನು ಹರಡಿಸುತ್ತಿದ್ದಾರೆ. ಆದೆರ ನಮ್ಮ ಯಾವ ಲೇಖಕರಿಂದಲೂ ಆ ವಿಷ ದೂರ ಮಾಡುವಂತಹ ಸಾಮರ್ಥ್ಯವಿಲ್ಲ. ಅಕಟಾಕಟ! ಧರ್ಮದಿಂದ ತಮ್ಮ ಸಂಬಂಧವೇ ಜೋಡಿಸುವಂತಹ ಮಾತು ಅಂಜುಮನ್ ಆಡದಿದ್ದರೆ ಒಳ್ಳೆಯದಿತ್ತು. ಏಕೆಂದರೆ ಅವರ ಬುದ್ಧಿಮಟ್ಟ ಕೇವಲ ರಾಜಕೀಯ ಚಲುರತೆಗೆ ಸೀಮಿತವಾಗಿದೆ. (ಅಲ್ ಬಿಲಾಗ್, ಫರ್ಯಾದ್ ದರ್ದ್, ರೂಹಾನಿ ಖಝಾಈನ್ ಸಂಪುಟ–13, ಪುಟ–376)

ನಮ್ಮ ಅಜ್ಞಾನತೆಯ ಹಾಗೂ ಅಸಮರ್ಥ್ಯತೆಯ ಕಾರಣ ಉತ್ತರ ನೀಡುವ ಧೈರ್ಯ ನಮಗಿಲ್ಲ ಎಂಬುದು ಅಂಜುಮನ್‌ನ ಒಪ್ಪಿಗೆ. 1889 ರಂದು ಓರ್ವ ಕ್ರೈಸ್ತ ಅಬ್ದುಲ್ ಜೇಮ್ ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್ ಅವರಿಗೆ ಇಸ್ಲಾಂ ಧರ್ಮದ ಬಗ್ಗೆ ಮೂರು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದರು. ಅಂಜುಮನ್ ಅದರ ಉತ್ತರಕ್ಕಾಗಿ ಈ ಪ್ರಶ್ನೆಗಳನ್ನು ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಮೌಲಾನ ಹಕೀಮ್ ನೂರುದ್ದೀನ್(ರ) ಮತ್ತು ಮೌಲ್ವಿ ಗುಲಾಂ ನಬಿ ಸಾಹಿಬ್ ಅಮೃತಸರ್ ಅವರುಗಳಿಗೆ ಕಳುಹಿಸಿದ್ದರು. ಅಂಜುಮನ್ ಆ ಮೂರು ಪ್ರಶ್ನೆಗಳ ಉತ್ತರವನ್ನು ಏಕಕಾಲಕ್ಕೆ ಮುದ್ರಿಸಿದರು ಮತ್ತು ಪೀಠಿಕೆಯಲ್ಲಿ ಬರೆದರು. "ಇಸ್ಲಾಂ ಧರ್ಮದ ಆ ನಿಷ್ಠಾವಂತ ಗುರುವಂತಿರುವ, ಅಲ್ಲಾಹನ ದಾಸರು ತಮ್ಮ ಅಪಾರ ಧರ್ಮಜ್ಞಾನ ಸಾಮರ್ಥ್ಯದಿಂದ, ಮಹಾನತೆಯಿಂದ, ತಮ್ಮ ಸಚ್ಚರಿತ್ರೆ ಇತ್ಯಾದಿ ಗುಣಗಳಿಂದ ಕೂಡಿದ ಕಾರಣದಿಂದಾಗಿ, ಒಂದು ಕಾಲದಲ್ಲಿ ಮುಸ್ಲಿಮರು ತಮ್ಮ ಅಪಾರ ಜ್ಞಾನದಿಂದಾಗಿ ಎಲ್ಲ ಸಮುದಾಯಗಳಿಗೆ ಗುರುಗಳಾಗಿದ್ದರು, ಇಂದು ಅವರ ಪೀಳಿಗೆಗಳೇ ಅಜ್ಞಾನಿಗಳಾಗಿ, ಅಸಹಾಯಕರಾಗಿ, ತಮ್ಮ ಸ್ವಧರ್ಮದ ತತ್ವಗಳಿಂದ ದೂರವಾಗಿದ್ದಾರೆ. ಅವರ ಈ ಅಜ್ಞಾನತೆಯಿಂದಾಗಿಯೇ ವಿಗ್ರಹಧಾರಿ ಸಮುದಾಯಗಳು, ಅವರ ಬಳಿ ಅವರ ಧರ್ಮದ ಯಾವ ಬೌದ್ಧಿಕವಾಗಲಿ, ಶೈಕ್ಷಣಿಕವಾಗಲ್ಲಿ ಪುರಾವೆಗಳಿಲ್ಲ. ಅಂತಹವರು ಇಂದು ಇಸ್ಲಾಮ್ ಧರ್ಮವನ್ನು ನಾಶಪಡಿಸಲು ಮುಂದಾಗಿವೆ. ನಮ್ಮಲ್ಲಿ ತಮ್ಮ ಶಿಕ್ಷಣದ ಕೊರತೆಯಿಂದ ಹಾಗೂ ಅಸಮರ್ಥತೆಯಿಂದ ಅವರಿಗೆ ಉತ್ತರ ನೀಡುವ ಧೈರ್ಯ ಇಲ್ಲವಾಗಿದೆ.

ದೂರು ನೀಡುವುದು ಒಂದು ಹೆಜ್ಜೆಯಾಗಿದೆ. ಪ್ರತಿ ಹೆಜ್ಜೆಗೂ ಎರಡು ಕಾರಣಗಳಿರುತ್ತವೆ. ಇದೀಗ ಯಾರಿಗೆ ಗೊತ್ತು, ಆ ಹೆಜ್ಜೆಗಳ ಪರಿಣಾಮ ಏನಾಗಬಹುದೆಂದು, ಬಹುಶಃ ನಿರಾಶೆ ಮತ್ತು ಅವಮಾನವೇ ದೊರೆಯಬಹುದು.

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಹೇಳುತ್ತಾರೆ.

ಇದು ಆವೇಶದಿಂದ ಬಾಯಿ ಮುಚ್ಚಿಸಿದಂತಾಗುವುದು, ಇಂತಹ ಅರ್ಜಿಗಳಿಂದ ಯಶಸ್ಸು ದೊರೆಯಬಹುದೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಎದುರಾಳಿಯ ಬಾಯಲ್ಲೂ ನಾಲಿಗೆಯಿರುತ್ತದೆ. ಈ ಕ್ರಮ ಕೇವಲ ಒಬ್ಬರ ಮೇಲೆ ಅಲ್ಲ, ಬದಲು ಇಡೀ ಕ್ರೈಸ್ತ ಸಮುದಾಯದ ಮೇಲಾಗಿದೆ ಎಂದು ಭಾವಿಸಿ ಅವರು ಎಲ್ಲ ಶಕ್ತಿಯಿಂದ ಹೋರಾಡಲು ಮುಂದಾಗುವರು. ಆಗ ಪರಿಣಾಮ ಏನಾಗಬಹುದೆಂದು ಹೇಳಲು ಸಾಧ್ಯವಿಲ್ಲ. ಬಹುಶಃ ನಿರಾಶೆ ಮತ್ತು ಅವಮಾನವು ಎದುರಾಗಬಹುದು. ಅದರಿಂದ ಸ್ಪಷ್ಟವಿದೆ, ದೂರು ನೀಡುವುದು ಒಂದು ಹೆಜ್ಜೆ ಮಾತ್ರವಾಗಿದೆ, ಪ್ರತಿ ಹೆಜ್ಜೆಗೆ ಎರಡು ಕಾರಣಗಳಿರುತ್ತವೆ. ಇದೀಗ ಯಾರಿಗೆ ಗೊತ್ತು, ಪರಿಣಾಮ ಏನಾಗಬಹುದೆಂದು. (ಅಲ್ ಬಿಲಾಗ್, ಫರ್ಯಾದ್ ದರ್ದ್, ರೂಹಾನಿ ಖಝಾಈನ್, ಸಂಪುಟ–13 ಪುಟ–380)

ಈ ದೂರಿನಿಂದಾಗಿ ಅಂಜುಮನಿಗೆ ಯಾವ ರೀತಿಯ ಯಶಸ್ಸು ದೊರಕಬಹುದು ಎಂದು ನಾವು ಕಾಯುತ್ತಿದ್ದೆವು.

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಾವು ಒತ್ತಿ ಹೇಳಬಲ್ಲೆವು ಅಂಜುಮನ್ ಇಟ್ಟಂತಹ ಹೆಜ್ಜೆ ನಮ್ಮ ಒಡೆಯನಾದ, ಪರಿಪಾಲಕನಾದ ಅಲ್ಲಾಹನ ಇಚ್ಛೆಗೆ ಅನುಗುಣವಾಗಿಲ್ಲ. ಅದು ಪವಿತ್ರ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಖಿಲಾಫತ್‌ನ ಅನುಗ್ರಹಗಳಲ್ಲಿ ಒಂದು ಶರೀಅತ್‌ನ ಸ್ಥಾಪನೆಗೆ ಶ್ರಮಿಸಬೇಕು ಮತ್ತು ಖಲೀಫರು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಎಷ್ಟರ ಮಟ್ಟಿಗೆ ಪ್ರವಾದಿ(ಸ) ಆಜ್ಞೆಗಳ ಅನುಸರಣೆಯಲ್ಲಿ ವಿಧೇಯರಾಗಿದ್ದರು ಎಂದರೆ ಅಪಾಯಕಾರಿ ಸಂದರ್ಭಗಳಲ್ಲಿಯೂ ಸಹ ಶ್ರೇಷ್ಠ ಸಹಾಬರವರು ಯುದ್ಧದ ವಿರುದ್ಧ ಸಲಹೆ ನೀಡುತ್ತಾರೆ ಆದರೂ, ಪವಿತ್ರ ಪ್ರವಾದಿ(ಸ) ರ ಆದೇಶವನ್ನು ನಿರ್ವಹಿಸಲು ಅವರು ಯಾವುದೇ ರೀತಿಯ ಅಪಾಯವನ್ನು ಸಹಿಸಿಕೊಳ್ಳಲು ಸಿದ್ಧರಾಗಿದ್ದಾರೆ.**

**ಈಗಿರುವ ಯುದ್ಧದ ಸ್ಥಿತಿ ಹಾಗೂ ಅಣ್ವಸ್ತ್ರ ಯುದ್ಧದ ಬೆದರಿಕೆಯ ನಿಟ್ಟಿನಲ್ಲಿ ದರೂದೆ ಷರೀಫ್, ಇಸ್ತಿಗ್‌ಫಾರ್ ಹಾಗೂ ದುಆಗಳು ಬಹಳವಾಗಿ ಮಾಡಲು ಕೋರಿಕೆ**

**ಕೆನೆಡದ ಜಾಮಿಯಾದ ಪ್ರಾಂಶುಪಾಲರು ಹಾಗೂ ಮಾಜಿ ಮುಬಲ್ಲಿಗ್ ಇಂಚಾರ್ಜ್ ಕೆನೆಡರಾದ ಸನ್ಮಾನ್ಯ ಮೌಲಾನ ಮುಬಾರಕ್ ನದೀರ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–03–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಹಝ್ರತ್ ಅಬೂಬಕರ್(ರ)ರ ಜೀವಿತದ ಪ್ರಸ್ತಾಪದಲ್ಲಿ ಝಕಾತ್ ನೀಡುವುದನ್ನು ನಿರಾಕರಿಸಿದವರ ಕುರಿತು ಹಝ್ರತ್ ಅಬೂಬಕರ್(ರ)ರ ಅಭಿಪ್ರಾಯಗಳು ಮತ್ತು ಅಂಥವರೊಂದಿಗೆ ಅವರ ವರ್ತನೆಯ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಇದರ ಬಗ್ಗೆ ಹೆಚ್ಚಿನ ವಿವರಣೆ ತಾರೀಖ್ ತಬರಿಯಲ್ಲಿ ವರದಿಯಾಗಿದೆ. ಕೆಲವು ಜನರನ್ನು ಹೊರತುಪಡಿಸಿ ಅಸದ್, ಗ಼ತ್‌ಫಾನ್ ಮತ್ತು ತೈ ಗೋತ್ರದ ಎಲ್ಲರೂ ಸುಳ್ಳು ಪ್ರವಾದಿಯಾದ ತುಲೈಹ ಬಿನ್ ಖುವೈಲದ್‌ರ ಜೊತೆಗೆ ಒಟ್ಟುಸೇರಿದರು. ಅಸದ್ ಗೋತ್ರದವರು ಸಮೀರ ಎಂಬ ಪ್ರದೇಶದಲ್ಲಿ ಒಟ್ಟುಗೂಡಿದರು. ಆದ್ ಗೋತ್ರದ ಒಬ್ಬ ವ್ಯಕ್ತಿಯ ಹೆಸರಲ್ಲಿ ಈ ಪ್ರದೇಶಕ್ಕೆ ಸಮೀರ ಎಂದು ನಾಮಕರಣ ಮಾಡಲಾಗಿತ್ತು. ಇದು ಮಕ್ಕದ ಮಾರ್ಗದಲ್ಲಿರುವ ಒಂದು ಸಮುದಾಯವಾಗಿದೆ. ಈ ಪ್ರದೇಶದ ಸುತ್ತಮುತ್ತ ಕಪ್ಪುಬಣ್ಣದ ಪರ್ವತಗಳು ಇವೆ. ಫಝ಼ಾರ ಮತ್ತು ಗ಼ತ್‌ಫಾನಿನ ಜನರು ತಮ್ಮ ಸಹಾಯಕರೊಂದಿಗೆ ತೇವ ಎಂಬ ಪ್ರದೇಶದ ದಕ್ಷಿಣ ಭಾಗದಲ್ಲಿ ಒಟ್ಟುಗೂಡಿದರು. ತೈ ಗೋತ್ರದವರು ತಮ್ಮ ಪ್ರದೇಶದ ಗಡಿಯಲ್ಲಿ ಒಟ್ಟುಗೂಡಿದರು. ಸಅ್‌ಲಬ ಬಿನ್ ಸಅದ್, ಮುರ್ರ ಮತ್ತು ಅಬಸ್‌ನಿಂದ ಅವರ ಸಹಾಯಕ ಸೈನ್ಯ ರಬ್‌ಝದ ಅಬ್‌ರಖ್ ಎಂಬ ಪ್ರದೇಶದಲ್ಲಿ ಒಟ್ಟುಸೇರಿದರು. ರಬ್‌ಝ ಎಂಬುದು ಮದೀನದ ಒಂದು ಕಣಿವೆಯಾಗಿದೆ. ಅಬ್ರಖುರ್ರಬಝ ಗೋತ್ರವು ಬನೂ ಝುಬ್ಯಾನ್‌ದಿಂದ ಇದ್ದರು. ಬನೂ ಕಿನಾನದ ಕೆಲವು ಜನರು ಸಹ ಅವರೊಂದಿಗೆ ಬಂದು ಸೇರಿದರು ಆದರೆ ಆಪ್ರದೇಶಗಳ ಅವರಿಗೆ ಸೂಕ್ತವಾಗಲಿಲ್ಲ ಆದ್ದರಿಂದ ಆ ಜನರು ಎರಡು ಸಂಘಗಳಾಗಿ ವಿಭಜನೆಗೊಂಡರು. ಒಂದು ಸಂಘ ಅಬ್ರಖ್‌ಸಲ್ಲಿ ತಂಗಿದರು ಇನ್ನೊಂದು ಝುಲ್‌ಖಿಸ್ಸಕ್ಕೆ ಸೇರಿಕೊಂಡಿತು. ಝುಲ್ ಖಿಸ್ಸವು ಸಹ ಮದೀನದಿಂದ ನಲವತ್ತು ಮೈಲ ದೂರದ ಒಂದು ಪ್ರದೇಶವಾಗಿದೆ. ತುಲೈಹದವರು ಹಿಬಾಲ್‌ಗೆ ಅವರ ಸಹಾಯಕ್ಕಾಗಿ ಕಳುಹಿಸಿದರು. ಹಬಾಲ್ ತುಲೈಹನ ಸೋದರಳಿಯ ಆಗಿದ್ದನು. ಏನೇ ಇರಲಿ ಹೀಗೆ ಹಿಬಾಲ್ ಝುಲ್‌ಖಿಸ್ಸದ ಜನರಿಗೆ ಸರದಾರನಾದನು ಅಲ್ಲಿ ಅಸದ್, ಲೈಸ್, ದೀಲ್ ಹಾಗೂ ಮುದ್ಲಿಜ್ ಗೋತ್ರಗಳಲ್ಲಿ ಅವರ ಬೆಂಬಲಿಗರಿದ್ದರು. ಔಫ್ ಬಿನ್ ಫುಲಾನ್ ಬಿನ್ ಸಿನಾನ್, ಅಬ್ರಖ್ ಪ್ರದೇಶದಲ್ಲಿದ್ದ ಮುರ್ರ ಗೋತ್ರದ ಸರದಾರನಾದನು ಮತ್ತು ಸಲಬ ಮತ್ತು ಅಬ್ಸ್ ಗೋತ್ರದ ಮೇಲೆ ಹಾರಿಸ್ ಬಿನ್ ಫುಲಾನ್‌ನನ್ನು ಸರದಾರನನ್ನಾಗಿ ನೇಮಿಸಿದರು ಅವರು ಬನೂ ಸುಬೈದಿಂದ ಇದ್ದರು. ಈ ಗೋತ್ರಗಳು ತಮ್ಮ ಕಡೆಯಿಂದ ಮದೀನಕ್ಕೆ ತಂಡಗಳನ್ನು ಕಳುಹಿಸಿದರು. ಇವರೆಲ್ಲರು ಒಂದು ಕೆಡೆ ಸೇರಿ ತಮ್ಮ ತಮ್ಮ ಕಡೆಯಿಂದ ಒಂದೊಂದು ತಂಡವನ್ನು ರಚಿಸಿ ಕಳುಹಿಸಿದರು. ಹೇಗಿದ್ದರೂ ಹಝ್ರತ್ ಅಬ್ಬಾಸ್ ಹೊರತುಪಡಿಸಿ ಎಲ್ಲರೂ ಅವರನ್ನು ತಮ್ಮ ಅತಿಥಿಗಳನ್ನಾಗಿ ಮಾಡಿದರು. ಅವರು ಝಕಾತ್ ನೀಡದಿದ್ದರೂ ನಮಾಝ್ ನಿರ್ವಹಿಸುವರು ಎಂಬ ಶರತ್ತಿನೊಂದಿಗೆ ಅವರನ್ನು ಹಝ್ರತ್ ಅಬೂಬಕರ್(ರ)ರ ಸನ್ನಿಧಿಗೆ ತರಲಾಯಿತು. ಅಲ್ಲಾಹನು ಹಝ್ರತ್ ಅಬೂಬಕರ್(ರ)ರನ್ನು ಸತ್ಯದಲ್ಲಿ ದೃಢವಾಗಿ ನಿಲ್ಲಿಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಒಂಟೆಯನ್ನು ಕಟ್ಟುವ ಹಗ್ಗವನ್ನು ಝಕಾತಾಗಿ ಕೊಡದಿದ್ದರು ಕೂಡ ನಾನು ಅಂಥವರೊಡನೆ ಜಿಹಾದ್ ಮಾಡುವೆನು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–254–255, 11 ಹಿಜರಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–434 ಅಡಿಟಿಪ್ಪಣಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಮುಜಮುಲ್ ಬಲದಾನ್, ಸಂಪುಟ–3, ಪುಟ–290, 67, ಸಂಪುಟ–1, ಪುಟ–89, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಫರ್ಹಂಗ್ ಸೀರತ್, ಪುಟ–236, ಝುವಾರ ಅಕಾಡಮಿ ಪಬ್ಲಿಕೇಷನ್ಸ್ ಕರಾಚಿ 2003)

ಹಝ್ರತ್ ಅಬೂಬಕರ್(ರ)ರ ನಿಲುವನ್ನು ನೋಡಿಕೊಂಡು ಝಕಾತ್ ನಿರಾಕರಿಸಿದವರ ಸಂಘಗಳು ಮರಳಿ ಹೋಗುವಾಗ ಅವರ ಅವಸ್ಥೆ ಏನಾಗಿತ್ತು ಎಂಬುದರ ಬಗ್ಗೆ ಒಬ್ಬ ಚರಿತ್ರೆಗಾರನು ಹೀಗೆ ಬರೆಯುತ್ತಾರೆ: ಆ ಸಂಘಗಳು ಹಝ್ರತ್ ಅಬೂಬಕರ್(ರ)ರ ದೃಢನಿರ್ಧಾರವನ್ನು ನೋಡಿದಾಗ ಮದೀನಕ್ಕೆ ಮರಳಿ ಹೋದರು. ಆದರೆ ಮದೀನದಿಂದ ಹೊರಡುವಾಗ ಎರಡು ಸಂಗತಿಗಳು ಅವರ ಮನಸ್ಸಲ್ಲಿ ಇದ್ದುವು. ಒಂದು, ಝಕಾತ್ ನಿರಾಕರಣೆಯ ವಿಷಯದಲ್ಲಿ ಯಾವುದೇ ಮಾತುಕತೆ ಪ್ರಯೋಜನಕಾರಿಯಲ್ಲ, ಈ ವಿಷಯವಾಗಿ ಇಸ್ಲಾಮಿನ ಆದೇಶ ಸ್ಪಷ್ಟವಾದುದಾಗಿದೆ ಮತ್ತು ಖ಼ಲೀಫರ ಸ್ವಂತ ಅಭಿಪ್ರಾಯ ಮತ್ತು ದೃಢನಿರ್ಧಾರದಿಂದ ಹಿಂದೆ ಸರಿಯುವ ಯಾವುದೇ ಪ್ರತೀಕ್ಷೆ ಕಾಣುತ್ತಿಲ್ಲ. ವಿಶೇಷವಾಗಿ ಮುಸ್ಲಿಮರಿಗೆ ಈ ವಿಷಯ ಸ್ಪಷ್ಟವಾಗಿ ಗೊತ್ತಾದ ನಂತರ ಅವರು ಹಝ್ರತ್ ಅಬೂಬಕರ್(ರ)ರ ಅಭಿಪ್ರಾಯದೊಂದಿಗೆ ಒಮ್ಮತ ಹೊಂದಿರುವರು ಮತ್ತು ಮುಸ್ಲಿಮರು ಹಝ್ರತ್ ಅಬೂಬಕರ್(ರ)ರ ನೆರವಿಗಾಗಿ ತಯಾರಾಗಿ ನಿಂತಿರುವರು. ಆದ್ದರಿಂದ ಎರಡನೆಯದಾಗಿ ಅವರ ಮನಸ್ಸಿನಲ್ಲಿ ಇದ್ದ ಸಂಗತಿಯೇನೆಂದರೆ, ಮುಸ್ಲಿಮರ ದೌರ್ಬಲ್ಯ ಮತ್ತು ಮುಸ್ಲಿಮರು ಈಗ ಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಲಾಭ ಪಡೆಯುತ್ತಾ ಇಸ್ಲಾಮಿನ ಆಡಳಿತ ಉರುಳಿ ಬೀಳುವ ರೀತಿಯಲ್ಲಿ ಶಕ್ತವಾದ ದಾಳಿ ನಡೆಸಿದರೆ ಇಸ್ಲಾಂ ಧರ್ಮ ಕೊನೆಗೊಳ್ಳುವುದು. (ಸಯ್ಯದುನಾ ಅಬೂಬಕರ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲಿ ಮುಹಮ್ಮದ್ ಸಲಾಬಿ, ಪುಟ–278, ಅಲ್‌ಫುರ್ಖಾನ್ ಮುಝಫರ್ ಗಡ್ ಪಾಕಿಸ್ತಾನ್)

ಇದು ಅವರ ಭಾವನೆಯಾಗಿತ್ತು. ಈ ರೀತಿಯಾಗಿ ಮುಸ್ಲಿಮರನ್ನು ವಶಪಡಿಸಬಹುದು ಎಂದು ಅವರು ಭಾವಿಸಿದ್ದರು. ಹೇಗಿದ್ದರೂ ಆ ಸಂಘ ಮದೀನದಿಂದ ಮರಳಿ ಹೋಗಿ ತಮ್ಮ ತಮ್ಮ ಗೋತ್ರಗಳೊಡನೆ ಹೇಳಿದರು: ಈಗ ಮದೀನದಲ್ಲಿ ಬಹಳ ಕಡಿಮೆ ಜನರು ಇರುವರು. ಆದ್ದರಿಂದ ಅವರ ಮೇಲೆ ದಾಳಿ ನಡೆಸಬೇಕು. ಈ ರೀತಿಯಾಗಿ ಗೋತ್ರದವರನ್ನು ಹುರಿದುಂಬಿಸಿದರು. ಮತ್ತೊಂದೆಡೆ ಹಝ್ರತ್ ಅಬೂಬಕರ್(ರ) ಸಹ ಅಜಾಗರೂಕರಾಗಿರಲಿಲ್ಲ. ಆ ಸಂಘ ಮರಳಿ ಹೋದ ನಂತರ ಮದೀನದ ಎಲ್ಲ ಮೂಲೆಗಳಲ್ಲಿ ಅವರು ಕಾವಲುಗಾರರನ್ನು ನಿಶ್ಚಯಿಸಿದರು. ಹಝ್ರತ್ ಅಲಿ, ಹಝ್ರತ್ ಝುಬೇರ್, ಹಝ್ರತ್ ತಲ್‌ಹ ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಈ ಕೆಲಸಕ್ಕಾಗಿ ನಿಶ್ಚಯಿಸಲ್ಪಟ್ಟರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಸಹ ಕಾವಲುಗಾರರ ಮೇಲ್ನೋಟದ ಕೆಲಸಕ್ಕಾಗಿ ನಿಶ್ಚಯಿಸಲ್ಪಟ್ಟಿದ್ದರು ಎಂದು ಮತ್ತೊಂದು ವರದಿಯಲ್ಲಿ ಇದೆ. ಇದಲ್ಲದೇ ಹಝ್ರತ್ ಅಬೂಬಕರ್(ರ) ಮದೀನದ ನಿವಾಸಿಗಳಾದ ಎಲ್ಲರೊಡನೆ ಮಸೀದಿಯಲ್ಲಿ ಒಟ್ಟುಗೂಡಲು ಆದೇಶ ನೀಡಿದರು. ಅನಂತರ ಅವರೊಡನೆ ಹೇಳಿದರು: ಸಂಪೂರ್ಣ ಪ್ರದೇಶದವರು ಸತ್ಯನಿಷೇಧಿಗಳಾಗಿದ್ದಾರೆ. ನೀವು ಕಡಿಮೆ ಸಂಖ್ಯೆಯಲ್ಲಿ ಇರುವುದನ್ನು ಆ ಸಂಘದ ಜನರು ಕಂಡಿರುವರು. ಅವರು ಬೆಳಿಗ್ಗೆ ಅಥವಾ ರಾತ್ರಿಯಲ್ಲಿ ಯಾವಾಗ ನಿಮ್ಮ ಮೇಲೆ ದಾಳಿ ನಡೆಸುವರು ನಿಮಗೆ

ಗೊತ್ತಿಲ್ಲ. ಅವರಲ್ಲಿ ಅತ್ಯಂತ ಸಮೀಪದ ಸಂಘವು ಇಲ್ಲಿಂದ ಕೇವಲ 12 ಮೈಲುಗಳ ದೂರದಲ್ಲಿದೆ. ಅವರ ಶರತ್ತುಗಳನ್ನು ನಾವು ಅಂಗೀಕರಿಸಬೇಕೆಂದೂ ಅವರೊಂದಿಗೆ ರಾಜಿಮಾಡಿಕೊಳ್ಳಬೇಕೆಂದೂ ಅವರಲ್ಲಿ ಕೆಲವರು ಬಯಸುತ್ತಿದ್ದಾರೆ. ಆದರೆ ನಾವು ಅವರ ಮಾತನ್ನು ಅಂಗೀಕರಿಸಲಿಲ್ಲ. ಅವರ ನಿಬಂಧನೆಗಳನ್ನು ರದ್ದುಗೊಳಿಸಿದೆವು. ಆದ್ದರಿಂದ ಹೋರಾಟಕ್ಕಾಗಿ ಸಂಪೂರ್ಣವಾಗಿ ತಯಾರಾಗಿರಿ. ಹಝ್ರತ್ ಅಬೂಬಕರ್(ರ) ಅಂದಾಜು ಮಾಡಿದ್ದು ಪೂರ್ಣವಾಗಿ ಸರಿಯಾಗಿತ್ತು. ಮೂರು ರಾತ್ರಿಗಳು ದಾಟಿ ಹೋಗುವಷ್ಟರಲ್ಲಿ ಝಕಾತ್ ನೀಡಲು ನಿರಾಕರಿಸಿದವರು ಮದೀನದ ಮೇಲೆ ಹಲ್ಲೆ ನಡೆಸಿದರು.

ಅವರು ತಮ್ಮ ಸಂಗಡಿಗರಲ್ಲಿ ಒಂದು ಗುಂಪನ್ನು ಝುಹಿಸಾ ಎಂಬ ಪ್ರದೇಶದಲ್ಲಿ ಬಿಟ್ಟಿದ್ದರು ಇದರಿಂದಾಗಿ ಇವರಿಗೆ ಅಗತ್ಯವಿದ್ದಾಗ ಅವರಿಗೆ ಸಹಾಯ ಮಾಡಬಹುದು ಎಂದು. ಝುಹಿಸ ಬನು ಫುರ್ಯಾರರವರ ನೀರಿನಲ್ಲಿ ಒಂದಾಗಿದೆ ಮತ್ತು ಇದು ರಬರ್ಝಾ ಮತ್ತು ನಖ್ಲ್ ನಡುವೆ ಇದೆ. ಆದಾಗ್ಯೂ, ಈ ದಾಳಿಕೋರರು ರಾತ್ರಿ ಮದೀನಾದ ಹೊರವಲಯವನ್ನು ತಲುಪಿದರು. ಆಗಲೇ ಅಲ್ಲಿ ಹೋರಾಟಗಾರರು ಬೀಡುಬಿಟ್ಟಿದ್ದರು. ಅವರ ಹಿಂದೆ ಇನ್ನೂ ಕೆಲವರು ಎತ್ತರಕ್ಕೆ ಏರುತ್ತಿದ್ದರು. ಕಾವಲುಗಾರರು ಶತ್ರುಗಳ ದಾಳಿಯ ಬಗ್ಗೆ ಎಚ್ಚರಿಸಿದರು ಮತ್ತು ಶತ್ರುಗಳ ಮುನ್ನಡೆಯ ಬಗ್ಗೆ ತಿಳಿಸಲು ಅಬುಬಕರ್(ರ) ಅವರ ಬಳಿ ಜನರನ್ನು ಕಳುಹಿಸಿದರು. ಹಝ್ರತ್ ಅಬೂಬಕರ್(ರ) ಅವರು ತಮ್ಮ ಸ್ಥಳದಲ್ಲಿ ಎಲ್ಲರೂ ಇರಬೇಕೆಂದು ಸಂದೇಶವನ್ನು ಕಳುಹಿಸಿದರು ಮತ್ತು ಎಲ್ಲಾ ಸೈನ್ಯವು ಹಾಗೆಯೇ ಅನುಸರಿಸಿತು. ತದನಂತರ ಹಝ್ರತ್ ಅಬೂಬಕರ್(ರ) ಅವರು ಮಸೀದಿಯಲ್ಲಿದ್ದ ಮುಸ್ಲಿಮರನ್ನು ಕರೆದುಕೊಂಡು ಒಂಟೆಗಳ ಮೇಲೆ ಅವರ ಕಡೆಗೆ ಸಾಗಿದರು ಮತ್ತು ಶತ್ರುಗಳು ಹಿಮ್ಮೆಟ್ಟಿದರು. ಅವರು ಧುಹಿಸ ತಲುಪುವವರೆಗೂ ಮುಸ್ಲಿಮರು ತಮ್ಮ ಒಂಟೆಗಳ ಮೇಲೆ ಅವರನ್ನು ಹಿಂಬಾಲಿಸಿದರು. ಮುಸಲ್ಮಾನರ ಗುಂಪಿನ ನೆರವಿನೊಂದಿಗೆ ದಾಳಿಕೋರರ ಗುಂಪೊಂದು ತಮ್ಮ ಚರ್ಮದ ನೀರಿನ ಬೊಗ್ಗಸೆಗಳಲ್ಲಿ ಗಾಳಿ ತುಂಬಿ ಅದಕ್ಕೆ ಹಗ್ಗಗಳನ್ನು ಕಟ್ಟಿಕೊಂಡು ಮುಸಲ್ಮಾನರ ವಿರುದ್ಧ ಹೋರಾಡಲು ಮುಂದಾದರು. ಹೀಗೆ ಬೊಗ್ಗಸೆಗಳನ್ನು ಕಟ್ಟಿಕೊಂಡು ಮುಂದೆ ಬಂದರೆ ಒಂಟೆಗಳು ಬಹ ಹೆದರುತ್ತವೆ, ಅಂದರೆ ಯಾವುದೋ ವಸ್ತು ಉರುಳಿ ಬರುತ್ತಿದೆ ಎಂದು. ಹೀಗೆ ಮುಸಲ್ಮಾನರ ಒಂಟೆಗಳೆಲ್ಲ ಅದನ್ನು ಕಂಡು ಹೆದರಿ ಓಡಿ ಹೋದವು. ಅವರು ಮದೀನಾ ತಲುಪುವವರೆಗೂ ತಮ್ಮ ಮೇಲೆ ಸವಾರಿ ಮಾಡುತ್ತಿದ್ದ ಮುಸ್ಲಿಮರನ್ನು ಅವರನ್ನು ನಿರ್ವಹಿಸಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಇದರಿಂದ ಮುಸ್ಲಿಮರಿಗೆ ಯಾವುದೇ ಹಾನಿ ಉಂಟಾಗಲಿಲ್ಲ ಮತ್ತು ಇದರಿಂದ ಯಾವ ವಸ್ತು ಸಹ ಕೈಗೆ ಸಿಗಲಿಲ್ಲ.

ಮುಸ್ಲಿಮರ ಈ ಸ್ಪಷ್ಟ ಹಿಮ್ಮೆಟ್ಟುವಿಕೆಯು ಮುಸ್ಲಿಮರು ದುರ್ಬಲರು ಮತ್ತು ಸ್ಪರ್ಧಿಸುವ ಶಕ್ತಿಯನ್ನು ಹೊಂದಿಲ್ಲ ಎಂದು ಶತ್ರುಗಳು ಭಾವಿಸುವಂತೆ ಮಾಡಿತು. ಈ ಭ್ರಮೆಯಲ್ಲಿ ಅವನು ಝು ಕುಸ್ಸದಲ್ಲಿದ್ದ ತನ್ನ ಸಹಚರರಿಗೆ ಘಟನೆಯನ್ನು ವರದಿ ಮಾಡಿದರು, ಅವರು ಈ ಸುದ್ದಿಯನ್ನು ನಂಬಿ ಈ ಗುಂಪಿಗೆ ಬಂದು ಸೇರಿದರು, ಆದರೆ ಅವರ ಬಗ್ಗೆ ಅಲ್ಲಾಹನು ಬೇರೆ ಏನೊ ನಿರ್ಧರಿಸಿದ್ದಾರೆಂದು ಅವರಿಗೆ ತಿಳಿದಿರಲಿಲ್ಲ. ಅಲ್ಲಾಹನು ಅದನ್ನು ಜಾರಿಗೊಳಿಸುವನು. ರಾತ್ರಿಯಿಡೀ ಹಝ್ರತ್ ಅಬೂಬಕರ್(ರ) ಅವರು ತಮ್ಮ ಸೈನ್ಯವನ್ನು ಸಿದ್ಧಪಡಿಸುವಲ್ಲಿ ನಿರತರಾಗಿದ್ದರು ಮತ್ತು ಅವರೆಲ್ಲರನ್ನೂ ಸಿದ್ಧಪಡಿಸಿದ ನಂತರ ಅವರು ಇಡೀ ಸೈನ್ಯವನ್ನು ಸಂಘಟಿಸಿ ಕಾಲ್ನಡಿಗೆಯಲ್ಲಿ ಹೊರಟರು. ನುಮಾನ್ ಇಬ್ನ್ ಮುಖ್ರಿನ್ ಮೈಮನ, ಅಬ್ದುಲ್ಲಾ ಇಬ್ನ್ ಮುಖ್ರಿನ್ ಮಯ್ಸಾರ ಮತ್ತು ಸುವೈದ್ ಇಬ್ನ್ ಮುಖ್ರಿನ್ ಸೈನ್ಯದ ಹಿಂಭಾಗದ ಉಸ್ತುವಾರಿ ವಹಿಸಿದ್ದರು. ಅವರ ಜೊತೆಯಲ್ಲಿ ಒಂದಷ್ಟು ಸವಾರರು ಬಂದಿದ್ದರು. ಇನ್ನೂ ಫಜರ್ ಆಗಿರಲಿಲ್ಲ ಮುಸ್ಲಿಮರು ಮತ್ತು ಝಕಾತ್ ನಿರಾಕರಿಸುವವರು ಒಂದೇ ಮೈದಾನದಲ್ಲಿ ಸೇರಿದ್ದರು. ಅವರಿಗೆ ಮುಸ್ಲಿಮರು ಬರುವರು ಎಂದು ಪಿಸುಮಾತು ಸಿಕ್ಕಿರಲಿಲ್ಲ ಅಷ್ಟರಲ್ಲಿ ಮುಸ್ಲಿಮರು ಅವರನ್ನು ತಮ್ಮ ಕತ್ತಿಗಳಿಂದ ಕಡಿಯತೊಡಗಿದರು. ಹೀಗೆ ಮಧ್ಯರಾತ್ರಿಯಲ್ಲಿ ಯುದ್ಧ ನಡೆಯಿತು.

ಸೂರ್ಯನ ಕಿರಣಗಳು ಇನ್ನೂ ತನ್ನ ಪ್ರಕಾಶದಿಂದ ದಿಗಂತವನ್ನು ಬೆಳಗಿಸಿರಲಿಲ್ಲ, ಝಕಾತ್ ನಿರಾಕರಿಸುವವರು ಸೋಲಿಸಲ್ಪಟ್ಟರು ಮತ್ತು ಅಲ್ಲಿಂದ ಓಡಿಹೋದರು.

ತದನಂತರ ಮುಸ್ಲಿಮರು ಅವರ ಎಲ್ಲಾ ಪ್ರಾಣಿಗಳನ್ನು ಸ್ವಾಧೀನಪಡಿಸಿಕೊಂಡರು ಎಂದು ಬರೆಯಲಾಗಿದೆ. ಈ ಘಟನೆಯಲ್ಲಿ ಹಿಬಾಲ್ ಮೃತಪಟ್ಟನು. ಹಝ್ರತ್ ಅಬೂಬಕರ್(ರ) ಅವರು ಝುಲ್-ಕಸ್ಸಾ ತಲುಪುವವರೆಗೂ ಅವರನ್ನು ಹಿಂಬಾಲಿಸಿದರು. ಇದು ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ನೀಡಿದ ಮೊದಲ ವಿಜಯವಾಗಿದೆ. ಹಝ್ರತ್ ಅಬುಬಕರ್(ರ) ಕೆಲವು ಜನರೊಂದಿಗೆ ನುಮಾನ್ ಇಬ್ನ್ ಮುಕ್ರಿನ್ ಅವರನ್ನು ಅಲ್ಲಿಯೇ ನೇಮಿಸಿದರು ಮತ್ತು ಸ್ವತಃ ಮದೀನಾಕ್ಕೆ ಮರಳಿದರು. ಇದು ತಾರೀಖ್ ಅತ್ತಬರಿಯ ಉಲ್ಲೇಖವಾಗಿದೆ." (ತಾರೀಖ್ ಅತ್ತಬರಿ, ಸಂಪುಟ-2, ಪುಟ-255-256, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2012) (ಅಲ್‌ಬಿದಾಯ ವನ್ನಹಾಯ, ಸಂಪುಟ-3, ಭಾಗ-6, ಪುಟ-308, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಮುಜಮುಲ್ ಬಲದಾನ್, ಸಂಪುಟ-2, ಪುಟ-297)

ಓರ್ವ ಲೇಖಕ ಈ ಯುದ್ಧವನ್ನು ಬದ್ರ್ ಯುದ್ಧದೊಂದಿಗೆ ಹೋಲಿಸಿ ಬರೆಯುತ್ತಾರೆ: ಈ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಪ್ರಕಟಿಸಿದ ನಂಬಿಕೆ, ದೃಢವಿಶ್ವಾಸ, ದೃಢನಿರ್ಧಾರ ಮತ್ತು ಸ್ಥೈರ್ಯದ ಕಾರಣದಿಂದ ಮುಸ್ಲಿಮರ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲಘಟ್ಟದ ಯುದ್ಧಗಳ ನೆನಪು ತಾಜಾಗೊಂಡಿತು.

ಅಬೂಬಕರ್(ರ) ರವರ ಕಾಲಘಟ್ಟದ ಈ ಮೊದಲ ಯುದ್ಧವು ಬದ್ರ್ ಯುದ್ಧವನ್ನು ಹೋಲುತ್ತದೆ. ಬದ್ರ್ ಯುದ್ಧದ ದಿನದಂದು, ಮುಸ್ಲಿಮರು ಕೇವಲ ಮುನ್ನೂರು ಹದಿಮೂರು ಮಂದಿಯಾಗಿದ್ದರೆ, ಮೆಕ್ಕಾದಲ್ಲಿ ಬಹುದೇವತಾವಾದಿಗಳ ಸಂಖ್ಯೆ ಸಾವಿರಕ್ಕಿಂತ ಹೆಚ್ಚಿತ್ತು. ಹಝ್ರತ್ ಅಬೂಬಕ್ಕರ್(ರ) ಜೊತೆಗಿನ ವಿರೋಧಿಗಳೊಂದಿಗೆ ಯುದ್ಧದ ಈ ಘಟನೆಯ ಸಮಯದಲ್ಲೂ ಮುಸ್ಲಿಮರ ಸಂಖ್ಯೆ ಬಹಳ ಕಡಿಮೆ ಇತ್ತು, ಇದಕ್ಕೆ ವಿರುದ್ಧವಾಗಿ, ಅಬ್ಸ್, ಝುಬಿಯಾನ್ ಮತ್ತು ಗತ್ಫಾನ್ ಗೋತ್ರಗಳು ದೊಡ್ಡ ಗುಂಪಿನೊಂದಿಗೆ ಮುಸ್ಲಿಮರ ಮೇಲೆ ದಾಳಿ ಮಾಡಿದರು. ಬದ್ರ್ ಸಂದರ್ಭದಲ್ಲಿ ಅಲ್ಲಾಹನು ಅವರಿಗೆ ಬಹುದೇವತಾವಾದಿಗಳ ಮೇಲೆ ವಿಜಯವನ್ನು ನೀಡಿದನು. ಈ ಸಂದರ್ಭದಲ್ಲಿ, ಅಬುಬಕರ್(ರ) ಮತ್ತು ಅವರ ಸಹಚರರು ಪರಿಪೂರ್ಣ ನಂಬಿಕೆಯ ಪುರಾವೆಯನ್ನು ನೀಡಿದರು ಮತ್ತು ಶತ್ರುಗಳ ಮೇಲೆ ವಿಜಯವನ್ನು ಸಾಧಿಸಿದರು ಯಾವ ರೀತಿಯಲ್ಲಿ ಬದ್ರ್ ಯುದ್ಧದಿಂದ ದೀರ್ಘಕಾಲದ ಪರಿಣಾಮಗಳು ಉಂಟಾಗಿದ್ದುವೋ ಅದೇ ರೀತಿಯಲ್ಲಿ ಈ ಯುದ್ಧದಲ್ಲಿ ಮುಸ್ಲಿಮರ ವಿಜಯವು ಇಸ್ಲಾಮಿನ ಭವಿಷ್ಯದ ಮೇಲೆ ಆಳವಾದ ಪ್ರಭಾವ ಬೀರಿತು. (ಹಝ್ರತ್ ಅಬೂಬಕರ್ ಸಿದ್ದೀಖ್, ಮಮುಹಮ್ಮದ್ ಹುಸೈನ್ ಹೈಕಲ್, ಅನುವಾದ ಉರ್ದು ಶೇಖ್ ಮುಹಮ್ಮದ್ ಅಹ್ಮದ್ ಪಾನಿಪತಿ ಶಾಹಿಬ್, ಪುಟ-150-151, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಬನೂ ಧಬ್‌ಯಾನ್, ಬನೂ ಅಬಸ್ ಮತ್ತು ಇತರ ಗೋತ್ರಗಳು ಈ ಪರಾಜಯದಿಂದ ಕೋಪಗೊಂಡು ತಮ್ಮ ಬಳಿಯಲ್ಲಿದ್ದ ಮುಸ್ಲಿಮರ ಮೇಲೆ ಅಚಾನಕ್ಕಾದ ದಾಳಿ ನಡೆಸಿ ಅವರನ್ನು ಅತ್ಯಂತ ದಾರುಣವಾಗಿ ವಿವಿಧ ರೀತಿಯ ಕಷ್ಟಗಳಿಗೆ ಗುರಿಪಡಿಸಿ ಶಹೀದ್ ಮಾಡಿದರು. ಈ ದೌರ್ಜನ್ಯಗಳ ಬಗ್ಗೆ ಹಝ್ರತ್ ಅಬೂಬಕರ್‌ರಿಗೆ(ರ) ಗೊತ್ತಾದಾಗ, ಪ್ರತಿ ಗೋತ್ರಗಳಿಂದ ಮುಸ್ಲಿಮರ ಕೊಲೆಗಾರರನ್ನು ಪ್ರತೀಕಾರವಾಗಿ ಕೊಲ್ಲಲಾಗುವುದು ಎಂದು ಅವರು ಪಣತೊಟ್ಟರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-256, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ಝಕಾತ್ ನೀಡುವುದನ್ನು ನಿರಾಕರಿಸಿದವರ ದಾಳಿಗಳನ್ನು ಪೂರ್ಣವಾಗಿ ತಡೆಯಲಾದಾಗ ಇತರ ಚಂಚಲಚಿತ್ತರಾದ ಗೋತ್ರಗಳು ಒಂದರ ನಂತರ ಇನ್ನೊಂದರಂತೆ ಝಕಾತನ್ನು ತೆಗೆದುಕೊಂಡು ಮದೀನದ ಕಡೆಗೆ ಬರಲು ಶುರುಮಾಡಿದುವು. ಬಲಹೀನ ಗೋತ್ರಗಳು ಈ ರೀತಿ ಆಗಿರುವುದನ್ನು ಕಂಡ ದುರ್ಬಲ ಗೋತ್ರಗಳು, ಝಕಾತ್ ನಿಲ್ಲಿಸಿದವರು ಝಕಾತ್ ಪಾವತಿಸಲು ಮದೀನಾಕ್ಕೆ ಬರಲು ಪ್ರಾರಂಭಿಸಿದರು. ಕೆಲವು ಗೋತ್ರಗಳು ರಾತ್ರಿಯ ಮೊದಲ ಭಾಗದಲ್ಲಿ ಮತ್ತು ಕೆಲವರು ಮಧ್ಯರಾತ್ರಿಯಲ್ಲಿ ಮತ್ತು ಕೆಲವರು ರಾತ್ರಿಯ ಕೊನೆಯ ಭಾಗದಲ್ಲಿ ಝಕಾತ್ ಅನ್ನು ತರಲು ಪ್ರಾರಂಭಿಸಿದರು. ಈ ಜನರು ಮದೀನಾದಲ್ಲಿ ಕಾಣಿಸಿಕೊಂಡಾಗ ಪ್ರತಿಯೊಂದು ಗುಂಪುಗಳು ಆಗಮಿಸಿದ ಸಂದರ್ಭದಲ್ಲಿ, ಜನರು ಇವರು ಭಯಭೀತಿಯನ್ನು ಉಂಟು ಮಾಡುವವರಾಗಿದ್ದಾರೆ, ಅಂದರೆ ಕೆಟ್ಟ ಸುದ್ದಿಯನ್ನು ತರುವವರು ಎಂದು ಹೇಳುತ್ತಿದ್ದರು, ಆದರೆ ಹಝ್ರತ್ ಅಬೂಬಕರ್(ರ) ಪ್ರತಿ ಸಂದರ್ಭದಲ್ಲಿ ಅವರು ಒಳ್ಳೆಯ ಸುದ್ದಿಯನ್ನು ನೀಡುವವರು ಎಂದು ಹೇಳಿದರು. ಅವರು ಬೆಂಬಲಕ್ಕಾಗಿ ಬಂದಿದ್ದಾರೆ ಹಾನಿಯನ್ನುಂಟು ಮಾಡುವುದಕ್ಕಲ್ಲ. ಆದ್ದರಿಂದ ಈ ಗುಂಪುಗಳು ಇಸ್ಲಾಂ ಧರ್ಮವನ್ನು ಬೆಂಬಲಿಸಲು ಮತ್ತು ಝಕಾತ್ ಹಣವನ್ನು ನೀಡಲು ಬಂದಿವೆ ಎಂದು ಔಪಚಾರಿಕವಾಗಿ ತಿಳಿದಾಗ, ಮುಸ್ಲಿಮರು ಹಝ್ರತ್ ಅಬೂಬಕ್ಕರ್(ರ) ಅವರಿಗೆ ಹೇಳಿದರು, "ನೀವು ತುಂಬಾ ಧನ್ಯರಾಗಿದ್ದೀರಿರು ಮತ್ತು ನೀವು ಯಾವಾಗಲೂ ಒಳ್ಳೆಯ ಸುದ್ದಿಯನ್ನೆ ನೀಡುವವರಾಗಿದ್ದೀರಿ." (ತಾರೀಖ್ ಅತ್ತಬರಿ, ಸಂಪುಟ-2, ಪುಟ-256, ದಾರುಲ್ ಕುತುಬ್ ಇಲ್‌ಮಿಯಾ, ಲೆಬನಾನ್ 2012)

ಈ ಸಂದರ್ಭದಲ್ಲಿ ಹಝ್ರತ್ ಅಬೂಬಕ್ಕರ್(ರ) ಅವರು ಹೇಳಿದರು: ಕೆಟ್ಟ ಸುದ್ದಿ ಮತ್ತು ಕೆಟ್ಟ ಉದ್ದೇಶದಿಂದ ಬರುವವರು ವೇಗವಾಗಿ ನಡೆಯುತ್ತಾರೆ ಆದರೆ ಒಳ್ಳೆಯ ಸುದ್ದಿಯನ್ನು ತರುವವರು ನಿರಾಳವಾಗಿ ಮತ್ತು ನೆಮ್ಮದಿಯಿಂದ ನಡೆಯುತ್ತಾರೆ. ಅವರ ವೇಗವನ್ನು ನಾನು ಊಹಿಸಬಲ್ಲೆ. (ಅಲ್ಸೀರುಲ್ ಇಸ್ಲಾಮೀಯ, ಮನೀರ್ ಮೊಹಮ್ಮದ್ ಅಸ್ಬಾನ್, ಪುಟ-50, ದಾರುಲ್ ಇಸ್ಲಾಮ್ 2015)

ಝಕಾತ್ ನಿರಾಕರಿಸುವವರ ವಿರುದ್ಧ ವಿಜಯದ ನಂತರ ಝಕಾತ್ ಸಂಗ್ರಹದ ಬಗ್ಗೆ, ತಾರೀಖ್-ಎ-ತಬರಿಯಲ್ಲಿ ಬರೆಯಲಾಗಿದೆ, ಆ ಅವಧಿಯಲ್ಲಿ ಮದೀನದಲ್ಲಿ ಮುಸ್ಲಿಮರ ಅಗತ್ಯದಿಂದ ಉಳಿದುಕೊಳ್ಳುವಷ್ಟು ಸದಖಗಳನ್ನು ಸ್ವೀಕರಿಸಲಾಯಿತು. (ತಾರೀಖ್ ಅಲ್-ತಬರಿ, ಸಂಪುಟ-2, ಪುಟ-257, ದಾರ್ ಅಲ್-ಕಿತಾಬ್ ಅಲ್-ಇಲ್‌ಮಿಯಾ ಲೆಬನಾನ್ 2012)

ಈ ವಿಜಯಗಳ ಮತ್ತು ಒಳ್ಳೆಯ ಸುದ್ದಿಗಳ ಸಮಯದಲ್ಲಿ, ಹಝ್ರತ್ ಉಸಾಮ(ರ)ರವರ ಸೈನ್ಯವೂ ಸಹ ಯಶಸ್ಸು ಮತ್ತು ವಿಜಯದೊಂದಿಗೆ ಮದೀನಾಕ್ಕೆ ಮರಳಿತು. ಉಸಾಮಾ ಹಿಂದಿರುಗಿದ ನಂತರ, ಅಬುಬಕರ್(ರ) ಅವರನ್ನು ಮದೀನಾದಲ್ಲಿ ತನ್ನ ಉಪನಾಯಕನನ್ನಾಗಿ ನೇಮಿಸಿದರು. ಅದೇ ರೀತಿ ಹಝ್ರತ್ ಅಬುಬಕರ್(ರ)ರವರು ಸಿನಾನ್ ಝುಮ್ರಿಯನ್ನು ತನ್ನ ಉಪನಾಯಕನನ್ನಾಗಿ

ನೇಮಿಸಿದರು ಮತ್ತು ಅವರಿಗೆ ಮತ್ತು ಅವರ ಸೈನ್ಯಕ್ಕೆ ಈಗ ನೀವು ಮತ್ತು ನಿಮ್ಮ ಕುದುರೆಗಳು ಸ್ವಲ್ಪ ವಿಶ್ರಾಂತಿಯನ್ನು ಪಡೆದುಕೊಳ್ಳಿ ಎಂದು ಹೇಳಿ ಅವರು ಸ್ವತಃ ಜನರೊಂದಿಗೆ ಸವಾರಿ ಮಾಡಿ ಝುಲ್ ಕಸ್ಸಾಕ್ಕೆ ಹೊರಟುಹೋದರು. ಆದರೆ ಮುಸ್ಲಿಮರು ಹಝ್ರತ್ ಅಬುಬಕರ್(ರ) ಅವರನ್ನು ಕೇಳಿದರು: ಓ ಪ್ರವಾದಿ(ಸ) ಅವರ ಖಲೀಫರೆ! ನಾವು ನಿಮಗೆ ಅಲ್ಲಾಹನ ಹೆಸರಿನ ಮೂಲಕ ಕೆಳಿಕೊಳ್ಳುವುದೇನೆಂದರೆ ನೀವು ಸ್ವತಃ ಈ ಯುದ್ಧಕ್ಕೆ ಹೋಗಬೇಡಿ, ಏಕೆಂದರೆ ನಿಮಗೆ ಏನಾದರು ಹಾನಿಯಾದರೆ, ಇಡೀ ವ್ಯವಸ್ಥೆಯು ಅಸ್ತವ್ಯಸ್ತವಾಗುತ್ತದೆ. ಇದನ್ನು ಮಾಡಲು ನೀವು ಬೇರೆಯವರನ್ನು ಕಳುಹಿಸಬಹುದು ಇದರಿಂದ ಅವರಿಗೆ ಸಮಸ್ಯೆಯಿದ್ದರೆ ನೀವು ಅವರ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸಬಹುದು. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನ ಆಣೆ! ನಾನು ಅದನ್ನು ಎಂದಿಗೂ ಮಾಡುವುದಿಲ್ಲ ಮತ್ತು ನನ್ನ ಜೀವನದಲ್ಲಿ ನಾನು ನಿಮ್ಮನ್ನು ನೋಡಿಕೊಳ್ಳುತ್ತೇನೆ. (ತಾರಿಖ್ ಅತ್ತಬರಿ, ಸಂಪುಟ–2, ಪುಟಗಳು–253, 256, ದಾರ್ ಅಲ್–ಕಿತಾಬ್ ಅಲ್–ಅಲಮಿಯಾ ಲೆಬನಾನ್ 2012) (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಸಲಾಬಿ ಅನುವಾದ, ಪುಟ–282, ಅಲ್‌ಫುರ್ಖಾನ್ ಮಕ್ತಬ್, ಮುಝಫರ್ ಗಡ್, ಪಾಕಿಸ್ತಾನ್)

ತದನಂತರ ಹಝ್ರತ್ ಅಬುಬಕರ್(ರ) ಎಲ್ಲವನ್ನೂ ವ್ಯವಸ್ಥೆಗೊಳಿಸಿ ಝುಹಿಸಾ ಮತ್ತು ಝುಲ್–ಕಸ್ಸಾಗೆ ಹೋದರು ಎಂದು ರಬಝು ಜನರ ಮೇಲಿನ ದಾಳಿಯ ಬಗ್ಗೆ ಬರೆಯಲಾಗಿದೆ. ಝುಲ್–ಕಸ್ಸಾ ಮದೀನಾದಿಂದ ನಲವತ್ತು ಮೈಲಿ ದೂರದಲ್ಲಿರುವ ಸ್ಥಳವಾಗಿದೆ. ಹಝ್ರತ್ ಅಬುಬಕರ್(ರ) ರಬಝುದ ಜನರನ್ನು ಅಬ್ರಾಕ್ ಸ್ಥಳದಲ್ಲಿ ಪಡೆಯುವವರೆಗೂ ಸುಮಾನ್(ರ), ಅಬ್ದುಲ್ಲ(ರ) ಹಾಗೂ ಸುವೈದ(ರ)ರವರು ತಮ್ಮ ತಮ್ಮ ಪ್ರದೇಶದಲ್ಲೇ ಇದ್ದರು. ಭೀಕರ ಯುದ್ಧ ನಡೆಯಿತು. ಕೊನೆಯಲ್ಲಿ, ಅಲ್ಲಾಹನು ಮುರ್ರಾ, ಥಲಾಬಾ ಮತ್ತು ಅಬ್ಬಾಸ್ ಗೋತ್ರಗಳ ಮುಖ್ಯಸ್ಥರಾದ ಹರಿತ್ ಮತ್ತು ಔಫ್ ಅವರನ್ನು ಸೋಲಿಸಿದನು ಮತ್ತು ಹುತೈಯನನ್ನು ಜೀವಂತವಾಗಿ ವಶಪಡಿಸಿಕೊಂಡರು. ಹಝ್ರತ್ ಅಬೂಬಕರ್(ರ) ಅಬ್ರಕ್‌ನಲ್ಲಿ ಕೆಲವು ದಿನಗಳ ಕಾಲ ಉಳಿದರು ಮತ್ತು ಅವರು ಅಬ್ರಕ್ ಭೂಮಿಯನ್ನು ಮುಸ್ಲಿಮರ ಕುದುರೆಗಳಿಗೆ ಹುಲ್ಲುಗಾವಲು ಮಾಡಿದರು. ಈ ಯುದ್ಧದಲ್ಲಿ ಸೋಲಿಸಲ್ಪಟ್ಟ ಬನು ಅಬ್ಬಾಸ್ ಮತ್ತು ಬನು ಝುಬೈನ್ ತುಲೈಹವನ್ನು ಸೇರಿಕೊಂಡರು, ಅವರು ಆ ಸಮಯದಲ್ಲಿ ಸಮೀರದಿಂದ ಹೊರಟು ಬುಝಾಖಾಗೆ ತಲುಪಿದರು. ಬುಝಾಖಾ ಎಂಬುದು ಬನು ಅಸಾದ್‌ನ ಕಾರಂಜಿಯ ಹೆಸರೂ ಆಗಿದೆ. ಹಝ್ರತ್ ಅಬುಬಕರ್(ರ) ಆಳ್ವಿಕೆಯಲ್ಲಿ ತುಲೈಹಾ ಅಸಾದಿಯೊಂದಿಗೆ ದೊಡ್ಡ ಯುದ್ಧವಿತ್ತು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–256, ದಾರುಲ್ ಕುತುಬ್ ಅಲ್ ಇಲ್‌ಮಿಯ ಲಡಬನಾನ್ 2012) (ಫರ್ಹಂಗ್ ಸೀರತ್, ಪುಟ–236, ಝುವಾರ ಅಕಾಡಮಿ ಪಬ್ಲಿಷರ್ಸ್ ಕರಾಚಿ 2003) (ಮುಜಮುಲ್ ಬಲ್ದಾನ್, ಸಂಪುಟ–1, ಪುಟಗಳು 484–485, ದಾರ್ ಅಲ್–ಕಿತಾಬ್ ಅಲ್ –ಅಲಮಿಯಾ ಬೈರುತ್)

ಪರಾಜಿತರಾದ ಗೋತ್ರಗಳ ವರ್ತನೆ ಬಗ್ಗೆ ಮತ್ತೊಬ್ಬ ಲೇಖಕ ಬರೆಯುತ್ತಾರೆ: ಅಬಸ್, ಧಬ್‌ಯಾನ್, ಗ಼ತ್‌ಫಾನ್, ಬನೀ ಬಕರ್ ಮತ್ತು ಮದೀನದ ಸಮೀಪದಲ್ಲಿ ನೆಲೆಸಿದ ಇತರ ಬಂಡಾಯಗಾರರಾದ ಗೋತ್ರಗಳು ತಮ್ಮ ಹಟ ಮತ್ತು ದಂಗೆಯಿಂದ ದೂರವಿದ್ದು ಹಝ್ರ಼ತ್ ಅಬೂಬಕರ್(ರ)ರ ಅನುಸರಣೆ ಮತ್ತು ಇಸ್ಲಾಮಿನ ಮೂಲಭೂತ ಕಾರ್ಯಗಳನ್ನು ಮಾಡುವುದಾಗಿ ಒಪ್ಪುವುದು ಅವರಿಗೆ ಉತ್ತಮವಾಗಿತ್ತು. ಆದರೆ ಮುಸ್ಲಿಮರೊಡನೆ ಇದ್ದ ಶತ್ರುತ್ವವು ಅವರ ಕಣ್ಣುಗಳನ್ನು ಕುರುಡುಗೊಳಿಸಿತ್ತು. ಅವರು ತಮ್ಮ ಸ್ವದೇಶವನ್ನು ಬಿಟ್ಟರು ಮತ್ತು ಬನೀ ಅಸದ್ ಗೋತ್ರದ ಸುಳ್ಳು ಪ್ರವಾದಿ ವಾದಿಯಾದ ತುಲೈಹ ಬಿನ್ ಖುವೈಲಿದ್‌ರೊಂದಿಗೆ ಸೇರಿದರು. ಈ ಜನರು ತಲುಪಿದ ಕಾರಣದಿಂದ "ತುಲೈಹ" ಮತ್ತು "ಮುಸೈಲಿಮ"ರ ಶಕ್ತಿ ಮತ್ತು ಸಾಮರ್ಥ್ಯ ವರ್ಧಿಸಿತು. ಯಮನಿನಲ್ಲಿ ವಿದ್ರೋಹದ ಬೆಂಕಿ ಶಕ್ತವಾಗಿ ಪ್ರಜ್ವಲಿಸಲು ಶುರುವಾಯಿತು. ಸದಾ ನೆನಪಿನಲ್ಲಿಡಬೇಕಾದ ಸಂಗತಿಯೇನೆಂದರೆ, ಈ ಜನರು ದಂಗೆಯೆದ್ದಿದ್ದರು ಮತ್ತು ಯುದ್ಧ ಮಾಡಿದ್ದರು. ಕೇವಲ ಸುಳ್ಳು ಪ್ರವಾದಿತ್ವದ ವಾದದ ಕಾರಣದಿಂದ ಈ ಯುದ್ಧ ನಡೆದಿರಲಿಲ್ಲ. ದಂಗೆಯೆದ್ದದ್ದಕ್ಕೆ ಮತ್ತು ಯುದ್ಧ ಮಾಡಿದ್ದಕ್ಕೆ ಪ್ರತೀಕಾರ ಮಾಡಲಾಗುತ್ತಿತ್ತು. (ಹಝ್ರತ್ ಅಬೂವಕರ್ ಸಿದ್ದೀಖ್(ರ) ಕೆ ಫೈಸ್ಲೆ, ಅಬ್ದುಲ್ಲಾ ಮದನಿ, ಪುಟ–173–174, ಮುಶ್ತಾಖ್ ಬುಕ್ ಕಾರ್ನರ್ ಲಾಹೋರ್)

ಆದಾಗ್ಯೂ, ಈ ಜನರು ಬಂಡಾಯವೆದ್ದರು ಮತ್ತು ಯುದ್ಧವಾಡಿದರು ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಈ ಯುದ್ಧವು ಒಂದು ಅಥವಾ ಇನ್ನೊಂದು ದಾವೆಯ ಮೇಲೆ ಹೋರಾಡಲಿಲ್ಲ. ದಂಗೆಗೆ ಪ್ರತೀಕಾರ ತೀರಿಸಿಕೊಳ್ಳಲಾಯಿತು ಮತ್ತು ಯುದ್ಧಕ್ಕೆ ಯುದ್ಧದ ಮೂಲಕ ಉತ್ತರ ನೀಡಲಾಯಿತು.

ಝಕಾತ್ ನಿರಾಕರಿಸಿದವರ ಮೇಲೆ ವಿಜಯ ಸಾಧಿಸಿದ ಬಗ್ಗೆ ಮತ್ತು ಹಝ್ರ಼ತ್ ಅಬೂಬಕರ್(ರ)ರ ಧೈರ್ಯ ಮತ್ತು ದೃಢನಿರ್ಧಾರದ ಕುರಿತು ಪ್ರಸ್ತಾಪಿಸುತ್ತಾ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಹೇಳುತ್ತಾರೆ: ಹಝ್ರ಼ತ್ ಪೈಗಂಬರ್(ಸ)ರ ಮರಣದ ನಂತರ ನಮ್ಮ ಸ್ಥಿತಿಯೇನಾಗಿತ್ತು ಎಂದರೆ, ಅಬೂಬಕರ್(ರ)ರ ಮೂಲಕ ಅಲ್ಲಾಹನು ನಮಗೆ ಸಹಾಯ ನೀಡಿರದಿದ್ದರೆ ಖಂಡಿತವಾಗಿಯೂ ನಾವು ನಾಶಹೊಂದುತ್ತಿದ್ದೆವು. ನಾವು ಝಕಾತಿನ ಒಂಟೆಗಳಿಗಾಗಿ ಇತರರ ವಿರುದ್ಧ ಯುದ್ಧ ಮಾಡಬಾರದು ಮತ್ತು ಅಲ್ಲಾಹನ ಆರಾಧನೆಯಲ್ಲಿ ನಿರತರಾಗಬೇಕು ಎಂಬುವುದಾಗಿತ್ತು ಮುಸ್ಲಿಮರಾದ ನಮ್ಮೆಲ್ಲರ ಒಮ್ಮತಾಭಿಪ್ರಾಯ. ಆದರೆ ಝಕಾತ್ ನೀಡದವರೊಡನೆ ಯುದ್ಧ ಮಾಡಲು ಹಝ್ರ಼ತ್ ಅಬೂಬಕರ್(ರ) ದೃಢನಿರ್ಧಾರ ಮಾಡಿದರು.

ಅವರು ಮಿರಾಕರಿಸಿದವರಿಗೆ ಕೇವಲ ಎರಡು ವಿಷಯಗಳನ್ನು ಪ್ರಸ್ತುತಪಡಿಸಿದರು, ಮೂರನೆಯದನ್ನು ಅಲ್ಲ. ಮೊದಲನೆಯದು, ಅವರು ತಮಗೆ ಅವಮಾನವನ್ನು ಸ್ವೀಕರಿಸಬೇಕು ಮತ್ತು ಅದನ್ನು ಸ್ವೀಕರಿಸದಿದ್ದರೆ ಅವರು ಗಡಿಪಾರು ಅಥವಾ ಯುದ್ಧಕ್ಕೆ ಸಿದ್ಧರಾಗಿರಬೇಕು. ತಮಗಾಗಿ ಅವಮಾನವನ್ನು ಒಪ್ಪಿಕೊಳ್ಳುವುದು ಎಂದರೆ ಅವರ ಕೊಲ್ಲಲ್ಪಟ್ಟ ಜನರು ನರಕವಾಸಿಗಳು ಮತ್ತು ನಮ್ಮವರು ಸ್ವರ್ಗವಾಸಿಗಳು ಎಂದು ಒಪ್ಪಿಕೊಳ್ಳಬೇಕು, ಮತ್ತು ಅವರು ನಮ್ಮ ಕೊಲ್ಲಲ್ಪಟ್ಟ ಜನರ ರಕ್ತಕ್ಕಾಗಿ ನಮಗೆ ಪಾವತಿಸಬೇಕು. ನಾವು ಅವರಿಂದ ತೆಗೆದುಕೊಂಡ ಯುದ್ಧದ ಸಂಪತ್ತನ್ನು ಹಿಂತಿರುಗಿಸಬೇಕು ಎಂದು ಕೇಳಬಾರದು, ಆದರೆ ಅವರು ನಮ್ಮಿಂದ ತೆಗೆದುಕೊಂಡದ್ದನ್ನು ನಮಗೆ ಹಿಂತಿರುಗಿಸಬೇಕು. ಮತ್ತು ಗಡಿಪಾರು ಶಿಕ್ಷೆ ಎಂದರೆ ಸೋತ ನಂತರ, ಅವರು ತಮ್ಮ ಪ್ರದೇಶಗಳನ್ನು ತೊರೆದು ದೂರದ ಸ್ಥಳಗಳಲ್ಲಿ ವಾಸಿಸಲು ಹೋಗಬೇಕಾಗುತ್ತದೆ. (ಹಝ್ರತ್ ಅಬುಬಕರ್ ಸಿದ್ದೀಕ್, ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕರಿಂದ ಅಳವಡಿಸಿಕೊಳ್ಳಲಾಗಿದೆ, ಪುಟ–118, ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್)

ಈ ಬಗ್ಗೆ ಹಝ್ರತ್ ಮೊಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಪ್ರವಾದಿ(ಸ)ರ ಮರಣದ ನಂತರ ಕೆಲವು ಅರಬ್ ಗೋತ್ರಗಳು ಝಕಾತ್ ನೀಡಲು ನಿರಾಕರಿಸಿದಾಗ, ಹಝ್ರತ್ ಅಬುಬಕರ್(ರ) ಅವರ ವಿರುದ್ಧ ಹೋರಾಡಲು ಸಿದ್ಧರಾದರು. ಆ ಸಮಯದಲ್ಲಿ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತು ಎಂದರೆ ಹಝ್ರತ್ ಉಮರ್(ರ) ಅವರಂತಹವರು ಜನರೊಂದಿಗೆ ಸೌಮ್ಯವಾಗಿ ವರ್ತಿಸಬೇಕೆಂದು ಸಲಹೆ ನೀಡಿದರು ಆದರೆ ಹಝ್ರತ್ ಅಬೂಬಕರ್(ರ) ಉತ್ತರಿಸಿದರು, ಪ್ರವಾದಿ(ಸ) ನೀಡಿದ ಆದೇಶವನ್ನು ಹಿಂಪಡೆಯುವುದಕ್ಕೆ ಅಬು ಖಹಾಫನ ಪುತ್ರನಿಗೆ ಶಕ್ತಿ ಇಲ್ಲ ಎಂದು ಹೇಳಿದರು, ಈಗಾಗಲೇ ಇದನ್ನು ಉಲ್ಲೇಖಿಸಲಾಗಿದೆ. ಅಲ್ಲಹನ ಆಣೆ! ಪ್ರವಾದಿ(ಸ.ಅ)ರ ಕಾಲದಲ್ಲಿ ಒಂಟೆಯ ಮೊಣಕಾಲಿಗೆ ಕಟ್ಟಬೇಕಾದ ಹಗ್ಗವನ್ನು ಝಕಾತ್‌ನಲ್ಲಿ ನೀಡುತ್ತಿದ್ದರೆ ನಾನು ಅವರಿಂದ ಹಗ್ಗವನ್ನು ತೆಗೆದುಕೊಳ್ಳುತ್ತೇನೆ ಮತ್ತು ಅವರು ಪಾವತಿಸುವವರೆಗೂ ನಾನು ಉಸಿರುಗಟ್ಟುವುದಿಲ್ಲ. ಹಝ್ರತ್ ಸಬುಬಕರ್(ರ) ತಮ್ಮ ಸಹಚರರಿಗೆ ಹೇಳಿದರು, "ಈ ವಿಷಯದಲ್ಲಿ ನೀವು ನನ್ನನ್ನು ಬೆಂಬಲಿಸಲು ಸಾಧ್ಯವಾಗದಿದ್ದರೆ, ಖಂಡಿತವಾಗಿಯೂ ಬೇಡ." ನಾನು ಅವರನ್ನು ಏಕಾಂಗಿಯಾಗಿ ಎದುರಿಸುತ್ತೇನೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನ ಆಜ್ಞೆಯನ್ನು ಪೂರೈಸಲು ಅವರು ಯಾವುದೇ ರೀತಿಯ ಅಪಾಯವನ್ನು ಎದುರಿಸಲು ಸಿದ್ಧರಾಗುತ್ತಾರೆ. " (ತಫ್ಸಿರ್ ಕಬೀರ್, ಸಂಪುಟ–8, ಪುಟಗಳು–108–109)

ತದನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತೊಂದು ಸ್ಥಳದಲ್ಲಿ ಬರೆದಿದ್ದಾರೆ, ಹಝ್ರತ್ ಅಬೂಬಕರ್(ರ) ಅವರ ಕಾಲದಲ್ಲಿ ಧರ್ಮಭ್ರಷ್ಟತೆಯ ಫಿತ್ನಾ ಹರಡಿದಾಗ ಮತ್ತು ಗ್ರಾಮದಲ್ಲಿ ಕೇವಲ ಜಮಾಅತ್‌ನೊಂದಿಗೆ ನಮಾಝ್‌ಗಳು ಮಾತ್ರ ಉಳಿದಿವೆ ಮತ್ತು ಸೈನ್ಯವನ್ನು ಸೀರಿಯಾಕ್ಕೆ ಕಳುಹಿಸಲಾಯಿತು. ಝಕಾತ್ ಕೊಡುವವರ ಹೆಸರಿನಲ್ಲಿ ರಸೂಲುಲ್ಲಾಹ್(ಸ)ರವರ ಕಾಲದಲ್ಲಿ ಯಾರಾದರೂ ಹಗ್ಗವನ್ನು ಯಾರು ಝಕಾತ್‌ನಲ್ಲಿ ನೀಡುತ್ತಿದ್ದರು ಮತ್ತು ಈಗ ಅವರು ಅದನ್ನು ನೀಡದಿದ್ದರೆ ನಾನು ಅದನ್ನು ಕತ್ತಿಯಿಂದ ತೆಗೆದುಕೊಳ್ಳುತ್ತೇನೆ ಎಂದು ಕಳುಹಿಸಿದರು. ಹಝ್ರತ್ ಉಮರ್(ರ) ಅವರು ಝಕಾತ್‌ಗೆ ಒತ್ತು ನೀಡುವುದು ಈ ಸಮಯದಲ್ಲಿ ಸೂಕ್ತವಲ್ಲ ಎಂದು ಹೇಳಿದರು ಆದರೆ ಅಬುಬಕರ್(ರ)ಅವರು ಅವರ ಒಂದು ಮಾತನ್ನು ಸಹ ಸ್ವೀಕರಿಸಲಿಲ್ಲ. ಝಕಾತ್ ಎಷ್ಟು ಮುಖ್ಯವಾಗಿದೆ ಎಂಬುದನ್ನು ತೋರಿಸುತ್ತದೆ. (ಮದಾರಿಜ್–ಎ–ತಕ್ವಾ, ಅನ್ವರ್–ಉಲ್–ಉಲೂಮ್, ಸಂಪುಟ–1, ಪುಟಗಳು 382–383)

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ತಮ್ಮ ಭಾಷಣವೊಂದರಲ್ಲಿ (ತಖ್ವದ)ಧರ್ಮನಿಷ್ಠೆಯ ಹಂತಗಳನ್ನು ವಿವರಿಸಿದ ವಿಷಯ ಇದು. ಅದರಲ್ಲಿ ಅವರು ಧರ್ಮನಿಷ್ಠೆಯ ಹಂತಗಳು, ಝಕಾತ್ ಮಹತ್ವವನ್ನು ವಿವರಿಸುತ್ತಿದ್ದರು ಮತ್ತು ಧರ್ಮನಿಷ್ಠರಿಗೆ ಇದು ಅವಶ್ಯಕವಾಗಿದೆ ಮತ್ತು ಅಹ್ಮದಿಯರು ಸಹ ಝಕಾತ್ ಎಷ್ಟು ಮುಖ್ಯ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಅದನ್ನು ನಿಯಮಿತವಾಗಿ ವ್ಯವಸ್ಥೆಗೊಳಿಸಬೇಕು ಎಂದು ಹೇಳಿದರು. (ಮದಾರಿಜ್–ಎ–ತಕ್ವಾ, ಅನ್ವರ್–ಉಲ್–ಉಲೂಮ್, ಸಂಪುಟ 1, ಪುಟ 383)

ನಂತರ ಒಂದು ಸ್ಥಳದಲ್ಲಿ, ಝಕಾತ್ ವಿಷಯವನ್ನು ವಿವರಿಸುವಾಗ, ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಝಕಾತ್ ಬಗ್ಗೆ ಬಹಳ ಮುಖ್ಯವಾದ ವಿಷಯವಿದೆ ಆದರೆ ಜನರು ಅದನ್ನು ಅರ್ಥಮಾಡಿಕೊಳ್ಳಲಿಲ್ಲ. ನಮಾಝ್‌ನ ನಂತರ ಸರ್ವಶಕ್ತನಾದ ಅಲ್ಲಾಹನು ಇದನ್ನು ಆಜ್ಞಾಪಿಸಿದ್ದಾನೆ. ಹಝ್ರತ್ ಅಬೂಬಕರ್(ರ) ಹೇಳಿದರು: ಝಕಾತ್ ನೀಡದವರನ್ನು ರಸೂಲುಲ್ಲಾಹ್(ರ)ರವರು ಕುಫ್ಫಾರ್‌ಗಳೊಂದಿಗೆ ವರ್ತಿಸಿದಂತೆ ನಾನು ವರ್ತಿಸುತ್ತೇನೆ. ನಾನು ಅಂತಹ ಜನರ ಪುರುಷರನ್ನು ಮತ್ತು ಅವರ ಸ್ತ್ರೀಯರನ್ನು ಗುಲಾಮರನ್ನಾಗಿ ಮಾಡುತ್ತೇನೆ. ಪ್ರವಾದಿ(ಸ)ರವರ ಮರಣದ ನಂತರ ಅರೇಬಿಯಾದ ಮೂರು ನಗರಗಳಾದ ಮಕ್ಕಾ, ಮದೀನಾ ಮತ್ತು ಇತರ ಒಂದು ನಗರವನ್ನು ಹೊರತುಪಡಿಸಿ ಎಲ್ಲಾ ಅರಬ್ ಪ್ರದೇಶವು ಧರ್ಮಭ್ರಷ್ಟವಾಯಿತು........., ಹಝ್ರತ್ ಉಮರ್(ರ) ಹೇಳಿದರು ಝಕಾತ್ ನಿರಾಕರಿಸಿದವರೊಂದಿಗೆ ಸಂಧಾನ ಮಾಡಿಕೊಳ್ಳಿ. ಮೊದಲು

ಇತರ ಧರ್ಮಭ್ರಷ್ಟರೊಂದಿಗೆ ಯುದ್ಧವಾದರೆ, ಕ್ರಮೇಣ ಅವರೂ ಸುಧಾರಿಸುತ್ತಾರೆ. ಪ್ರವಾದಿತ್ವದ ಸುಳ್ಳು ದಾವೆದಾರರನ್ನು ನಿರ್ಮೂಲನೆ ಮಾಡುವುದು ಮೊದಲ ಅವಶ್ಯಕತೆಯಾಗಿದೆ ಏಕೆಂದರೆ ಅವರ ಕಿರುಕುಳವು ತೀವ್ರವಾಗಿರುತ್ತದೆ. ಹಝ್ರತ್ ಅಬೂಬಕ್ಕರ್(ರ) ಹೇಳಿದರು: ಜನರು ರಸೂಲುಲ್ಲಾಹ್(ಸ)ರವರ ಕಾಲದಲ್ಲಿ ಝಕಾತ್‌ನ ಸಂಪತ್ತಿನಿಂದ ಝಕಾತ್ ಅನ್ನು ಪಾವತಿಸದಿದ್ದರೆ ಅದು ಮೇಕೆಯ ಮರಿ ಅಥವಾ ಒಂಟೆಯ ಮೊಣಕಾಲುಗಳನ್ನು ಕಟ್ಟಲು ಉಪಯೋಗಿಸುವ ಹಗ್ಗವೇ ಆಗಿರಲಿ, ನಾನು ಅವರೊಂದಿಗೆ ಹೋರಾಡುತ್ತೇನೆ ಮತ್ತು ನೀವು ನನ್ನನ್ನು ತೊರೆದರೂ ಮತ್ತು ಕಾಡಿನ ಮೃಗಗಳು ಸಹ ಸೇರಿ ಧರ್ಮಭ್ರಷ್ಟರೊಂದಿಗೆ ದಾಳಿ ಮಾಡಿದರು ಸಹ ನಾನು ಅವರೊಂದಿಗೆ ಏಕಾಂಗಿಯಾಗಿ ಹೋರಾಡುತ್ತೇನೆ."
(ಬರಕತ್ ಖಿಲಾಫತ್, ಅನ್ವರ್-ಉಲ್-ಉಲೂಮ್, ಸಂಪುಟ-2, ಪುಟ-222-223)

ಖಿಲಾಫತ್‌ನ ಅನುಗ್ರಹಗಳಲ್ಲಿ ಒಂದು ಶರೀಅತ್‌ನ ಸ್ಥಾಪನೆಗೆ ಶ್ರಮಿಸಬೇಕು ಮತ್ತು ಖಲೀಫರು ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ.

ಹಝ್ರತ್ ಮೊಸ್ಲೆಹ್ ಮೌಊದ್(ರ) ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ: ಜನರಿಂದ ಮತ್ತೊಂದು ಆಕ್ಷೇಪಣೆಯನ್ನು ಎತ್ತಲಾಗಿದೆ ಆದರೆ ಸರ್ವಶಕ್ತನಾದ ಅಲ್ಲಾಹನು ಈಗಾಗಲೇ 13 ನೂರು ವರ್ಷಗಳ ಹಿಂದೆ ಉತ್ತರವನ್ನು ನೀಡಿದ್ದಾನೆ. ಆಕ್ಷೇಪಿಸುವವರು ಹೇಳುತ್ತಾರೆ: **ಶಾವಿರ್ ಹುಮ್ ಫಿಲ್ ಅಮ್ರ್** ಎಂದು ಪ್ರವಾದಿ (ಸ) ಅವರಿಗೆ ಆಜ್ಞಾಪಿಸಲಾಗಿತ್ತು ಖಿಲಾಫತ್ ಎಲ್ಲಿಂದ ಬಂತು? ಇದು ಖಿಲಾಫತ್‌ಗೆ ಆಜ್ಞೆವಲ್ಲ. ಆದರೆ ಹಝ್ರತ್ ಅಬೂಬಕ್ಕರ್(ರ) ಅವರ ಕಾಲದಲ್ಲಿ ಝಕಾತ್ ವಿಷಯದಲ್ಲಿ ಆಕ್ಷೇಪಿಸಿದಾಗ, ಅದು ಸಹ ಅದೇ ರೀತಿಯಲ್ಲಿತ್ತು ಅಂದರೆ **ಖುಝ್ ಮಿನ್ ಅಮ್ವಾಲಿಹಿಮ್ ಸದಖತನ್** ಎಂಬ ಆಜ್ಞೆಯು ಪ್ರವಾದಿ(ಸ) ಅವರಿಗಾಗಿ ಇತ್ತು. ಈ ಆಜ್ಞೆಯು ಸಹ ಪ್ರವಾದಿ(ಸ) ಅವರಿಗಾಗಿ ಇತ್ತು ಆದರೆ ಅವರು ಈಗ ಇಲ್ಲ ಆದ್ದರಿಂದ ಯಾರಿಗೂ ಸದಖಗಳನ್ನು ಪಡೆಯುವ ಹಕ್ಕಿಲ್ಲ ಎಂದು ಅವರು ಸಹ ಅದೇ ಅಭಿಪ್ರಾಯವನ್ನು ಹೊಂದಿದ್ದರು ಎಂಬುದನ್ನು ಈ ಜನರು ನೆನಪಿಟ್ಟುಕೊಳ್ಳಬೇಕು. ಹಝ್ರತ್ ಅಬುಬಕರ್(ರ) ಈಗ ನಾನು ಉದ್ದೇಶಿಸುತ್ತಿದ್ದೇನೆ ಎಂದು ಉತ್ತರಿಸಿದರು. ಅದೇನೆಂದರೆ ಹಝ್ರತ್ ಅಬೂಬಕರ್(ರ) ಈಗ ಉದ್ದೇಶಿಸುತ್ತಿದ್ದಾರೆ. ಪ್ರವಾದಿ(ಸ) ನಿಧನ ಹೊಂದಿದರು, ಆದರೆ ಶರಿಯ್ಯತ್ ಅಂತೂ ಉಳಿದಿದೆ ಆದ್ದರಿಂದ ಈಗ ಕಾಲಘಟ್ಟದ ಖಲೀಫನಾದ ನಾನು ನಿಮ್ಮೊಂದಿಗೆ ಉದ್ದೇಶಿಸುತ್ತಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಭಾಷಣ ಮಾಡುತ್ತಿರುವಾಗ ಹೇಳಿದರು ಆ ಕಾಲದಲ್ಲಿ ಆ ಹಝ್ರುತ್ ಅಬುಬಕರ್(ರ)ರವರ ಆ ಉತ್ತರವು ನಿಜವಾಗಿರುತ್ತಿದ್ದರೆ ಖಂಡಿತವಾಗಿಯೂ ಆ ಉತ್ತರ ನಿಜವಾಗಿದ್ದರೆ ಇಂದು ನಾನು ಹೇಳುವುದೇನೆಂದರೆ ಇಂದು ಸಹ ಈ ತತ್ವವು ಯಾವಾಗಲೂ ಖಿಲಾಫತ್‌ನೊಂದಿಗೆ ಉಳಿಯುತ್ತದೆ. ಇದು ನೆನಪಿಡಬೇಕಾದ ವಿಷಯವಾಗಿದೆ. ಒಂದು ವೇಳೆ ನಿಮ್ಮ ಆಕ್ಷೇಪಣೆಯು ಸರಿಯಾಗಿರುತ್ತಿದ್ದರೆ ಪವಿತ್ರ ಖುರ್‌ಆನ್‌ನ ಅನೇಕ ಆಜ್ಞೆಗಳನ್ನು ತೆಗೆದುಹಾಕಬೇಕಾಗುತ್ತದೆ ಮತ್ತು ಇದು ಘೋರ ಅಂಧಕಾರವಾಗಿದೆ ಎಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ( ವ'ು ನ್'ಸ ಬ' ಖಿಲಾಫತ್, ಅನ್ವರ್-ಉಲ್-ಉಲೂಮ್, ಸಂಪುಟ-2, ಪುಟ 59-60)

ನೀವು ಖಿಲಾಫತ್ ಸ್ಥಾನದ ಬಗ್ಗೆ ಭಾಷಣ ಮಾಡುವಾಗ ಈ ವಿಷಯಗಳನ್ನು ಪ್ರಸ್ತಾಪಿಸಿದ್ದೀರಿ.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸಂದರ್ಭದಲ್ಲಿ ಹೀಗೆಯೂ ಹೇಳಿದರು: ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಕೇವಲ ಮೂರು ಮಸೀದಿಗಳಲ್ಲಿ ಜಮಾಅತಾದ ನಮಾಝ್ ನಡೆಯುತ್ತಿತ್ತು ಎಂದು ಚರಿತ್ರೆಯಲ್ಲಿ ಬಂದಿದೆ. ದೇಶದ ಬಹುತೇಕ ಜನರು ಝಕಾತ್ ನೀಡುವುದನ್ನು ನಿರಾಕರಿಸಿದ್ದರು. ಹಝ್ರತ್ ಪೈಗಂಬರ್(ಸ)ರ ನಂತರ ನಮ್ಮಿಂದ ಝಕಾತ್ ಪಡೆಯಲು ಯಾರಿಗೆ ಹಕ್ಕಿದೆ ಎಂದು ಅವರು ಕೇಳುತ್ತಿದ್ದರು. ಈ ವದಂತಿಯು ಅರೇಬಿಯಾದಾದ್ಯಂತ ಹರಡಿತು ಮತ್ತು ಹಝ್ರತ್ ಅಬುಬಕರ್(ರ)ರವರು ಅಂತಹ ಜನರನ್ನು ಭೇದಿಸಲು ಬಯಸಿದಾಗ ಹಝ್ರತ್ ಉಮರ್(ರ) ಮತ್ತು ಅವರ ಕೆಲವು ಸಹಾಬರವರು ಹಝ್ರತ್ ಅಬುಬಕರ್(ರ) ಅವರ ಬಳಿ ಬಂದು ಹೇಳಿದರು: ಈ ಹಿಂದೆ ಹೇಳಿದಂತೆ, ಅವರು ಹೇಳಿದರು ಇದು ಅತ್ಯಂತ ನಿರ್ಣಾಯಕ ಸಮಯವಾಗಿದೆ. ಈ ಸಮಯದಲ್ಲಿ ಸಣ್ಣದೊಂದು ನಿರ್ಲಕ್ಷ್ಯವು ದೊಡ್ಡ ನಷ್ಟಕ್ಕೆ ಕಾರಣವಾಗಬಹುದು. ಆದುದರಿಂದ, ಅಂತಹ ದೊಡ್ಡ ಶತ್ರುವನ್ನು ಎದುರಿಸಬಾರದು ಮತ್ತು ಝಕಾತ್ ನೀಡಲು ಬಯಸದವರನ್ನು ಸೌಮ್ಯವಾಗಿ ವರ್ತಿಸಬೇಕು ಎಂಬುದು ನಮ್ಮ ಸಲಹೆಯಾಗಿದೆ. ಅದಕ್ಕೆ ಹಝ್ರತ್ ಅಬುಬಕರ್(ರ) ಉತ್ತರಿಸಿದಿರು: ನಿಮ್ಮಲ್ಲಿ ಭಯಪಡುವವನು ಎಲ್ಲಿ ಬೇಕಾದರೂ ಹೋಗಬಹುದು. ಅಲ್ಲಾಹನ ಆಣೆ! ನಿಮ್ಮಲ್ಲಿ ಒಬ್ಬರು ನನ್ನನ್ನು ಬೆಂಬಲಿಸದಿದ್ದರೂ, ನಾನು ಶತ್ರುಗಳ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತೇನೆ, ಮತ್ತು ಶತ್ರುಗಳು ಮದೀನಾವನ್ನು ಆಕ್ರಮಿಸಿ ನನ್ನ ಪ್ರೀತಿಪಾತ್ರರನ್ನು, ಸಂಬಂಧಿಕರನ್ನು ಮತ್ತು ಸ್ನೇಹಿತರನ್ನು ಕೊಂದುಹಾಕಿದರು ಮತ್ತು ಮದೀನಾದ ಬೀದಿಗಳಲ್ಲಿ ಮಹಿಳೆಯರ ದೇಹಗಳನ್ನು ಎಳೆದು ಕೊಂಡು ಹೋದರೂ ನಾನು ಅವರೊಂದಿಗೆ ಹೋರಾಡುವೆನು ಮತ್ತು ಈ ಜನರು ಝಕಾತ್ ನೀಡುತ್ತಿದ್ದ ಒಂಟೆಯ ಮೊಣಕಾಲು ಕಟ್ಟಲು ಹಗ್ಗವನ್ನು ನೀಡಲು ಪ್ರಾರಂಭಿಸುವವರೆಗೆ ನಾನು ನಿಲ್ಲುವುದಿಲ್ಲ. ಆದ್ದರಿಂದ, ಅವರು ಶತ್ರುಗಳ ದುಷ್ಕೃತ್ಯವನ್ನು ಧೈರ್ಯದಿಂದ ಎದುರಿಸಿದರು, ಅಂದರೆ ಹಝ್ರತ್ ಅಬೂಬಕರ್(ರ), ಮತ್ತು ಕೊನೆಯಲ್ಲಿ ನಾನು ಮಾಡಬೇಕಾಗಿರುವುದು ಇದನ್ನೇ ಎಂದು ಅವರು ಭಾವಿಸಿದ್ದರಿಂದ ಮಾತ್ರ ಯಶಸ್ವಿಯಾದರು. ಆದುದರಿಂದಲೇ ಸಮಾಲೋಚಕರಿಗೆ "ನಿಮ್ಮಲ್ಲಿ ಒಬ್ಬರು ನನ್ನನ್ನು ಬೆಂಬಲಿಸಲಿ ಅಥವಾ ಇಲ್ಲದಿರಲಿ, ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ನನ್ನ ಪ್ರಾಣವನ್ನು ಅರ್ಪಿಸುವವರೆಗೂ ನಾನು ಶತ್ರುಗಳ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತೇನೆ" ಎಂದು ಹೇಳಿದರು. ಆದ್ದರಿಂದ ಯಾವ ಜನಾಂಗದಲ್ಲಿ ಇಂತಹ ಸಂಕಲ್ಪವಿರುತ್ತದೆಯೊ ಆ ಜನಾಂಗವು ಪ್ರತಿಯೊಂದು ಕ್ಷೇತ್ರದಲ್ಲೂ ಗೆಲ್ಲುತ್ತದೆ ಮತ್ತು ಶತ್ರು ಎಂದಿಗೂ ಅದರ ಮುಂದೆ ನಿಲ್ಲಲು ಸಾಧ್ಯವಿಲ್ಲ." (ಖೌಮಿ ತರಖ್ಖಿ ಕೆ ದೊ ಎಹೆಮ್ ಉಸೂಲ್, ಅನ್ವರ್-ಉಲ್-ಉಲೂಮ್, ಸಂಪುಟ-19, ಪುಟಗಳು 75, 76)

ಮತ್ತು ಇದು ರಾಷ್ಟ್ರೀಯ ಅಭಿವೃದ್ಧಿಯ ರಹಸ್ಯವಾಗಿದೆ ಎಂದು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ)ರವರ ನಿಧನದ ನಂತರ ಝಕಾತಿನ ವಿಷಯದ ಭಿನ್ನಾಭಿಪ್ರಾಯದ ಕಾರಣದಿಂದ ಅರೇಬಿಯದ ಸಾವಿರಾರು ಜನರು ಧರ್ಮತ್ಯಾಗ ಮಾಡಿದ್ದರು. ಒಂದು ಲಕ್ಷದ ಸೈನ್ಯದೊಂದಿಗೆ ಮುಸೈಲಿಮ ಆಕ್ರಮಣ ನಡೆಸಲು ಬರುತ್ತಿದ್ದಾನೆ ಎಂಬ ಸುದ್ದಿ ಹಝ್ರತ್ ಅಬೂಬಕರ್(ರ)ರಿಗೆ ತಲುಪಿತು. ಇಂತಹ ಸಂದಿಗ್ಧದ ಸ್ಥಿತಿಯಲ್ಲಿದ್ದೇವೆ ಮತ್ತು ಜನರು ಝಕಾತ್‌ನ ವಿಷಯ ಕುರಿತು ಭಿನ್ನಭಿಪ್ರಾಯದ ಕುರಿತು ಧರ್ಮತ್ಯಾಗಿಗಳಾಗುತ್ತಿದ್ದಾರೆ ಮತ್ತು ಇನ್ನೊಂದೆಡೆ ಮುಸೈಲಮ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ದಾಳಿ ನಡೆಸುತ್ತಿದ್ದಾನೆ ಆದ್ದರಿಂದ ನೀವು ಝಕಾತ್ ನೀಡಬೇಕೆಂಬ ಬೇಡಿಕೆ ಇರಿಸಬೇಡಿರಿ ಮತ್ತು ಜನರೊಡನೆ ರಾಜಿಮಾಡಿಕೊಳ್ಳಿರಿ ಎಂದು ಕೆಲವು ಸಹಾಬಿಯರು ಹಝ್ರತ್ ಅಬೂಬಕರ್(ರ)ರಿಗೆ ಸಲಹೆ ಕೊಟ್ಟರು. ಹಝ್ರತ್ ಅಬುಬಕರ್(ರ) ಅವರು ಈ ಭಯಗಳಿಗೆ ಯಾವುದೇ ಗಮನವನ್ನು ನೀಡಲಿಲ್ಲ ಮತ್ತು ಅವುಗಳನ್ನು ನಿರ್ಲಕ್ಷಿಸಿ ಅವರಿಗೆ ಸಲಹೆ ನೀಡಿದವರಿಗೆ ಹೇಳಿದರು: ನೀವು ನನ್ನಿಂದ ಅಲ್ಲಾಹನ ಹಾಗೂ ಅಲ್ಲಾಹನ ಸಂದೇಶವಾಹಕನ ಆಜ್ಞೆ ಇರುವ ವಿಷಯ ಕುರಿತು ವಿರೋಧಿಸಬೇಕು ಎಂದು ಬಯಸುವಿರಾ? ಝಕಾತ್ ಮೇಲಿನ ತೀರ್ಪು ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಸಂದೇಶವಾಹಕರಿಂದ ಆಗಿದೆ. ಆದ್ದರಿಂದ, ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ರಕ್ಷಿಸಲು ನನ್ನ ಕೈಲಾದಷ್ಟು ಮಾಡುವುದು ನನ್ನ ಕರ್ತವ್ಯವಾಗಿದೆ. ಆಗ ಸಹಾಬರವರು ಹೇಳಿದರು ಈಗಿರುವ ಸ್ಥಿತಿಯ ಪ್ರಕಾರ ರಜಿ ಮಾಡಿಕೊಳ್ಳುವುದು ಸೂಕ್ತ ಎಂದೆನಿಸುತ್ತದೆ ಎಂದು ಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು, "ನೀವು ಹೋರಾಡಲು ಬಯಸದಿದ್ದರೆ ಮತ್ತು ಶತ್ರುಗಳನ್ನು ಎದುರಿಸಲು ಸಾಧ್ಯವಾಗದಿದ್ದರೆ, ನಿಮ್ಮ ಮನೆಗಳಲ್ಲಿ ಹೋಗಿ ಕುಳಿತುಕೊಳ್ಳಿ." ಅಲ್ಲಾಹನ ಆಣೆ! ಒಂಟೆಯ ಮೊಣಕಾಲಿಗೆ ಕಟ್ಟುವ ಹಗ್ಗವು ಝಕಾತ್‌ನಲ್ಲಿ ಕೊಡುವವರೆಗೂ ನಾನು ಶತ್ರುಗಳೊಂದಿಗೆ ಏಕಾಂಗಿಯಾಗಿ ಹೋರಾಡುತ್ತೇನೆ ಮತ್ತು ನಾನು ಅವರನ್ನು ಝಕಾತ್ ನೀಡುವಂತೆ ಮನವೊಲಿಸುವವರೆಗೆ ನಾನು ಅವರೊಂದಿಗೆ ಎಂದಿಗೂ ರಾಜಿ ಮಾಡುವುದಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು ನಿಜವಾದ ಈಮಾನ್ ಆಗಿದೆ." (ಹಮಾರೆ ಝಿಮ್ಮೆ ತಮಾಮ್ ದುನಿಯಾಂ ಕೊ ಫತಹ್ ಕರ್ನಕಾ ಕಾಮ್ ಹೈ, ಅನ್ವಾರುಲ್ ಉಲೂಮ್, ಸಂಪುಟ-18, ಪುಟ-458)

ನೈಜ ವಿಶ್ವಾಸದ ಲಕ್ಷಣ ಇದೇ ಆಗಿದೆ. ಇದೇ ವಿಶ್ವಾಸ ನಮ್ಮೊಳಗೆ ಉಂಟಾದರೆ, ನಾವು ಲೋಕದಲ್ಲಿ ಇಸ್ಲಾಮಿನ ಯಥಾರ್ಥ ಸಂದೇಶ ತಲುಪಿಸಬಹುದು ಮತ್ತು ವಿಜಯ ಸಾಧಿಸಬಹುದು. ಇನ್‌ಶಾ ಅಲ್ಲಾಹ್

ಮತ್ತೆ ಒಂದು ಸ್ಥಳದಲ್ಲಿ ಹಝ್ರತ್ ಮೊಸ್ಲೆಹ್ ಮೌಊದ್(ರ) ಹೇಳುತ್ತಾರೆ: ರಸೂಲುಲ್ಲಾಹ್(ರ) ಅವರ ಮರಣದ ನಂತರ ಅರಬ್ ಗೋತ್ರಗಳು ದಂಗೆ ಎದ್ದರು ಮತ್ತು ಅವರು ಝಕಾತ್ ನೀಡಲು ನಿರಾಕರಿಸಿದರು. ಸರ್ವಶಕ್ತನಾದ ಅಲ್ಲಾಹನು ಪ್ರವಾದಿ(ಸ) ಹೊರತುಪಡಿಸಿ ಯಾರಿಗೂ ಝಕಾತ್ ತೆಗೆದುಕೊಳ್ಳುವ ಅಧಿಕಾರವನ್ನು ನೀಡಿಲ್ಲ ಎಂದು ಅವರು ಅದೇ ವಾದವನ್ನು ನೀಡುತ್ತಿದ್ದರು. ಆದ್ದರಿಂದ, ಅವರು ಹೇಳುತ್ತಾರೆ. ಅಂದರೆ, ಸರ್ವಶಕ್ತನಾದ ಅಲ್ಲಾಹನು, ಪ್ರವಾದಿ(ಸ) ರನ್ನು ಉದ್ದೇಶಿಸಿ ಹೇಳುತ್ತಾನೆ, "ಯಾ ಮುಹಮ್ಮದ್(ಸ), ನೀನು ಅವರ ಸಂಪತ್ತಿನಿಂದ ಸ್ವಲ್ಪ ಭಾಗವು ಝಕಾತ್ ಆಗಿ ತೆಗೆದುಕೊಳ್ಳಿ, ಪ್ರವಾದಿ(ಸ.ಅ)ರ ನಂತರ ಬೇರೆಯವರಿಗೆ ಝಕಾತ್ ಪಡೆಯುವ ಹಕ್ಕು ಇದೆ ಎಂಬುದು ಎಲ್ಲೂ ಸಹ ಉಲ್ಲೇಖವಿಲ್ಲ ಆದರೆ ಮುಸ್ಲಿಮರು ಅವರ ಈ ಸಾಕ್ಷಿಯನ್ನು ಒಪ್ಪಲಿಲ್ಲ ಅದಾಗ್ಯೊ ಅಲ್ಲಿ ವಿಶೇಷವಾಗಿ ಪ್ರವಾದಿ(ಸ) ಅವರನ್ನು ಉದ್ದೇಸಿಸಲಾಗಿದೆ. ಆದರೆ ಝಕಾತ್ ವಸೂಲಿ ಮಾಡುವ ಅಧಿಕಾರ ಮುಹಮ್ಮದ್(ಸ.ಅ) ಅವರಿಗೆ ಮಾತ್ರವೇ ಹೊರತು ಬೇರೆಯವರಿಗೆ ಇಲ್ಲ ಎಂಬುದು ಅಂದಿನ ಧರ್ಮಭ್ರಷ್ಟರ ಪ್ರಮುಖ ವಾದವಾಗಿದ್ದು, ವ್ಯವಸ್ಥೆಗೆ ಸಂಬಂಧಿಸಿದ ನಿಯಮಗಳು ಮಾನ್ಯವೆಂಬ ನೆಪವೇ ಇದಕ್ಕೆ ಕಾರಣ. ಆದಾಗ್ಯೂ, ಈ ಕಲ್ಪನೆಯು ಸಂಪೂರ್ಣವಾಗಿ ತಪ್ಪು ಎಂದು ಅವರು(ರ) ಹೇಳುತ್ತಾರೆ ಮತ್ತು ಸತ್ಯವೆಂದರೆ ನಿಜವಾದ ಸಂಗತಿ ಇದೇ ಆಗಿದೆ. ಯಾವ ರೀತಿಯಲ್ಲಿ ನಮಾಝ್ ಮತ್ತು ಉಪವಾಸದ ಆಜ್ಞೆಗಳು ಹಝ್ರತ್ ಪೈಗಂಬರ್(ಸ)ರ ನಿಧನದೊಂದಿಗೆ ಕೊನೆಗೊಳ್ಳುವುದಿಲ್ಲವೋ ಅದೇ ರೀತಿಯಲ್ಲಿ ಸಮುದಾಯ ಮತ್ತು ರಾಷ್ಟ್ರದೊಂದಿಗೆ ಸಂಬಂಧಪಟ್ಟ ಆದೇಶಗಳು ಕೂಡ ಹಝ್ರತ್ ಪೈಗಂಬರ್(ಸ)ರ ನಿಧನದೊಂದಿಗೆ ಮುಕ್ತಾಯಗೊಳ್ಳುವುದಿಲ್ಲ. ಜಮಾಅತಾದ ನಮಾಝಿನ ಹಾಗೆಯೇ ಈ ಆದೇಶಗಳನ್ನು ಸದಾ ಮುಸ್ಲಿಮರ ಎಡೆಯಲ್ಲಿ ಜಾರಿಗೊಳಿಸುವುದು ಹಝ್ರತ್ ಪೈಗಂಬರ್(ಸ)

ಪ್ರತಿನಿಧಿಗಳ ಕರ್ತವ್ಯವಾಗಿದೆ. (ಖಿಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ-15, ಪುಟ-30-31)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆಯೂ ಹೇಳಿದರು: ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಕೇವಲ ಮಕ್ಕಾ, ಮದೀನ ಮತ್ತು ಇನ್ನೊಂದು ಸಣ್ಣ ಗ್ರಾಮ ಹೊರತುಪಡಿಸಿ ಅರೇಬಿಯರೆಲ್ಲರೂ ಒಂದೇ ಸಮನೇ ಧರ್ಮತ್ಯಾಗ ಮಾಡಿದರು. ಇತರ ಎಲ್ಲ ಪ್ರದೇಶಗಳ ಜನರು ಝಕಾತ್ ನೀಡುವುದನ್ನು ನಿರಾಕರಿಸಿದರು ಮತ್ತು ಸರ್ವಶಕ್ತನಾದ ಅಲ್ಲಾಹನು ಪ್ರವಾದಿ(ಸ) ಅವರಿಗೆ **ಖುಝು ಮಿನ್ ಅಮ್ವಾಲಿಹಿಮ್ ಸದಖತುನ್** ಅವರ ಸಂಪತ್ತಿನಿಂದ ಸದಖಗಳನ್ನು ತೆಗೆದುಕೊಳ್ಳುವಂತೆ ಹೇಳಿದ್ದಾರೆ ಎಂದು ಹೇಳಿದರು. ನಮ್ಮಿಂದ ಝಕಾತ್ ಸಂಗ್ರಹಿಸುವ ಅಧಿಕಾರ ಬೇರೆ ಯಾರಿಗೂ ಇಲ್ಲ. ಎಂದು ಇಡೀ ಅರೇಬಿಯಾ ಧರ್ಮಭ್ರಷ್ಟರಾಗಿ ಯುದ್ಧಕ್ಕೆ ಸಿದ್ಧವಾಯಿತು. ಕೇವಲ ಧರ್ಮಭ್ರಷ್ಟಗೊಳಿಸಿದ್ದು ಮಾತ್ರವಲ್ಲದೆ ಯುದ್ಧಕ್ಕೆ ಹೋದರು. ಪ್ರವಾದಿ(ಸ)ರವರ ಕಾಲದಲ್ಲಿ ಇಸ್ಲಾಂ ದುರ್ಬಲವಾಗಿದ್ದರೂ, ಅರಬ್ ಗೋತ್ರಗಳು ವಿವಿಧ ರೀತಿಯಲ್ಲಿ ದಾಳಿ ಮಾಡಿದರು. ಕೆಲವೊಮ್ಮೆ ಒಂದು ಗುಂಪು ಮತ್ತು ಕೆಲವೊಮ್ಮೆ ಮತ್ತೊಂದು ದಾಳಿ ಮಾಡುತ್ತಿದ್ದರು. ಅಹ್ಜಾಬ್ ಯುದ್ಧದ ಸಂದರ್ಭದಲ್ಲಿ ಅವಿಶ್ವಾಸಿಗಳ ಸೈನ್ಯವು ಸಾಮೂಹಿಕವಾಗಿ ಮುಸ್ಲಿಮರ ಮೇಲೆ ದಾಳಿ ಮಾಡುವ ಹೊತ್ತಿಗೆ, ಇಸ್ಲಾಂ ಅಷ್ಟೊಂದು ಶಕ್ತಿಯನ್ನು ಗಳಿಸದಿದ್ದರೂ, ಭವಿಷ್ಯದಲ್ಲಿ ಭಯಪಡದಿದ್ದರೂ, ಇಸ್ಲಾಂ ದಾಳಿ ಮಾಡಲು ಸಾಕಷ್ಟು ಶಕ್ತಿಯನ್ನು ಗಳಿಸಿತ್ತು. ಅದರ ನಂತರ, ಪ್ರವಾದಿ(ಸ) ಮೆಕ್ಕಾವನ್ನು ವಿಜಯಗೊಳಿಸಲು ಹೋದಾಗ, ಕೆಲವು ಅರಬ್ ಗೋತ್ರಗಳು ಸಹ ಅವರ ಸಹಾಯಕ್ಕೆ ಬಂದವು. ಈ ರೀತಿಯಾಗಿ, ಅಲ್ಲಾಹನು ಕ್ರಮೇಣ ಶತ್ರುಗಳ ಉತ್ಸಾಹವನ್ನು ಎಬ್ಬಿಸಿದನು, ಆದ್ದರಿಂದ ಅವರು ಇಡೀ ದೇಶವನ್ನು ಮುಳುಗಿಸುವಷ್ಟು ಬಲಶಾಲಿಯಾಗುವುದಿಲ್ಲ. ಆದರೆ ಹಝ್ರತ್ ಅಬುಬಕರ್(ರ)ರವರ ಕಾಲದಲ್ಲಿ ಅಚಾನಕ್ಕಾಗಿ ಇಡೀ ಅರಬರು ಧರ್ಮಭ್ರಷ್ಟರಾದರು. ಮೆಕ್ಕಾ, ಮದೀನಾ ಮತ್ತು ಒಂದು ಸಣ್ಣ ಪಟ್ಟಣ ಮಾತ್ರ ಉಳಿದಿದೆ. ಇತರ ಎಲ್ಲಾ ಸ್ಥಳಗಳ ಜನರು ಝಕಾತ್ ನೀಡಲು ನಿರಾಕರಿಸಿದರು ಮತ್ತು ಅವರು ತಮ್ಮ ಸೈನ್ಯದೊಂದಿಗೆ ಹೊರಟರು. ಝಕಾತ್ ನೀಡಲು ನಿರಾಕರಿಸಿದ್ದು ಮಾತ್ರವಲ್ಲದೆ ಸೇನೆಯೊಂದಿಗೆ ಪೈಪೋಟಿಗೆ ಮುಂದಾದರು. ಕೆಲವು ಜಾಗಗಳಲ್ಲಿ ಅವರ ಬಳಿ ಒಂದು ಲಕ್ಷದಷ್ಟು ಸೈನಿಕರಿದ್ದರು. ಆದರೆ ಮತ್ತೊಂದೆಡೆ ಕೇವಲ ಹತ್ತು ಸಾವಿರ ಸೈನಿಕರ ಸೈನ್ಯವಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ತನ್ನ ನಿಧನಕ್ಕೆ ಸ್ವಲ್ಪ ಮುಂಚಿತವಾಗಿ ಹಝ್ರತ್ ಉಸಾಮರ ನೇತೃತ್ವದಲ್ಲಿ ರೋಮಿನ ಪ್ರದೇಶದ ಮೇಲೆ ದಾಳಿ ನಡೆಸಲಿಕ್ಕಾಗಿ ತಯಾರು ಮಾಡಿದ್ದರು. ದುರ್ಬಲರು, ವೃದ್ಧರು ಮತ್ತು ಬೆರಳೆಣಿಕೆಯ ಕೆಲವು ಯುವಕರು ಮದೀನದಲ್ಲಿ ಉಳಿದಿದ್ದರು. ಈ ಸ್ಥಿತಿಯನ್ನು ಕಂಡು ಶ್ರೇಷ್ಠ ಸಹಾಬಿಯರ ಒಂದು ಸಂಘ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹೀಗೆ ವಿನಂತಿಸಿದರು: ದಂಗೆ ಕೊನೆಗೊಳ್ಳುವ ತನಕ ಈ ಸೈನ್ಯವನ್ನು ತಡೆದು ನಿಲ್ಲಿಸಬೇಕು. ಹಝ್ರತ್ ಅಬೂಬಕರ್(ರ) ಅತ್ಯಂತ ಕೋಪದಿಂದ ಹೇಳಿದರು: ಯಾವ ಸೈನ್ಯವನ್ನು ರವಾನೆ ಮಾಡಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರೋ ಅದನ್ನು ತಡೆಯುವ ಕೆಲಸವನ್ನು ಮೊತ್ತಮೊದಲಾಗಿ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಬೂಖಹಾಫನ ಮಗನು ಮಾಡಬೇಕೆಂದು ನೀವು ಬಯಸುತ್ತೀರಾ? ನಾನು ಈ ಸೈನ್ಯವನ್ನು ಖಂಡಿತ ಕಳುಹಿಸುವೆನು. ನೀವು ಶತ್ರುಗಳ ಸೈನ್ಯಗಳಿಗೆ ಹೆದರುತ್ತಿರುವಿಯಾದರೆ, ನಿಸ್ಸಂಶಯವಾಗಿಯೂ ನನ್ನ ಜೊತೆಗೆ ಇರಬೇಕಾಗಿಲ್ಲ. ನಾನು ಒಬ್ಬಂಟಿಯಾಗಿ ಎಲ್ಲ ಶತ್ರುಗಳನ್ನು ಎದುರಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು **"ಯಅ್‌ಬುದೂನೀ ಲಾ ಯುಶ್‌ರಿಕೂನ ಬೀ ಶೈಅನ್"** ಎಂಬುದರ ಸತ್ಯತೆಯ ಪುರಾವೆಯಾಗಿದೆ. ಎಂದರೆ ಅವರು ನನ್ನನ್ನು ಮಾತ್ರ ಆರಾಧಿಸುವರು ಮತ್ತು ನನ್ನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಲಾರರು. ಇಲ್ಲಿ ಖಿಲಾಫತಿನೊಂದಿಗೆ ನೆಲೆನಿಲ್ಲುವವರು ಮತ್ತು ಖಿಲಾಫತಿನ ಜೊತೆಗೆ ಇರುವವರನ್ನು ಉದ್ದೇಶಿಸಲಾಗಿದೆ.

ಅದೇ ರೀತಿ ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತೆ ಹೇಳುತ್ತಾರೆ: ಎರಡನೇಯ ವಿಷಯ ಝಕಾತ್ ಬಗ್ಗೆ ಎಂದು ಹೇಳುತ್ತಾರೆ. ಸಹಾಬರವರು ಹೇಳಿದರು: ಒಂದುವೇಳೆ ನಿಮಗೆ ಸೈನ್ಯವನ್ನು ತಡೆಯಲು ಸಾಧ್ಯವಾಗದಿದ್ದರೆ ಈ ಜನರೊಂದಿಗೆ ಸಂದಾನ ಮಾಡಿಕೊಳ್ಳಿ ಮತ್ತು ಈ ವರ್ಷ ನಾವು ನಿಮ್ಮಿಂದ ಝಕಾತ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಮತ್ತು ಅಷ್ಟರಲ್ಲಿ ಅವರ ಉತ್ಸಾಹವು ತಣ್ಣಗಾಗುತ್ತದೆ ಮತ್ತು ಕೆಲವು ರೀತಿಯ ಪ್ರತ್ಯೇಕತೆ ಇರುತ್ತದೆ. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ಅದು ಎಂದಿಗೂ ಸಂಭವಿಸುವುದಿಲ್ಲ. ಅವನೂ ಒಪ್ಪಲಿಲ್ಲ. ಈ ಬಗ್ಗೆ ಸಹಾಬರವರು ಉಸಾಮ(ರ)ರವರ ಸೈನ್ಯವನ್ನು ತೊರೆದರೆ ಮತ್ತು ಈ ಜನರೊಂದಿಗೆ ಯಾವುದೇ ತಾತ್ಕಾಲಿಕ ಸಂದಾನವನ್ನು ಮಾಡದಿದ್ದರೆ ಶತ್ರುಗಳ ವಿರುದ್ಧ ಯಾರು ಹೋರಾಡುತ್ತಾರೆ? ಮದೀನಾದಲ್ಲಿ, ಕೇವಲ ವೃದ್ಧರು ಹಾಗೂ ದುರ್ಬಲರು ಮತ್ತು ಇವರು ಕೆಲವೇ ಯುವಕರು ಇರುವರು. ಅವರು ಲಕ್ಷಾಂತರ ಜನರೊಂದಿಗೆ ಏನು ಸ್ಪರ್ಧಿಸಬಹುದೇ? ಹಝ್ರತ್ ಅಬೂಬಕರ್(ರ) ಉತ್ತರಿಸಿದರು. ಓ ಸ್ನೇಹಿತರೇ! ನೀವು ಅವರೊಂದಿಗೆ ಹೋರಾಡಲು ಸಾಧ್ಯವಾಗದಿದ್ದರೆ, ಅಬೂಬಕರ್(ರ) ಅವರೊಂದಿಗೆ ಹೋರಾಡಲು ಏಕಾಂಗಿಯಾಗಿ ನಿಲ್ಲುತ್ತಾನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ದಾವೆಯು ಎಂತಹ ವ್ಯಕ್ತಿಯ ಕಡೆಯಿಂದ ಇತ್ತು ಎಂದರೆ ಅವನಿಗೆ ಯುದ್ಧದ ಯಾವುದೇ ಕಲೆಗಳ ಬಗ್ಗೆ ಹೆಚ್ಚು ತಿಳಿದಿರಲಿಲ್ಲ ಮತ್ತು ಸಾಮಾನ್ಯವಾಗಿ ಹೃದಯದಿಂದ ದುರ್ಬಲ ಎಂದು ಭಾವಿಸಲಾಗಿತ್ತು. ಹಾಗಾದರೆ ಈ ಧೈರ್ಯ, ಈ ಶೌರ್ಯ, ಈ ನಂಬಿಕೆ ಮತ್ತು ಈ ಆತ್ಮವಿಶ್ವಾಸ ಎಲ್ಲಿಂದ ಬಂತು? ಖಿಲಾಫತ್ ಸ್ಥಾನದಲ್ಲಿ ನಾನು ಅಲ್ಲಾಹನ ಪರವಾಗಿ ನಿಂತಿದ್ದೇನೆ ಮತ್ತು ಎಲ್ಲದಕ್ಕೂ ನಾನೇ ಹೊಣೆ ಎಂದು ಹಝ್ರತ್ ಅಬೂಬಕರ್(ರ) ಅರ್ಥಮಾಡಿಕೊಂಡರು ಎಂಬ ನಂಬಿಕೆಗೆ ಇದು ಕಾರಣವಾಯಿತು. (ಖಿಲಾಫತೆ ರಾಶಿದ, ಅನ್ವಾರ್-ಉಲ್-ಉಲೂಮ್, ಸಂಪುಟ-15, ಪುಟಗಳು-543 ರಿಂದ 545, ಖಾದಿಯನ್, ಮುದ್ರಣ 2008)

ಹಝ್ರತ್ ಅಬೂಬಕರ್(ರ)ರ ತೀರ್ಮಾನದ ಅತ್ಯುತ್ತಮ ಪರಿಣಾಮಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಸಹಾಬರ ಇಷ್ಟಕ್ಕೆ ವಿರುದ್ಧವಾಗಿ ಹಝ್ರತ್ ಅಬೂಬಕರ್(ರ) ಹಝ್ರತ್ ಉಸಾಮ ಬಿನ್ ಝೈದ್‌ರ ಸೈನ್ಯವನ್ನು ಕಳುಹಿಸಿದರು. ಅದು 40 ದಿನಗಳ ನಂತರ ವಿಜಯಶಾಲಿಯಾಗಿ ಮದೀನಕ್ಕೆ ಮರಳಿಬಂತು. ಅಲ್ಲಾಹನ ಸಹಾಯ ಮತ್ತು ವಿಜಯವು ವರ್ಷಿಸುವುದನ್ನು ಎಲ್ಲರೂ ಕಣ್ಣಾರೆ ನೋಡಿದರು. ಇದರ ನಂತರ ಹಝ್ರತ್ ಅಬೂಬಕರ್(ರ) ಸುಳ್ಳು ಪ್ರವಾದಿಗಳ ಪಿತೂರಿಯನ್ನು ತುಳಿದುಹಾಕಿದರು. ಈ ಪಿತೂರಿ ಪೂರ್ಣವಾಗಿ ಅಳಿದುಹೋಯಿತು. ಅನಂತರ ಇದೇ ಸ್ಥಿತಿ ಧರ್ಮತ್ಯಾಗಿಗಳದ್ದೂ ಆಯಿತು. ಅಲ್ಲಾಹನ ಏಕತೆ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವವನ್ನು ಒಪ್ಪಿಕೊಂಡು ಕೇವಲ ಝಕಾತ್ ನೀಡುವುದನ್ನು ನಿರಾಕರಿಸುವವರ ವಿರುದ್ಧ ಹೇಗೆ ಖಡ್ಗವೆತ್ತುವುದು ಎಂದು ಭಿನ್ನಾಭಿಪ್ರಾಯ ಪ್ರಕಟಿಸಿದ ಸಹಾಬರೊಡನೆ ಹಝ್ರತ್ ಅಬೂಬಕರ್(ರ) ಅತ್ಯಂತ ಧೈರ್ಯದಿಂದ ಹೇಳಿದರು: ಇಂದು ಝಕಾತ್ ನೀಡದಿರಲು ಅನುಮತಿ ಕೊಟ್ಟರೆ, ಮೆಲ್ಲ ಮೆಲ್ಲನೆ ಜನರು ನಮಾಝ್ ಮತ್ತು ಉಪವಾಸವನ್ನು ಕೂಡ ಉಪೇಕ್ಷಿಸುವರು. ಒಟ್ಟಿನಲ್ಲಿ, ಇಂತಹ ಪರಿಸ್ಥಿತಿಗಳಲ್ಲಿ ಹಝ್ರತ್ ಅಬೂಬಕರ್(ರ) ಝಕಾತ್ ನಿಷೇಧಿಗಳನ್ನು ಎದುರಿಸಿದರು ಮತ್ತು ಅದರ ಪರಿಣಾಮವೇನಾಯಿತು ಎಂದರೆ, ಆ ಕಾರ್ಯದಲ್ಲೂ ಹಝ್ರತ್ ಅಬೂಬಕರ್(ರ)ರಿಗೆ ವಿಜಯ ಮತ್ತು ದೇವ ಸಹಾಯ ಲಭಿಸಿತು. ಕೆಟ್ಟುಹೋಗಿದ್ದ ಜನರೆಲ್ಲರೂ ಸತ್ಯಮಾರ್ಗದ ಕಡೆಗೆ ಮರಳಿಬಂದರು. (ಅತಫ್ಸೀರೆ ಕಬೀರ್, ಸಂಪುಟ-10, ಪುಟ-478)

ಈ ವಿಷಯ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

ನಾನು ಯಾವಾಗಲೂ ಮನವಿ ಮಾಡುವಂತೆ, ಇಂದಿನ ಲೋಕದ ಸ್ಥಿತಿಗತಿಗಳಿಗಾಗಿ ಪ್ರಾರ್ಥನೆಗಳನ್ನು ಮಾಡುತ್ತಿರಿ. ಅದರಲ್ಲಿ ಕೊರತೆ ಮಾಡಬೇಡಿರಿ. ಲೋಕವು ತನ್ನ ಸೃಷ್ಟಿಕರ್ತನನ್ನು ಅರಿಯುವಂತಾಗಲಿ ಎಂಬ ಪ್ರಾರ್ಥನೆಯನ್ನು ವಿಶೇಷವಾಗಿ ಮಾಡಿರಿ. ಲೋಕವನ್ನು ನಾಶದಿಂದ ರಕ್ಷಿಸಲು ಪರಿಹಾರ ಮಾರ್ಗ ಇದೊಂದು ಮಾತ್ರವಾಗಿದೆ. ಅಲ್ಲಾಹನು ಕರುಣೆದೋರಲಿ ಮತ್ತು ನಮ್ಮ ದುಆಗಳನ್ನು ಅಲ್ಲಾಹನು ಸ್ವೀಕರಿಸಲಿ.

ದಿವಂಗತರಾದ ಸನ್ಮಾನ್ಯ ಮೌಲಾನ ಮುಬಾರಕ್ ನಝೀರ್ ಸಾಹಿಬ್‌ರ ಬಗ್ಗೆಯೂ ಪ್ರಸ್ತಾಪಿಸಲು ಬಯಸುತ್ತೇನೆ. ಜುಮಾ ನಮಾಝಿನ ನಂತರ ಅವರ ಜನ್ನಾಝು ಕೂಡ ನಿರ್ವಹಿಸುವೆನು. ಅವರು ಕೆನಡ ಜಾಮಿಅ ಅಹ್ಮದಿಯದ ಪ್ರಿನ್ಸಿಪಲ್ ಕೂಡ ಆಗಿದ್ದರು ಮತ್ತು ಕೆನಡದ ಮುಬಲ್ಲಿಗ್ ಇಂಚಾರ್ಜ್ ಕೂಡ ಆಗಿದ್ದರು. ಮಾರ್ಚ್ 8ರಂದು 87ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಕೂಡ ಮಾಡಿದ್ದರು. ಬಹಳ ನಿಸ್ವಾರ್ಥ, ಅಲ್ಲಾಹನ ಮೇಲೆ ಭರವಸೆ ಹೊಂದಿದ್ದ, ದುಆ ಮಾಡುವ, ಇದ್ದುದರಲ್ಲಿ ತೃಪ್ತರಾಗುವ ಗುಣವುಳ್ಳ ವ್ಯಕ್ತಿಯಾಗಿದ್ದರು. ಸರಳ ಜೀವನ ಸಾಗಿಸುವವರಾಗಿದ್ದರು.

ಅವರನ್ನು ನೋಡಿ ನನಗೆ ಯಾವಾಗಲೂ ಯಥಾರ್ಥ ಹಿರಿಯರನ್ನು ಮಹಾನುಭಾವರನ್ನು ನೋಡಿದಂತಹ ಅನುಭವವಾಗುತ್ತಿತ್ತು. ಅವರ ಕುಟುಂಬದ ಬಗ್ಗೆ ನಾನು ಹೇಳಬಯಸುತ್ತೇನೆ. ಅವರು ಜಮಾಅತಿನ ವಿಜಯೀ ಮುಬಲ್ಲಿಗ್ ಆಗಿದ್ದ ಮೌಲಾನಾ ನಝೀರ್ ಅಹ್ಮದ್ ಅಲಿ ಸಾಹಿಬ್ ಮತ್ತು ಸನ್ಮಾನ್ಯ ಆಮಿನ ಬೇಗಂ ಸಾಹಿಬರ ಎರಡನೇ ಮಗನಾಗಿದ್ದರು. ಅವರ ತಾತರಾದ ಹಝ್ರತ್ ಬಾಬು ಫಕೀರ್ ಅಲಿ ಸಾಹಿಬ್‌ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡಿದ್ದರು. ಅನಂತರ ಖಾದಿಯಾನಿನಲ್ಲಿ ಅವರು ಮೊದಲ ಸ್ಟೇಶನ್ ಮಾಸ್ಟರ್ ಆಗಿ ನಿಶ್ಚಯಿಸಲ್ಪಟ್ಟರು. ಖಾದಿಯಾನಿನಲ್ಲಿ ಅವರ ಮನೆಯೂ ಇತ್ತು. ಅದು ಫಕೀರ್ ಮನ್‌ಜಿಲ್ ಎಂಬ ಹೆಸರಿನಿಂದ ಹೆಸರುವಾಸಿಯಾಗಿತ್ತು. ಮೌಲಾನಾ ಮುಬಾರಕ್ ನಝೀರ್ ಸಾಹಿಬ್‌ರ ತಂದೆಯಾದ ಹಝ್ರತ್ ಮೌಲಾನಾ ನಝೀರ್ ಅಹ್ಮದ್ ಸಾಹಿಬ್‌ರಿಗೆ 1929ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಮೊದಲು ಘಾನದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅನಂತರ ಅವರು ಸೇರಲಿಯೋನಿನಲ್ಲಿ ನಿಶ್ಚಯಿಸಲ್ಪಟ್ಟರು. 1943ರಲ್ಲಿ ಹಝ್ರತ್ ಮೌಲಾನಾ ನಝೀರ್ ಅಹ್ಮದ್ ಅಲಿ ಸಾಹಿಬ್ ಸೆರಲಿಯೋನಿಗೆ ಮರಳಿ ಹೋಗುತ್ತಿದ್ದರು. ಆಗ ಮುಬಾರಕ್ ನಝೀರ್ ಸಾಹಿಬ್‌ರು ಕೂಡ ಸೆರಲಿಯೋನ್ ಯಾತ್ರೆಯಲ್ಲಿ ತನ್ನ ತಂದೆ ಮತ್ತು ತಾಯಿಯ ಜೊತೆಗೆ ಇದ್ದರು. ಈ ಯಾತ್ರೆಯ ನಡುವೆ ಒಂದು ವಿಶ್ವಾಸವರ್ಧಕ ಘಟನೆಯೂ ನಡೆಯಿತು. ಇದರ ಬಗ್ಗೆ ಮೌಲಾನಾ ಮುಬಾರಕ್ ನಝೀರ್ ಸಾಹಿಬ್ ಸ್ವತಃ ಪ್ರಸ್ತಾಪಿಸಿರುವರು. ಈ ಸಮುದ್ರ ಯಾತ್ರೆ ಹಡಗಿನ ಮೂಲಕ 3 ತಿಂಗಳ ಯಾತ್ರೆಯಾಗಿತ್ತು. ಆ ಸಮಯದಲ್ಲಿ ಮುಬಾರಕ್ ನಝೀರ್ ಸಾಹಿಬ್‌ರಿಗೆ 11 ವಯಸ್ಸಿತ್ತು. ಯಾತ್ರೆಯ ನಡುವೆ ಅವರ ಆರೋಗ್ಯ ಕೆಟ್ಟು

ಹೋಯಿತು. ಇನ್ನು ಜೀವ ಬಾಕಿಯುಳಿಯದು ಎಂದು ತೋರುತ್ತಿತ್ತು. ಹಡಗು ಹತ್ತುವಾಗ ಅಥವಾ ಎರಡನೇ ಹಡಗು ಹತ್ತುವಾಗ ಇರಬಹುದು. ಹೇಗಿದ್ದರೂ ಹಡಗಿನ ಮುಖ್ಯಸ್ಥರು ಅವರ ಸ್ಥಿತಿಯನ್ನು ನೋಡಿ ಅವರ ತಂದೆಯೊಡನೆ ಹೇಳಿದರು: ನಿಮ್ಮ ಮಗನ ಅರ್ಧ ಜೀವ ಹೋಗಿಬಿಟ್ಟಿದೆ. ಬಹುತೇಕ ಜೀವ ಹೋಗಿದೆ. ಯಾತ್ರೆಯ ನಡುವೆ ನಿಮ್ಮ ಮಗನು ಮೃತಪಟ್ಟರೆ, ನಮ್ಮ ಬಳಿ ಮೃತಶರೀರವನ್ನು ಇರಿಸಲು ಯಾವುದೇ ಫ್ರೀಝರ್‌ನ ಏರ್ಪಾಡು ಇಲ್ಲ. ಆದ್ದರಿಂದ ನಿಮ್ಮ ಮಗನ ಕಾರಣದಿಂದ ನಿಮ್ಮನ್ನು ಯಾತ್ರೆಗೆ ಕೊಂಡುಹೋಗಲು ನಮಗೆ ಸಾಧ್ಯವಲ್ಲ. ಮೌಲಾನಾ ಸಾಹಿಬ್ ಒತ್ತಾಯಪೂರ್ವಕವಾಗಿ ಹೇಳಿದರು: ನನಗೆ ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿಯರ ಆದೇಶವಿದೆ. ನನಗೆ ಹೇಗಿದ್ದರೂ ಈ ಹಡಗಿನಲ್ಲಿ ಸವಾರನಾಗಬೇಕು. ಆಗ ಮುಖ್ಯಸ್ಥರು ಒಂದು ಶರತ್ತಿನ ಮೇಲೆ ಯಾತ್ರೆ ಮಾಡಲು ಅನುಮತಿ ಕೊಟ್ಟರು. ಅದೇನೆಂದರೆ, ಮಗನು ಯಾತ್ರೆಯ ನಡುವೆ ಮೃತಪಟ್ಟರೆ ಅವರ ಮೃತಶರೀರವನ್ನು ಸಮುದ್ರಕ್ಕೆ ಎಸೆಯಲು ಅನುಮತಿ ಕೊಡಬೇಕು. ಈ ನಿಬಂಧನೆಯನ್ನು ಹಡಗಿನ ಕ್ಯಾಪ್ಟನ್ ಹೇಳಿದಾಗ ಮುಬಾರಕ್ ನದೀ಼ರ್ ಸಾಹಿಬ್‌ರ ತಾಯಿ ಅಳಲು ಶುರುಮಾಡಿದರು. ಅವರು ತನ್ನ ಪತಿಯಾದ ಮೌಲಾನಾ ನದೀ಼ರ್ ಅಲಿ ಸಾಹಿಬ್‌ರೊಡನೆ ಹೀಗೆ ಹೇಳಿದರು: ಇವನು ನಮ್ಮ ಪುತ್ರನಾಗಿರುವನು. ಕಾಯಿಲೆ ವಾಸಿಯಾದ ನಂತರ ನಾವು ಬೇರೆ ಹಡಗಿನಲ್ಲಿ ಹೋಗೋಣ. ಮೌಲಾನಾ ನದೀ಼ರ್ ಅಹ್ಮದ್ ಸಾಹಿಬ್ ತನ್ನ ಪತ್ನಿಯನ್ನು ಸಾಂತ್ವನಪಡಿಸುತ್ತಾ ಹೇಳಿದರು: ನಾನೊಬ್ಬ ಮುಬಲ್ಲಿಗ್ ಆಗಿರುವೆನು. ನನ್ನನ್ನು ಖ಼ಲೀಫತುಲ್ ಮಸೀಹ್ ಒಂದು ಜವಾಬ್ದಾರಿ ಕೊಟ್ಟು ಕಳುಹಿಸುತ್ತಿದ್ದಾರೆ. ಮುಂದಿನ ಹಡಗು ಯಾವಾಗ ಸಿಕ್ಕುವುದು ಎಂದು ಯಾರಿಗೆ ಗೊತ್ತು? ನೀನು ಸಮಾಧಾನದಲ್ಲಿರು. ಮುಬಾರಕಿನಿಗೆ ಏನೂ ಆಗದು. ಅನಂತರ ಅವರು ಹಡಗಿನ ಕ್ಯಾಪ್ಟನ್‌ನೊಡನೆ ದೃಢವಾದ ಸ್ವರದಿಂದ ಹೀಗೆ ಹೇಳಿದರು: ಶರತ್ತಿನ ಕಾಗದವನ್ನು ಕೊಡಿರಿ. ಎಲ್ಲಿ ಸಹಿ ಮಾಡಬೇಕು ಎಂದು ಹೇಳಿರಿ. ಮಗನು ಮೃತಪಟ್ಟರೆ ನೀವು ಅವನನ್ನು ಸಮುದ್ರಕ್ಕೆ ಎಸೆಯಿರಿ. ಆದರೆ ಅದರ ಜೊತೆಗೆ ನಾನು ಹೇಳುತ್ತೇನೆ. ಇವನಿಗೆ ಏನೂ ಆಗಲಿಕ್ಕಿಲ್ಲ. ಅಲ್ಲಾಹನ ಮೇಲೆ ಅವರಿಗಿದ್ದ ಭರವಸೆ ಇದಾಗಿತ್ತು. ಎಂದರೆ ನಾನೊಬ್ಬ ವಖ್ಫೇ ಝಿಂದಗಿ ಆಗಿರುವೆನು, ಅಲ್ಲಾಹನ ದೀನಿನ ಪ್ರಚಾರಕ್ಕಾಗಿ ನಾನು ಹೊರಟಿರುವೆನು, ಅಲ್ಲಾಹನು ಖಂಡಿತ ನನಗೆ ನೆರವಾಗುವನು. ಅವನು ನನ್ನ ಪತ್ನಿ ಮತ್ತು ಮಕ್ಕಳನ್ನು ಸಂರಕ್ಷಿಸುವನು ಎಂಬ ಭರವಸೆ ಅವರಿಗೆ ಇತ್ತು. ಹೀಗೆ ಅಲ್ಲಾಹನ ಅನುಗ್ರಹದಿಂದ ಆ 11 ವಯಸ್ಸು ಪ್ರಾಯದ ಹುಡುಗ ಜೀವಂತವಾಗಿ ಉಳಿದನು ಎಂದು ಮಾತ್ರವಲ್ಲ, 87ನೇ ವಯಸ್ಸಿನ ತನಕ ಜೀವಂತವಾಗಿ ಉಳಿದರು. ಅವರಿಗೆ ಇಸ್ಲಾಂ ಮತ್ತು ಅಹ್ಮದಿಯ್ಯತಿನ ಸೇವೆಯ ಸೌಭಾಗ್ಯ ಕೂಡ ಲಭಿಸಿತು. ತನ್ನ ತಂದೆ ಮತ್ತು ತಾತಂದಿರ ಹೆಜ್ಜೆಯನ್ನು ಹಿಂಬಾಲಿಸುತ್ತಾ ತನ್ನ ಜೀವಿತವನ್ನು ವಖ್‌ಫ್ ಮಾಡಿದರು. ಅದರ ಸೌಭಾಗ್ಯವು ಅವರಿಗೆ ಲಭಿಸಿತು. ಧಾರ್ಮಿಕ ಸೇವೆಯ ಮೈದಾನದಲ್ಲಿ ಸ್ವತಃ ಕೂಡ ಅಲ್ಲಾಹನ ಮೇಲೆ ಭರವಸೆಯ ಉನ್ನತ ಮಾದರಿಗಳನ್ನು ಉದಾಹರಣೆಗಳನ್ನು ಸ್ಥಾಪಿಸಿದರು.

ತಮ್ಮ ವಿದ್ಯಾಭ್ಯಾಸ ಪೂರ್ತಿ ಮಾಡಿದ ನಂತರ ಅವರಿಗೆ ಸರ್ಕಾರಿ ವಿಭಾಗದಲ್ಲಿ ಉತ್ತಮ ನೌಕರಿ ಕೂಡ ಲಭಿಸಿತ್ತು. ಅಲ್ಲಿ ಅವರು ಸ್ವಲ್ಪ ಕಾಲ ಕೆಲಸ ಮಾಡಿದರು. ಅನಂತರ ಅಲ್‌ಫಝ್ಲ್‌ನಲ್ಲಿ ವಖ್ಫ್ ಅಥವಾ ತಾತ್ಕಾಲಿಕ ವಖ್ಫ್ ಮಾಡಿರಿ ಎಂಬ ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿಯರ ಘೋಷಣೆಯನ್ನು ಓದಿದಾಗ ಅವರು ತನ್ನ ನೌಕರಿಯನ್ನು ಬಿಟ್ಟು ತಾತ್ಕಾಲಿಕ ವಖ್ಫ್‌ನ್ನು ಸ್ವೀಕರಿಸಲು ಖ಼ಲೀಫತುಲ್ ಮಸೀಹ್ ಸಾನಗೆ ಪತ್ರ ಬರೆದರು. ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿಯರ ನಿರ್ದೇಶನದ ಬೆಳಕಿನಲ್ಲಿ 1963ರಲ್ಲಿ ಮೊದಲ ಬಾರಿ ವಖ್ಫೇ ಆರ್ಝಿಗಾಗಿ ಎಂದರೆ, ತಾತ್ಕಾಲಿಕ ವಖ್ಫ್‌ಗಾಗಿ ಸಿರಾಲಿಯೋನಿಗೆ ಹೋದರು. ಅಲ್ಲಿ ಒಂದು ದೀರ್ಘಕಾಲ ಅವರ ತಂದೆಯಾದ ಮೌಲಾನಾ ನದೀ಼ರ್ ಅಲಿ ಸಾಹಿಬ್‌ರಿಗೆ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅಲ್ಲೇ ಅವರು ಖಬರ್ ಇತ್ತು. ಅಲ್ಲೇ ದಫನ್‌ಗೊಂಡಿದ್ದರು. ಮೌಲಾನಾ ಮುಬಾರಕ್ ಸಾಹಿಬ್‌ರು ಸೀರಲಿಯೋನ್ ತಲುಪಿದ ಕೂಡಲೇ ಮೊತ್ತಮೊದಲು ತನ್ನ ತಂದೆಯ ಖಬರಿನ ಮುಂದೆ ಹಾಜರಾದರು. ಆ ಸಮಯದಲ್ಲಿ ಅವರು ತನ್ನ ತಂದೆಯಾದ ಮೌಲಾನಾ ನದೀ಼ರ್ ಅಲಿ ಸಾಹಿಬ್‌ರು 1945, ನವೆಂಬರ್ 26ರಂದು ತನ್ನ ಒಂದು ರೋಮಾಂಚಕ ಭಾಷಣದಲ್ಲಿ ಹೇಳಿದ ಮಾತುಗಳನ್ನು ನೆನಪಿಸಿಕೊಂಡರು. ಅವರ ತಂದೆ ಹೀಗೆ ಹೇಳಿದ್ದರು: ಇಂದು ನಾವು ಅತ್ಯುನ್ನತನಾದ ಅಲ್ಲಾಹನಿಗಾಗಿ ಜಿಹಾದ್ ಮಾಡಲು ಮತ್ತು ಇಸ್ಲಾಮನ್ನು ಪಶ್ಚಿಮ ಆಫ್ರಿಕದಲ್ಲಿ ಹರಡಲಿಕ್ಕಾಗಿ ಹೋಗುತ್ತಿದ್ದೇವೆ. ಮರಣವೆಂಬುದು ಮನುಷ್ಯನೊಂದಿಗೆ ಸೇರಿಕೊಂಡಿರುತ್ತದೆ. ನಮ್ಮಲ್ಲಿ ಯಾರಾದರೂ ಮೃತಪಟ್ಟರೆ, ಭೂಮಿಯ ಒಂದು ದೂರ ಪ್ರದೇಶದಲ್ಲಿ ಸ್ವಲ್ಪ ಭೂಸ್ವತ್ತು ಅಹ್ಮದಿಯರದ್ದಾಗಿದೆ ಎಂದು ಮಾತ್ರ ಭಾವಿಸಬೇಡಿರಿ. ಬದಲಾಗಿ ಅಲ್ಲಿಗೆ ಹೋಗಿರಿ ಮತ್ತು ಯಾವ ಉದ್ದೇಶಕ್ಕಾಗಿ ಆ ಸ್ಥಳದಲ್ಲಿ ನಾವು ಖಬರಿನ ರೂಪದಲ್ಲಿ ಸ್ವಲ್ಪ ಭೂಮಿಯನ್ನು ವಶಪಡಿಸಿಕೊಂಡಿದ್ದೇವೋ ಆ ಉದ್ದೇಶವನ್ನು ಪೂರ್ತಿಗೊಳಿಸಿರಿ. ಹೇಳುವುದರ ಅರ್ಥವೇನೆಂದರೆ, ಒಂದು ಖಬರಿನ ಕಾರಣದಿಂದ ಸ್ವಲ್ಪ ಭೂಪ್ರದೇಶ ಅಹ್ಮದಿಯ್ಯತ್ತಿನ ಕೈಯಲ್ಲಿರುವುದು. ನಮ್ಮ ಖಬರಿನ ವತಿಯಿಂದ ಇರುವ ಬೇಡಿಕೆಯೇನೆಂದರೆ, ಯಾವ ಉದ್ದೇಶಕ್ಕಾಗಿ ನಮ್ಮ ಜೀವಗಳು ತ್ಯಾಗಗೊಂಡಿವೆಯೋ ಅದನ್ನು ಪೂರ್ತಿ ಮಾಡಲಿಕ್ಕಾಗಿ ನೀವು ನಿಮ್ಮ ಮಕ್ಕಳನ್ನು ಉತ್ತಮ ರೀತಿಯಲ್ಲಿ ತರಬೇತಿ ಮಾಡಿರಿ. ಹೀಗೆ ತನ್ನ ತಂದೆಯ ಉಪದೇಶವನ್ನು ಈಡೇರಿಸುತ್ತಾ ಮೌಲಾನಾ ನದೀ಼ರ್ ಸಾಹಿಬ್ ಅಲ್ಲಿಗೆ ತಲುಪಿದರು. ತನ್ನ ತಂದೆಯ ಖಬರಿನ ಮುಂದೆ ಹಾಜರಾಗಿ ಹೀಗೆ ಹೇಳಿದರು: ನಾನು ಹಾಜರಿದ್ದೇನೆ ಮತ್ತು ನಿಮ್ಮ ಕರೆಗೆ ಉತ್ತರಕೊಡಲು ನಾನು ಬಂದಿದ್ದೇನೆ.

ಮೌಲಾನಾ ಮುಬಾರಕ್ ಸಾಹಿಬ್‌ರಿಗೆ ಸೀರಲಿಯೋನಿನ ಅನೇಕ ಸ್ಥಳಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅನಂತರ ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರ ನರ್ದೇಶನ ಪ್ರಕಾರ 1985ರಲ್ಲಿ ಪಾಕಿಸ್ತಾನಕ್ಕೆ ಮರಳಿ ಬಂದರು. 1985ರಲ್ಲಿ ಅವರು ಆಫ್ರಿಕದಿಂದ ಮರಳಿ ಬಂದಾಗ ತಾತ್ಕಾಲಿಕ ವಖ್ಫಿಗೆ ಬದಲಾಗಿ ಪೂರ್ಣವಾದ ವಖ್ಫ್‌ನ್ನು ಸ್ವೀಕರಿಸಲು ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರೊಡನೆ ವಿನಂತಿಸಿದರು. ಅದನ್ನು ಹುಝೂರ್ ಅಂಗೀಕರಿಸಿದರು. ಅನಂತರ 1988ರಲ್ಲಿ ಮುಬಲ್ಲಿಗ್ ಆಗಿ ಕೆನಡಗೆ ಕಳುಹಿಸಲಾಯಿತು. ಅಲ್ಲಿ ಅವರು ಬೇರೆ ಬೇರೆ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. 2003ರಲ್ಲಿ ಕೆನಡದ ಜಾಮಿಅವನ್ನು ತೆರೆಯಲು ತೀರ್ಮಾನ ಮಾಡಲಾದಾಗ, ಅದರ ಸ್ಥಾಪನೆಯ ಮತ್ತು ಅದರ ಪ್ರಿನ್ಸಿಪಲ್ ಆಗಿ ಮುಬಾರಕ್ ಸಾಹಿಬ್‌ರನ್ನು ನಿಶ್ಚಯಿಸುವ ಮಂಜೂರಾತಿ ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್(ರಹ್) ನೀಡಿದ್ದರು. ಆದರೆ ಖ಼ಲೀಫತುಲ್ ಮಸೀಹ್ ರಾಬಿಅ್‌ರ ಜೀವಿತದಲ್ಲಿ ಜಾಮಿಅ ತೆರೆದಿರಲಿಲ್ಲ. ಅನಂತರ ನನ್ನ ಕಾಲದಲ್ಲಿ ಜಾಮಿಅ ತೆರೆಯಿತು. ಆಗ ಹಝ್ರತ್ ಖ಼ಲೀಫತುಲ್ ಮಸೀಹ್‌ರ ತೀರ್ಮಾನವನ್ನೇ ನಾನು ಜಾರಿಗೆ ತಂದೆ. ಮೌಲಾನಾ ಮುಬಾರಕ್ ಸಾಹಿಬ್‌ರನ್ನೇ ಪ್ರಿನ್ಸಿಪಲ್ ಆಗಿ ನಿಶ್ಚಯಿಸಲಾಯಿತು. ಹೇಗಿದ್ದರೂ ಮೌಲಾನಾ ಮುಬಾರಕ್ ಸಾಹಿಬ್‌ರು ಜಾಮಿಅ ಅಹ್ಮದಿಯಾ ಕೆನಡದ ಮೊದಲ ಪ್ರಿನ್ಸಿಪಲ್ ಆಗಿದ್ದರು. 2009ರ ತನಕ ಅವರು ಪ್ರಿನ್ಸಿಪಲ್ ಆಗಿ ಸೇವೆ ಸಲ್ಲಿಸಿದರು. 2010ರಲ್ಲಿ ಕೆನಡದ ಮಿಶನರಿ ಇಂಚಾರ್ಜ್ ಆಗಿ ನಿಶ್ಚಯಿಸಲಾಯಿತು. 2018ರ ತನಕ ಅವರಿಗೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅವರ ಸೇವೆಯ ಪೂರ್ಣ ಕಾಲಾವಧಿ 61 ವರ್ಷಗಳಾಗಿದ್ದುವು. ಅವರ ತಾತ್ಕಾಲಿಕ ವಖ್ಫ್ ಕೂಡ ಪೂರ್ಣ ವಖ್ಫೇ ಆಗಿತ್ತು. ಅದೇ ರೀತಿಯಲ್ಲಿ ಮೌಲಾನ ಸಾಹಿಬ್‌ರಿಗೆ ಕೇಂದ್ರ ಪ್ರತಿನಿಧಿ ಎಂಬ ನೆಲೆಯಲ್ಲಿ ಅನೇಕ ಜಲ್ಸಗಳಲ್ಲಿ ಮತ್ತು ಪ್ರೋಗ್ರಾಮುಗಳಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. ಅವರ ಭಾಷಣಗಳನ್ನು ನಮ್ಮವರು ಮತ್ತು ಪರರು ಬಹಳ ಇಷ್ಟಪಡುತ್ತಿದ್ದರು. ಅವರ ಭಾಷಣಗಳು ಬಹಳ ಪ್ರಭಾವಶಾಲಿಯಾಗಿದ್ದುವು. ಆಲಿಸುವವರನ್ನು ಪೂರ್ಣವಾಗಿ ತನ್ನ ಕಡೆಗೆ ಎಳೆಯುತ್ತಿದ್ದರು. 2016ರಲ್ಲಿ ಅವರಿಗೆ ನನ್ನ ಪ್ರತಿನಧಿಯಾಗಿ ನೂರ್ ಆಸ್ಪತ್ರೆಯ ಅಡಿಗಲ್ಲು ಹಾಕಲು ಸೌಭಾಗ್ಯ ಲಭಿಸಿತು. ಅವರ ತಬ್ಲೀಗ್ ಪರವಾದ ಲೇಖನಗಳು ಕೆನಡದ ನ್ಯಾಶನಲ್ ನ್ಯೂಸ್, ಟೊರೊಂಟೋ ಸ್ಟಾರ್ ಮತ್ತು ಆಟ್ವಾಸ್ಟೇಝ್ಝುನ್ ಮುಂತಾದ ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದ್ದುವು. ಮೌಲಾನಾ ಮುಬಾರಕ್ ಸಾಹಿಬ್‌ರಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ತಜಲ್ಲಿಯಾತೆ ಇಲಾಹಿಯಾ, ಫತ್‌ಹೇ ಇಸ್ಲಾಂ ಎಂಬೀ ಪುಸ್ತಕಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆ ಮಾಡಲು ಸೌಭಾಗ್ಯ ಲಭಿಸಿತು. ಅದಲ್ಲದೇ ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರ ಗಲ್ಫ್ ಕ್ರೈಸಿಸನ್ನು ಅವರು ಅನುವಾದಿಸಿದ್ದರು.

ದಿವಂಗತರು ತನ್ನ ಪತ್ನಿಯಾದ ಅಮತುಲ್‌ಹಫೀಝ್ ನದೀ಼ರ್ ಸಾಹಿಬರನ್ನು ಅಲ್ಲದೇ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ನಾನು ಹೇಳಿದಂತೆ ಮೌಲಾನಾ ಸಾಹಿಬ್‌ರು ಅನೇಕ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಒಬ್ಬ ಮಾದರಿ ವಖ್ಫೇ ಝಿಂದಗಿಯಾಗಿದ್ದರು ಮತ್ತು ಮುರಬ್ಬಿಗಳಿಗೆ ವಿಶೇಷವಾಗಿ ಒಂದು ಮಾದರಿಯಾಗಿದ್ದರು. ಧರ್ಮಕ್ಕೆ ಲೌಕಿಕತೆ ಮೇಲೆ ಆದ್ಯತೆ ನೀಡಬೇಕು ಎಂಬುವುದರ ಕೃತಿರೂಪದ ಚಿತ್ರವಾಗಿತ್ತು ಅವರ ಜೀವಿತ. ಸದಾ ಜಮಾಅತಿನ ಸೇವೆ ಸಲ್ಲಿಸಿದರು, ಖ಼ಲೀಫತುಲ್ ಮಸೀಹ್‌ರನ್ನು ಅನುಸರಿಸುವುದು ತನ್ನ ಗುರಿಯನ್ನಾಗಿ ಮಾಡಿಕೊಂಡಿದ್ದರು. ನಾನು ಹೇಳಿದಂತೆ ಭಾಷಣಕಲೆಯಲ್ಲಿ ಪ್ರವೀಣರಾಗಿದ್ದರು. ಉರ್ದು ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಭಾಷಣ ಮಾಡಲು ಉತ್ತಮ ಸಾಮರ್ಥ್ಯ ಹೊಂದಿದ್ದರು. ಬಹಳ ಪ್ರಭಾವಶಾಲಿ ಭಾಷಣಗಳನ್ನು ನೀಡುತ್ತಿದ್ದರು. ಅವರ ಪತ್ನಿಯಾದ ಅಮತುಲ್ ಹಫೀಝ್ ಸಾಹಿಬ ಬರೆಯುತ್ತಾರೆ: ಪೂರ್ತಿ ಜೀವಿತವನ್ನು ಸತ್ಕರ್ಮ ಮತ್ತು ದೇವಭಕ್ತಿಯಿಂದ ಸಾಗಿಸಿದರು. ಜಮಾಅತಿನ ಒಂದೊಂದು ಪೈಸೆಯ ಬೆಲೆ ಮತ್ತು ಚಿಂತೆ ಅವರಿಗಿತ್ತು. ತನ್ನ ಜೀವಿತವನ್ನು ಅತ್ಯಂತ ಸರಳವಾಗಿ ಸಾಗಿಸಿದರು. ಸಿರಲಿಯೋನಿನಿಂದ ಮರಳಿ ಬಂದ ನಂತರವೂ ಮೌನವಾಗಿ ಅಲ್ಲಿಯ ಕೆಲವು ಬಡವರ ಸಹಾಯವನ್ನು ಮಾಡುತ್ತಿದ್ದರು. ಅವರು ಅತ್ಯುತ್ತಮ ವಖ್ಫೇ ಝಿಂದಗಿ ಎಂಬುದರ ಜೊತೆಗೆ ಅತ್ಯುತ್ತಮ ಪತಿ ಮತ್ತು ಅತ್ಯಂತ ಕೃಪಾಳು ತಂದೆಯಾಗಿದ್ದರು. ಜಮಾಅತ್ ನನ್ನ ಮೇಲೆ ಇಷ್ಟೆಲ್ಲ ಖರ್ಚು ಮಾಡುತ್ತಿರುವಾಗ ನಾನು ಹೇಗೆ ಜಮಾಅತಿಗೆ ಪ್ರಯೋಜನ ತಲುಪಿಸಬಹುದು ಎಂಬುದರ ಬಗ್ಗೆ ಯೋಚಿಸುತ್ತಿದ್ದರು, ಚಿಂತಿಸುತ್ತಿದ್ದರು. ಖ಼ಲೀಫತುಲ್ ಮಸೀಹ್‌ರ ಅನಿಷ್ಟತೆಯನ್ನು ಯಾವುದೇ ವಿಧದಲ್ಲೂ ಸಹಿಸಲು ಸಾಧ್ಯವಲ್ಲ.

ಅವರ ಮಕ್ಕಳು ಅವರ ಬಗ್ಗೆ ಬರೆದಿರುವರು. ಅವರೆಲ್ಲರೂ ಒಟ್ಟಾಗಿ ಬರೆದಿರುವುದೇನೆಂದರೆ, ತಂದೆಗೆ ಅಲ್ಲಾಹನ ಮೇಲೆ ಮತ್ತು ಪರಲೋಕದ ಬಗ್ಗೆ ಸುದೃಢವಾದ ವಿಶ್ವಾಸ ಇತ್ತು. ಖಿ಼ಲಾಫತಿನ ಅನುಸರಣೆ ಮತ್ತು ಜಮಾಅತಿನ ವ್ಯವಸ್ಥೆಯ ಮೇಲೆ ದೃಢವಾದ ವಿಶ್ವಾಸ ಹೊಂದಿದ್ದರು. ಅಲ್ಲಾಹನ ಮೇಲೆ ಬಹಳ ಭರವಸೆ ಹೊಂದಿದ್ದರು. ಅಲ್ಲಾಹನು ನನ್ನನ್ನು ಎಂದಿಗೂ ಕೈಬಿಡಲಿಕ್ಕಿಲ್ಲ ಮತ್ತು

ಸದಾ ನನ್ನ ಸಹಾಯಕ್ಕಾಗಿ ಬರುವನು ಎಂದು ಹೆಚ್ಚಾಗಿ ಹೇಳುತ್ತಿದ್ದರು. ಅಲ್ಲಾಹನ ವರ್ತನೆ ಸಹ ಅವರೊಂದಿಗೆ ಹಾಗೆಯೇ ಆಗಿತ್ತು. ಅವರು ಮಿಶನರಿ ಇಂಚಾರ್ಜ್ ಆಗಿದ್ದಾಗಲೂ ನಿವೃತ್ತರಾದ ನಂತರ ಆರೋಗ್ಯ ಕೆಟ್ಟು ಹೋದಾಗಲೂ ಅಮೀರ್ ಸಾಹಿಬ್ ಅವರನ್ನು ಕೆಲವೊಮ್ಮೆ ಎಲ್ಲಿಗಾದರೂ ಕಳುಹಿಸಿದರೆ, ಆವಾಗಲೆಲ್ಲ ಧನತ್ಯಾಗ ಮಾಡಲು ಜನರನ್ನು ಹುರಿದುಂಬಿಸುತ್ತಿದ್ದರು ಮತ್ತು ಜನರ ಮೇಲೆ ಅದರ ಪ್ರಭಾವ ಉಂಟಾಗುತ್ತಿತ್ತು. ಅದೇಕೆಂದರೆ, ಮೊದಲು ಅವರು ಸ್ವತಃ ಅದರಲ್ಲಿ ತನ್ನ ಪಾಲನ್ನು ಹಾಕುತ್ತಿದ್ದರು. ಅನಂತರ ಜಮಾಅತಿನವರನ್ನು ಧನತ್ಯಾಗ ಮಾಡಲು ಉಪದೇಶಿಸುತ್ತಿದ್ದರು.

ಅವರ ಹಿರಿಯ ಮಗಳು ಹೇಳುತ್ತಾಳೆ: ಅಹ್ಮದಿಯಾ ಖಿಲಾಫತಿನೊಂದಿಗೆ ಸುದೃಢವಾದ ಸಂಬಂಧವನ್ನು ಇರಿಸಲು ಸಲಹೆ ನೀಡುತ್ತಿದ್ದರು. ಸದಾ ನಮ್ಮಲ್ಲಿ ಜಮಾಅತಿನ ವ್ಯವಸ್ಥೆಯ ಮೇಲೆ ಪ್ರೀತಿ ಮತ್ತು ಗೌರವ ಉಂಟುಮಾಡಲು ಪ್ರಯತ್ನಿಸುತ್ತಿದ್ದರು. ಖಲೀಫತುಲ್ ಮಸೀಹ್‌ರ ಪ್ರತಿಯೊಂದು ನಿರ್ದೇಶನವನ್ನು ನಾವು ಅನುಸರಿಸುವವರಾಗಲು ಅವರು ಬಯಸುತ್ತಿದ್ದರು. ಈ ಸಂಗತಿಗಳ ಬಗ್ಗೆ ಬಹುತೇಕ ಸಭೆಗಳಲ್ಲಿ ಹೇಳುತ್ತಿದ್ದರು. ಮೊಮ್ಮಕ್ಕಳು ಒಟ್ಟುಗೂಡುವಾಗ ಎಲ್ಲರನ್ನು ಕುಳ್ಳಿರಿಸಿ ಉಪದೇಶಿಸುತ್ತಿದ್ದರು. ಉಪದೇಶದಲ್ಲಿ ಈ ಸಂದೇಶ ಇರುತ್ತಿತ್ತು: ನಾವು ಲೌಕಿಕವಾದ ಕಾರ್ಯಗಳಲ್ಲಿ ಮಾತ್ರ ನಿರತರಾಗಬಾರದು. ನಮ್ಮ ಸಂಬಂಧ ಅಲ್ಲಾಹನು ಮತ್ತು ಖಿಲಾಫತಿನೊಂದಿಗೆ ಇದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಅವರು ಹೀಗೆಯೂ ಹೇಳುತ್ತಿದ್ದರು: ಜಮಾಅತಿನ ಕೆಲಸ ಖಂಡಿತ ಪೂರ್ತಿಯಾಗುವುದು. ಅದರಲ್ಲಿ ಯಾವುದೇ ಸಂಶಯವಿಲ್ಲ. ನೀವು ಜಮಾಅತಿನ ಸೇವೆ ಮಾಡದಿದ್ದರೆ ಅಲ್ಲಾಹನು ಬೇರೆ ಜನರನ್ನು ನಿಮಗಿಂತ ಉತ್ತಮವಾಗಿ ಕೆಲಸ ಮಾಡಲು ತರುವನು.

ಅವರ ಕಿರಿಯ ಮಗಳು ಒಂದು ಘಟನೆಯನ್ನು ಬರೆಯುತ್ತಾಳೆ: ಸಿರಲಿಯೋನಿನಲ್ಲಿ ಒಂದು ಮಸೀದಿಯ ನಿರ್ಮಾಣದ ವೇಳೆ ಕಾರ್ಮಿಕರು ಕೂಲಿಯನ್ನು ಬೇಡಿದಾಗ ತಂದೆಯ ಬಳಿ ಅವರಿಗೆ ಕೊಡಲಿಕ್ಕಾಗಿ ಹಣವಿದ್ದಿರಲಿಲ್ಲ. ಆದರೂ ತಂದೆ ಅವರೊಡನೆ ಮರುದಿನ ಬಂದರೆ ಕೂಲಿ ಕೊಡುವುದಾಗಿ ಹೇಳಿದರು. ಬೆಳಿಗ್ಗೆಯಾದಾಗ ತಂದೆ ಮನೆಯಿಂದ ಹೊರಗೆ ಬಂದಾಗ ಕಾರ್ಮಿಕರು ಕಾಯುತ್ತಾ ಅಲ್ಲಿ ನಿಂತಿದ್ದರು. ಹಣದ ವ್ಯವಸ್ಥೆ ಅಷ್ಟರ ವರೆಗೂ ಆಗಿರಲಿಲ್ಲ. ಆಗ ತಂದೆ ಕಾರ್ಮಿಕರೊಡನೆ ಹೇಳಿದರು: ಈಗ ನನ್ನ ಬಳಿ ಹಣವಿಲ್ಲ. ಆದರೆ ನಾನು ದುಆ ಮಾಡುತ್ತೇನೆ. ನೀವು ಸ್ವಲ್ಪ ಕಾಯಿರಿ. ಇನ್‌ಶಾ ಅಲ್ಲಾಹ್ ಅಲ್ಲಾಹನು ಬೇಗನೇ ಅದರ ಏರ್ಪಾಡು ಮಾಡುವನು. ಅದೇ ವೇಳೆ ಒಂದು ವಾಹನ ಅವರ ಸಮೀಪಕ್ಕೆ ವೇಗವಾಗಿ ಬಂದಿತು. ಅವರು ತಂದೆಗೆ ಒಂದು ಕವರನ್ನು ಕೊಟ್ಟರು. ಅದರಲ್ಲಿ ಹಣವಿತ್ತು. ಬಂದವರು ಹೇಳಿದರು: ನೀವು ಮಸೀದಿ ನಿರ್ಮಾಣ ಮಾಡುತ್ತಿದ್ದೀರಿ ಎಂದು ಒಬ್ಬರು ಕೇಳಿದ್ದರು. ಆದ್ದರಿಂದ ಅವರು ಈ ಹಣವನ್ನು ಕಳಿಸಿದ್ದಾರೆ. ನೀವು ಇದನ್ನು ನಿಮ್ಮ ಬಳಿಯಿರಿಸಿರಿ. ಈ ಹಣವನ್ನು ಯಾರು ನೀಡಿರುವರು ಎಂದು ತಂದೆ ಅವರೊಡನೆ ಕೇಳುವುದಕ್ಕೆ ಮುಂಚಿತವಾಗಿ ಆ ವಾಹನ ವೇಗವಾಗಿ ಹೊರಟು ಹೋಯಿತು. ಅಲ್ಲಾಹನು ಅವರ ಪ್ರಾರ್ಥನೆಯ ಸ್ವೀಕಾರ ಮಾಡಿರುವನು ಎಂದು ಅವರಿಗೆ ದೃಢವಿಶ್ವಾಸವಾಯಿತು. ಹೀಗೆ ಆ ಹಣದಿಂದ ತಂದೆ ಕಾರ್ಮಿಕರ ಕೂಲಿಯನ್ನು ಕೊಟ್ಟರು.

ಒಟ್ಟಿನಲ್ಲಿ ಇದಾಗಿತ್ತು ಅವರಿಗೆ ಅಲ್ಲಾಹನ ಮೇಲೆ ಇದ್ದ ಭರವಸೆ ಮತ್ತು ಇದಾಗಿತ್ತು ಅವರೊಂದಿಗೆ ಅಲ್ಲಾಹನ ವರ್ತನೆ. ಅವರೊಂದಿಗೆ ಅಲ್ಲಾಹನ ವರ್ತನೆಯ ಈ ರೀತಿಯ ಅನೇಕ ಘಟನೆಗಳು ಇವೆ. ಅವುಗಳ ಬಗ್ಗೆ ಅನೇಕ ಜನರು ಮತ್ತು ಮುರಬ್ಬಿಯರು ಸಹ ಬರೆದಿರುವರು. ನಾನು ಹೇಳಿದಂತೆ ಅವರು ಖಂಡಿತವಾಗಿಯೂ ಸತ್ಕರ್ಮಗಳನ್ನು ಮಾಡುವ ಪಂಡಿತರಾಗಿದ್ದರು. ಆದ್ದರಿಂದಲೇ ಅವರ ಭಾಷಣಗಳ ಪ್ರಭಾವ ಕೂಡ ಜನರ ಮೇಲೆ ಆಗುತ್ತಿತ್ತು. ಆದರೆ ಖಿಲಾಫತಿನ ಮುಂದೆ ಅವರಿಗೆ ಅಪರಿಮಿತವಾದ ವಿನಯವಂತಿಕೆ ಇತ್ತು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅಲ್ಲಾಹನು ಅವರ ಮಕ್ಕಳು ಮತ್ತು ಸಂತಾನ ಪರಂಪರೆಯನ್ನು ಅವರ ಹೆಜ್ಜೆಗುರುತುಗಳ ಮೇಲೆ ನಡೆಸಲಿ. ಅವರ ಮಕ್ಕಳನ್ನು ಮತ್ತು ಸಂತಾನ ಪರಂಪರೆಯನ್ನು ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ. ಅಲ್ಲಾಹನು ಜಮಾಅತಿಗೂ ಅವರ ಹಾಗೆ ಉದಾತ್ತ ಮತ್ತು ನಿಸ್ವಾರ್ಥ ಸೇವೆ ಸಲ್ಲಿಸುವವರನ್ನು ದಯಪಾಲಿಸಲಿ. ಕೆನಡದ ಜಾಮಿಆ ಅಹ್ಮದಿಯದಲ್ಲಿ ಕಲಿತವರಿಗೆ ಅವರ ಜೊತೆಗೆ ಅನೇಕ ಘಟನೆಗಳಿವೆ. ಅವರು ಹೇಗೆ ತರಬೇತಿ ಮಾಡುತ್ತಿದ್ದರು, ಅವರು ಹೇಗೆ ತಬ್ಲೀಗ್ ಮಾಡಲು ಕಲಿಸಿದ್ದರು, ಹೇಗೆ ನೈತಿಕಗುಣಗಳನ್ನು ಕಲಿಸಿದ್ದರು, ಹೇಗೆ ಧಾರ್ಮಿಕ ಕಾರ್ಯಗಳನ್ನು ಕಲಿಸಿದ್ದರು ಎಂಬುದರ ಬಗ್ಗೆ ಅವರು ಬರೆದಿರುವರು. ಹೇಗಿದ್ದರೂ ಆ ಮುರಬ್ಬಿಗಳು ಅವರಿಂದ ಬಹಳಷ್ಟು ಪ್ರಯೋಜನ ಪಡೆದಿದ್ದರು. ಈ ಘಟನೆಗಳು ಕೇವಲ ನೆನಪಿನಲ್ಲಿಡಲು ಮತ್ತು ಹೇಳಿಕೊಳ್ಳಲು ಮಾತ್ರವಾಗದಿರಲಿ. ಬದಲಾಗಿ ಆ ಮುರಬ್ಬಿಗಳು ಈ ಸಂಗತಿಗಳನ್ನು ಮಾಡುವವರಾಗಬೇಕು ಎಂಬುದನ್ನು ನೆನಪಿನಲ್ಲಿ ಇರಿಸಬೇಕು. ಅಲ್ಲಾಹನು ಅವರಿಗೂ ಅದರ ಸೌಭಾಗ್ಯ ನೀಡಲಿ.

***********

**MUSLIM TELEVISION AHMADIYYA INTERNATIONAL**
**www.mta.tv**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಯಾವುದೇ ಪುರಾವೆಯ ಮೇಲೆ ಮಾಡಲಾಗುತ್ತಿಲ್ಲ, ಬದಲು ಆ ಪುರಾವೆಗಳಿದ್ದರೂ ಬಹುದೇವಾರಾಧನೆಯಲ್ಲಿ ತೊಡಗಿರುವುದರ ಕಾರಣವೇನೆಂದರೆ, ಈ ಜನರು ಪರಲೋಕದ ಬಗ್ಗೆ ವಿಶ್ವಾಸ ಹೊಂದಿರುವುದಿಲ್ಲ. ಅದರ ನಿರಾಕರಣೆಯಿಂದಾಗಿ ಅವರಲ್ಲಿ ಗಾಂಭೀರ್ಯತೆ ಉಳಿದಿರುವುದಿಲ್ಲ. ಏಕೆಂದರೆ ಅವರು ತಾವು ಮಾಡಿದ ಕಾರ್ಯಗಳಿಗೆ ಯಾವುದೇ ಪರಿಣಾಮವೇ ಇಲ್ಲ ಎಂದು ಭಾವಿಸುತ್ತಾರೆ. ಆದುದರಿಂದ ಪಾಪ ಪುಣ್ಯದ ಭಾವನೆ ಇರುವುದಿಲ್ಲ, ಆ ಬಗ್ಗೆ ಚಿಂತಿಸುವುದಿಲ್ಲ ಮತ್ತು ತಮ್ಮದೇ ಹಟ ಹಾಗೂ ದ್ವೇಷ ಸಾಧಿಸುತ್ತಾರೆ. ಏಕೆಂದರೆ ಅವರು ಭಾವಿಸುವುದು ನಮಗೆ ಹಿಡಿಯುವವರೇ ಇಲ್ಲ. ಆದುದರಿಂದ ಅವರ ಹೃದಯಗಳು ಬರಬರುತ್ತಾ ಕಠಿಣ ಹಾಗೂ ದಡ್ಡತನಕ್ಕೆ ಒಳಗಾಗುತ್ತವೆ. ಮಾರ್ಗದರ್ಶನ ಹಾಗೂ ಸನ್ಮಾರ್ಗ ದೊರೆಯುವುದಿಲ್ಲ. ಅದು ನಮ್ಮ ಕಾರ್ಯಗಳಿಗೆ ಒಂದು ಪರಿಣಾಮ ಉಂಟಾಗಲಿದೆ ಎಂಬ ಕಲ್ಪನೆ ಬರುವಾಗ ಮಾತ್ರ ಸಾಧ್ಯ. ಪರಲೋಕವನ್ನು ನಿರಾಕರಿಸುವುದರಿಂದ ಅವರಲ್ಲಿ ನಿರುತ್ಸಾಹ ಮತ್ತು ಗಾಂಭೀರ್ಯತೆಯ ಅಭಾವ ಉಂಟಾಗಿದೆ ಮತ್ತು ಅವರ ಹೃದಯಗಳು ಜ್ಞಾನದಿಂದ ವಂಚಿತವಾಗಿವೆ. ಅದೇ ಕಾರಣದಿಂದ ಯಥಾರ್ಥ ಮಾತುಗಳನ್ನು ನಿಶ್ಚಿತ ಮಾತುಗಳನ್ನು ನಿರಾಕರಿಸಲು ಧೈರ್ಯ ತೋರಿಸುತ್ತಾರೆ ಮತ್ತು ಯೋಚಿಸಲು ಮುಂದಾಗುವುದಿಲ್ಲ. ಇಲ್ಲಿ 'ಮುನ್‌ಕಿರತುನ್' ಅರ್ಥವು ನಿರಾಕರಣೆ ಮಾಡುವವರು ಎಂದಲ್ಲ, ಬದಲು ಅಜ್ಞಾನಿ ಮತ್ತು ಮೂಢತೆ ಎಂದಾಗಿದೆ. ಮತ್ತು ಇಲ್ಲಿ ತಿಳಿಸಲಾಗಿದೆ. ಮರಣದ ನಂತರದ ಜೀವನದಲ್ಲಿ ವಿಶ್ವಾಸವಿಲ್ಲದ ಕಾರಣ ಅವರಲ್ಲಿ ಯೋಚನಾಶಕ್ತಿ ಹರಣವಾಗಿದೆ. ಈ ಅಭ್ಯಾಸದಿಂದಾಗಿ ಅವರ ಹೃದಯಗಳು ಯೋಚನಾ ಶಕ್ತಿ ಕಳೆದುಕೊಂಡಿದೆ. ಮತ್ತು ನಮ್ಮ ನಂಬಿಕೆಗಳಲ್ಲಿ ಒಂದಕ್ಕೆ ವಿರುದ್ಧವಾಗಿದೆ ಎಂದು ಅವರು ತಿಳಿದಿರುವುದಿಲ್ಲ.

ಎರಡನೇಯ ಫಲಿತಾಂಶ ಮರಣದ ನಂತರ ಜೀವಿತದ ವಿಶ್ವಾಸದ ನಿರಾಕರಣೆಯಿಂದಾಗಿ ಆಗುವುದೇನೆಂದರೆ ಅವರಲ್ಲಿ ಅಹಂಕಾರ ಉಂಟಾಗುವುದು. ಏಕೆಂದರೆ ಯಾವ ವ್ಯಕ್ತಿ ಶಿಕ್ಷೆ ಮತ್ತು ಪರಿಹಾರ ನಂಬುವುದಿಲ್ಲವೋ ಅವನು ಉದ್ಧಟನಾಗುತ್ತಾನೆ ಮತ್ತು ಸತ್ಯವನ್ನು ಒಪ್ಪುವ ಅಗತ್ಯವೆಂದು ಭಾವಿಸುವುದಿಲ್ಲ.

ಅಂತೂ **"ಖುಲೂಬುಹುಮ್ ಮುನ್‌ಕಿರತುನ್** ಮತ್ತು **ಹುಮ್ ಮುಸ್ತಕ್‌ಬಿರೂನ್"** ಗಳ ತಾತ್ಪರ್ಯ, ವಾಸ್ತವದಲ್ಲಿ ಎರಡು ರೀತಿಯ ಬಹುದೇವಾರಾಧಕರ ಉಲ್ಲೇಖ ಮಾಡಲಾಗಿದೆ. ಒಂದು ಅವರಲ್ಲಿ ಯೋಚನಾಶಕ್ತಿ ಇಲ್ಲವಾಗಿದೆ. ಅವರು ಅಜ್ಞಾನತೆಯಲ್ಲಿ ತೇಲಾಡುತ್ತಿದ್ದಾರೆ. ಈ ಅಜ್ಞಾನತೆಯ ಕಾರಣದಿಂದಾಗಿ ಅವರು ಸತ್ಯವನ್ನು ತಿಳಿಯುವುದರಿಂದ ವಿವಶರಾಗಿದ್ದಾರೆ ಮತ್ತು ಬೇರೆ ಜನರ ಸಾಕ್ಷ್ಯಗಳನ್ನು ಕೇಳಿಯೂ ಸಹ, ದೇವನೊಬ್ಬನು ಮನದಿಂದ ಅಂತೂ ಸರಿ ಎಂದು ಭಾವಿಸುತ್ತಾರೆ. ಆದರೆ ಅಹಂಕಾರ ಮತ್ತು ಪರಿಹಾರಗಳ ನಿರಾಕರಣೆಯಿಂದಾಗಿ ಅವರಿಗೆ ಭಯ ಉಂಟಾಗುವುದಿಲ್ಲ ಮತ್ತು ಸತ್ಯವನ್ನು ತಿರಸ್ಕರಿಸುವುದರಲ್ಲಿ ಯಾವ ಹಾನಿಯೂ ಭಾವಿಸುವುದಿಲ್ಲ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-153 ಮುದ್ರಣ 240 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಖುರ್‌ಆನ್‌ನಲ್ಲಿ ಸ್ಪಷ್ಟಪಡಿಸಲಾಗಿದೆ. ಅಂಜುಮನ್ ಕೊಟ್ಟ ದೂರಿನಿಂದ ಯಾವ ಯಶಸ್ಸು ದೊರೆಯಬಹುದು ಎಂದು ನಾವು ಕಾಯುತ್ತಿದ್ದೆವು. ಅದರಿಂದ ಹೇಗೆ ಅವರು ಉತ್ತರ ಬರೆಯದೆ ತಮ್ಮನ್ನು ರಕ್ಷಿಸಿಕೊಳ್ಳಬಹುದೆಂದು. ಒಂದು ವೇಳೆ ಆ ಆರೋಪದಿಂದ ಕೂಡಿದ ಎಲ್ಲ ಪ್ರಕಟಿತ ಗ್ರಂಥಗಳನ್ನು, ಪಂಜಾಬ್ ಮತ್ತು ಭಾರತದಿಂದ ಹಿಂಪಡೆದರೂ ಅದನ್ನು ಸುಟ್ಟು ಹಾಕಿದರೂ, ಮುಂದೆ ಕಾನೂನಾತ್ಮಕವಾಗಿ ಎಚ್ಚರಿಕೆ ನೀಡಿದರು. ಮುಂದೆ ಯಾವ ಪಾದರಿಯು ಇಸ್ಲಾಂ ಧರ್ಮದ ವಿರುದ್ಧ ಅಪಶಬ್ದಗಳನ್ನು ಬಳಸಬಾರದು, ಅದಾಗ್ಯೂ ಅದು ಉತ್ತರ ನೀಡುವಂತಹ ಹೆಜ್ಜೆಗೆ ಸಮಾನ ಆಗಲಾರದು. ಒಂದು ವೇಳೆ ಅಂಜುಮನ್ ಕೊಟ್ಟ ಅರ್ಜಿಯ ಮೇಲೆ ಯಾವ ಕ್ರಮವು ಕೈಗೊಳ್ಳಲಿಲ್ಲ ಎಂದಾದರೆ ಅಥವಾ ನಾಮಮಾತ್ರಕ್ಕೆ ಸಾಧಾರಣ ರೀತಿಯ ಕ್ರಮ ಕೈಗೊಂಡರೂ ಅದರಿಂದ ವಿರೋಧಿಗಳಿಗೆ ಬಲಸಿಕ್ಕಂತಾಗುವುದು, ಆದುದರಿಂದ ನಮಗೆ ಅಂಜುಮನಿನ ಈ ಹೆಜ್ಜೆಯಿಂದ ತುಂಬಾ ಖೇದವಾಗುತ್ತದೆ. (ಅಲ್ ಬಲಾಗ್, ರೂಹಾನಿ ಖಝಾಇನ್ ಸಂಪುಟ-13, ಪುಟ-424)

ವಾಗ್ದತ್ತ ಮಸೀಹರ ಭವಿಷ್ಯವಾಣಿ ಪೂರ್ಣಗೊಂಡಿತು, ಅಂಜುಮನಿಗೆ ಅವರ ದೂರಿನಿಂದ ಅಸಫಲತೆ ಉಂಟಾಯಿತು.

"ಅವರ ದೂರಿನಿಂದ ಅಂಜುಮನಿಗೆ ಯಾವ ರೀತಿಯ ಯಶಸ್ಸು ದೊರೆಯುತ್ತದೆ ಎಂದುಕ್ಕೆ ನಾವು ಕಾಯುತ್ತಿದ್ದೆವು." ಈ ವಾಕ್ಯ ಒಂದು ರೀತಿಯಿಂದ ಒಂದು ಭವಿಷ್ಯವಾಣಿಯಾಗಿ ಪರಿಣಮಿಸಿತು. ಅಂಜುಮನಿಗೆ ಅದರಲ್ಲಿ ಯಶಸ್ಸು ದೊರೆಯುವುದಿಲ್ಲ. ಬದಲು ನಿರಾಶೆ ಹಾಗೂ ಅವಮಾನ ಉಂಟಾಗುವುದು, ಹಾಗೆಯೇ ಆಯಿತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ಅವರ ದೂರು ಕೊಡುವ ಕ್ರಮಕ್ಕೆ ತುಂಬಾ ವಿರೋಧವಾಗಿದ್ದೆ. ಅದನ್ನು ನಾನು ತನ್ನ ಬರಹದಲ್ಲಿ ಸ್ಪಷ್ಟಪಡಿಸಿದೆ. ಈ ಕ್ರಮ ಒಳ್ಳೆಯದಲ್ಲ. ಆದರೆ ನನ್ನ ಸಲಹೆಯನ್ನು ಒಪ್ಪಲಿಲ್ಲ. ಬದಲು ಅಪಹಾಸ್ಯಕ್ಕೆ ಗುರಿ ಮಾಡಿದರು. ಅದೇ ಮಧ್ಯದಲ್ಲಿ ದೇವವಾಣಿಯಾಯಿತು. **"ಸತಝುಕುರೂನ ಮಾ ಅಖೂಲೂ ಲಕುಂ ವ ಉಫವ್ವಿಝು ಅಮ್ರಿ ಇಲಲ್ಲಾಹಿ"** ಅಂದರೆ ಅತಿ ಶೀಘ್ರದಲ್ಲಿ ನೀವು ತಿಳಿಯಬಹುದು. ನೀವು

ತಮ್ಮ ನಿಲುವಿನಲ್ಲಿ ಸೋಲುವಿರಿ ಎಂದು, ಯಾವ ನಿಲುವನ್ನು ನಾನು ನೆಚ್ಚಿಕೊಂಡಿದ್ದೇನೆ ಅಂದರೆ ವಿರೋಧಿಗಳ ಆಕ್ಷೇಪಗಳಿಗೆ ಉತ್ತರವನ್ನು ಬರೆಯಬೇಕು. ಅದನ್ನು ನಾನು ಅಲ್ಲಾಹನಿಗೆ ಸಮರ್ಪಿಸುತ್ತೇನೆ. ಈ ದೇವವಾಣಿ ಸಮಯಕ್ಕೆ ಮುಂಚಿತವಾಗಿಯೇ ಎಲ್ಲ ಜನರಿಗೆ ತಿಳಿಸಲಾಗಿತ್ತು. ಅದು ಹಾಗೆಯೇ ಆಯಿತು. ಅಂದರೆ ಅಂಜುಮನ್‌ನ ಅರ್ಜಿ ತಿರಸ್ಕರಿಸಲಾಯಿತು. (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ-18, ಪುಟ-603)

ಅಂಜುಮನಿನ ಕಾರ್ಯದರ್ಶಿ ಮಿಯಾ ಶಂಸುದ್ದೀನ್ ಅವರ ಮುಸಲ್ಮಾನರರಿಗೆ ಪ್ಲೇಗ್ (ತಾವೂನ್) ನಿಂದ ರಕ್ಷಿಸಲು ಸಲಹೆ:

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮಿಯಾ ಶಂಸುದ್ದೀನ್, ಅಂಜುಮನಿನ ಕಾರ್ಯದರ್ಶಿಗಳು, ಈ ಮಾತಿನ ಮೇಲೆ ಹೆಚ್ಚಿನ ಒಲವು ತೋರುತ್ತಾರೆ. ಎಲ್ಲ ಪಂಥದ ಮುಸಲ್ಮಾನರು (ಶಿಯಾ ಸುನ್ನಿ ಇತ್ಯಾದಿ) ಮೈದಾನಗಳಿಗೆ ತೆರಳಿ ತಮ್ಮ ತಮ್ಮ ರೀತಿಯಲ್ಲಿ ಪ್ರಾರ್ಥಿಸಬೇಕು, ಒಂದೇ ತಾರೀಖಿನಲ್ಲಿ ಒಟ್ಟುಗೂಡಿ ನಮಾಝ್ ನಿರ್ವಹಿಸಬೇಕು. ಇದು ಎಂತಹ ಉಪಾಯವಾಗಿದೆ ಎಂದರೆ ತಕ್ಷಣ ಪ್ಲೇಗ್ (ತಾವೂನ್) ದೂರವಾಗುವುದು. ಆದರೆ ಒಟ್ಟುಗೂಡಲು ಹೇಗೆ ಸಾಧ್ಯ? ಅದಕ್ಕೆ ಯಾವ ಉಪಾಯವೂ ತೋರಿಸಲಿಲ್ಲ. ವಹಾಬಿ ಪಂಥದವರ ಪ್ರಕಾರ ಫಾತಿಹ ಮಾಡದೇ ಯಾವುದೇ ನಮಾಝ್ ಸರಿ ಎಂದಾಗುವುದಿಲ್ಲ. ಹಾಗಿರುವಾಗ ಅವರ ಜೊತೆಯಲ್ಲಿ ಹನಫಿಯವರು ನಮಾಝ್ ನಿರ್ವಹಿಸಲು ಹೇಗೆ ಸಾಧ್ಯ? ಆಗ ಪರಸ್ಪರ ಗೊಂದಲ ಉಂಟಾಗುವುದಿಲ್ಲವೇ? ಹಝ್ರತ್ ಹುಸೇನ್ ಅಥವಾ ಅಲಿ(ರ) ಅವರಿಗೆ ಪರಿಪಾಲಕರೆಂದು ನಂಬುವವರಿದ್ದಾರೆ. ಮುಹರ್ರಂ ಮಾಸದಲ್ಲಿ ಪಂಜೆ ಕಟ್ಟಿ ಬೇಡಿಕೆ ಹರಕೆಗಳನ್ನು ಸಲ್ಲಿಸುತ್ತಾರೆ. ಕೆಲ ಮುಸ್ಲಿಮರು ಸಯ್ಯದ್ ಅಬ್ದುಲ್ ಖಾದರ್ ಜೀಲಾನಿ(ರ) ಅವರಿಗೆ ಪೂಜೆ ಸಲ್ಲಿಸುತ್ತಾರೆ ಅಥವಾ ಕೆಲವರು ಶಾಹ್‌ಮದಾರ್ ಅಥವಾ ಸಖೀ ಸರ್ವರ್ ಅವರನ್ನು ಪೂಜಿಸುತ್ತಾರೆ. ಅವರನ್ನೆಲ್ಲ ಏನು ಮಾಡಬೇಕು? ಈಗ ಅವರುಗಳೇನು ಪ್ರಾರ್ಥನೆ ಮಾಡುತ್ತಿಲ್ಲವೇ? (ಧಾಫಿಉಲ್ ಬಲಾ, ರೂಹಾನಿ ಖಝಾಈನ್, ಸಂಪುಟ-18, ಪುಟ-223)

**ಅಮ್ಮೈಂ ಯುಜೀಬುಲ್ ಮುಝ್‌ತರ್ರ ಇಝಾ ದಆಹು** ಎಂಬುದು ಮಿಯಾಂ ಶಮ್ಸುದ್ದೀನ್‌ನ ಸ್ಥಿತಿಯ ಬಗ್ಗೆ ಇಲ್ಲ

ಅವರ ಬಗ್ಗೆ **ವಮಾ ದುಆಉಲ್ ಕಾಫಿರೀನ ಇಲ್ಲಾ ಫೀ ಝಲಾಲ್** ಆಯತ್ ಸೂಕ್ತವಾಗಿದೆ.

ಮಿಯಾಂ ಶಮ್ಸುದ್ದೀನ್ ಅವರು **ಅಮ್ಮೈಂ ಯುಜೀಬುಲ್ ಮುಝ್‌ತರ್ರ ಇಝಾ ದಆಹು** ಎಂಬ ಆಯತ್‌ಅನ್ನು ಉಲ್ಲೇಖಿಸಿ ಮುಸ್ಲಿಮರು ತುರ್ತಾಗಿ ಪ್ರಾರ್ಥಿಸಿದಾಗ ಅವರ ಪ್ರಾರ್ಥನೆಗಳನ್ನು ಸ್ವೀಕರಿಸಲಾಗುವುದು ಎಂದು ಉತ್ತೇಜಿಸಿದರು. ಅದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಮಿಯಾಂ ಶಮ್ಸುದ್ದೀನ್ ಸಾಹೇಬರಿಗೆ ನೆನಪಿರಲಿ ನಿಮ್ಮ ಜಾಹೀರಾತಿನಲ್ಲಿ ನೀವು **ಅಮ್ಮೈಂ ಯುಜೀಬುಲ್ ಮುಝ್‌ತರ್ರ ಇಝಾ ದಆಹು** ಎಂಬ ಆಯತ್‌ಅನ್ನು ಬರೆದಿರುವಿರಿ ಮತ್ತು ಅದರಿಂದ ಬಂದ ಪ್ರಾರ್ಥನೆಯನ್ನು ಸ್ವೀಕರಿಸಲು ಆಶಿಸಿದ್ದೀರಿ. ಈ ಭರವಸೆಯು ಮಾನ್ಯವಾಗಿಲ್ಲ ಏಕೆಂದರೆ ದೇವರ ವಾಕ್ಯದಲ್ಲಿರುವ ಪದ **ಮುಝ್‌ತರ್** ಎಂಬುದರಿಂದ ಪರೀಕ್ಷೆಗಾಗಿ ಹಾನಿಗೊಳಗಾದವರಾಗಿರುತ್ತಾರೆ, ಶಿಕ್ಷೆಗಾಗಿ ಅಲ್ಲ ಆದರೆ ಯಾರು ಶಿಕ್ಷೆಗಾಗಿ ಯಾವುದೇ ಹಾನಿಯನ್ನು ಅಭ್ಯಾಸ ಮಾಡುವವರು ಈ ಆಯತ್‌ಗೆ ಸಾಕ್ಷಾತ್ಕಾರರಾಗುವುದಿಲ್ಲ. ಇಲ್ಲದಿದ್ದರೆ ಈ ಬಿಕ್ಕಟ್ಟಿನ ಸಮಯದಲ್ಲಿ ನೋಹನ ಜನರು, ಲೂತ್‌ನ ಜನರು ಮತ್ತು ಫಿರ್ಔನ್‌ನ ಜನರು ಇತ್ಯಾದಿಗಳ ಪ್ರಾರ್ಥನೆಗಳು ಅವಶ್ಯಕವಾಗಿ ಸ್ವೀಕರಿಸಲಾಗುತ್ತಿತ್ತು ಆದರೆ ಹೀಗೆ ಸಂಭವಿಸಲಿಲ್ಲ. ಮತ್ತು ಅಲ್ಲಾಹನ ಹಸ್ತವು ಆ ಜನಾಂಗದವರನ್ನು ನಾಶಪಡಿಸಿತು. ಮತ್ತು ಮಿಯಾಂ ಶಮ್ಸುದ್ದೀನ್‌ರವರು ಮತ್ತೆ ಇದರ ಬಗ್ಗೆ ಬೇರೆ ಯಾವ ಆಯತ್ ಇದೆ ಎಂದು ಕೇಳಿದರೆ ಅದಕ್ಕೆ ನಾನು **ಮಾ ದುಆಉಲ್ ಕಾಫಿರೀನ ಇಲ್ಲ ಫೀ ಝಲಾಲ್** ಎಂಬ ಸೂಕ್ತವಾಗಿದೆ ಎಂದು ನಾವು ಹೇಳುತ್ತೇವೆ. (ದಾಫಿಉಲ್ ಬಲಾ, ರೂಹಾನಿ ಖಝಾಈನ್, ಸಂಪುಟ-18, ಪುಟ-231)

ಲಾಹೋರ್‌ನ ಪ್ಲೇಗ್‌ನಿಂದ ರಕ್ಷಿಸಲಾಗುವುದು ಎಂದು ಜಾಹೀರಾತು ನೀಡಲು ಅಂಜುಮನ್-ಎ-ಹಿಮಾಯತ್‌ನ ಸದಸ್ಯರಿಗೆ ಒಂದು ಪಂಥಾಹ್ವಾನ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ದಾಫಿಉಲ್ ಬಲಾ ಎಂಬ ಗ್ರಂಥದಲ್ಲಿ ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್‌ನ ಸದಸ್ಯರಿಗೆ ಪಂಥಾಹ್ವಾನವನ್ನು ನೀಡಿದರು. ಅದೇನೆಂದರೆ ಒಂದು ವೇಳೆ ಅವರು ಸರಿಯಾದ ಮಾರ್ಗದಲ್ಲಿದ್ದರೆ ಮತ್ತು ಅವರು ದೇವರೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿದ್ದರೆ, ಲಾಹೋರ್ ಪ್ಲೇಗ್‌ನಿಂದ ರಕ್ಷಿಸಲ್ಪಟ್ಟಿದೆ ಎಂಬ ಜಾಹೀರಾತು ನೀಡಲಿ. ಆದರೆ ನಾನು ಅಲ್ಲಾಹನ ಭವಿಷ್ಯವಾಣಿಯ ಮೂಲಕ ಖಾದಿಯಾನ್ ಪ್ಲೇಗ್‌ನಿಂದ ಸುರಕ್ಷಿತವಾಗಿರುತ್ತದೆ ಎಂದು ನಾನು ಹೇಳುತ್ತೇನೆ. ಅವರು(ಅ) ಹೇಳಿದರು:

ಮಿಯಾಂ ಶಮ್ಸುದ್ದೀನ್ ಮತ್ತು ಅವರ ಅಂಜುಮನ್ ಹಿಮಾಯತೆ ಇಸ್ಲಾಂನ ಸದಸ್ಯರು ಲಾಹೋರ್ ಪ್ಲೇಗ್‌ನಿಂದ ಸುರಕ್ಷಿತವಾಗಿರಲಿದೆ ಎಂದು ಭವಿಷ್ಯವಾಣಿ ನುಡಿಯಬೇಕು ಮತ್ತು ಇಲ್‌ಹಾಮ್‌ನ ದಾವೆ ಮಾಡುವ ಮುನ್ಷಿ ಇಲಾಹಿ ಬಕ್ಷ್ ಅಕೌಂಟೆಂಟ್ ಅಂಜುಮನ್ ಹಿಮಾಯತೆ ಇಸ್ಲಾಂ ಅವರಿಗೆ ಇದು ಒಂದು ಸುವರ್ಣ ಅವಕಾಶವಾಗಿದೆ ಅವರು ತಮ್ಮ ಇಲ್‌ಹಾಮ್ ಮೂಲಕ ಲಾಹೋರ್‌ನ ಬಗ್ಗೆ ಭವಿಷ್ಯವಾಣಿಯ ನುಡಿದು ಅಂಜುಮನ್ ಹಿಮಾಯತೆ ಇಸ್ಲಾಮ್‌ಗೆ ಸಹಾಯ ಮಾಡಲಿ. (ಅದೇ ಪುಟ-231)

ಹಝ್ರತ್ ಅಬುಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರನ್ನು ಅವಮಾನಿಸಿದ ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್‌ನ ಅಧ್ಯಕ್ಷ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಹಝ್ರತ್ ಅಬೂಬಕ್ಕರ್(ರ) ಮತ್ತು ಹಝ್ರತ್ ಫಾರೂಕ್(ರ) ಅವರನ್ನು ನಿಂದಿಸುವ ಒಬ್ಬ ವ್ಯಕ್ತಿ ಹೇಗೆ ಆ ಅಂಜುಮನ್‌ನ ಅಧ್ಯಕ್ಷನಾಗಬಹುದು? ನಮಗೆ ಅಂದಿನಿಂದಲೇ ಈ ಅಂಜುಮನ್‌ನಿಂದ ನಿರಾಸೆ ಉಂಟಾಯಿತು ಮತ್ತು ಬಯಾಝಿಯ ಸಮುದಾಯದ ಸದಸ್ಯ ಎಂದು ಹೇಗೆ ತನ್ನನ್ನು ತಾನು ಹೇಳಿಕೊಳ್ಳುತ್ತಾನೆ? ಆತನು ಹಝ್ರತ್ ಅಲಿ(ರ) ಅವರನ್ನು ಕಟ್ಟ ಪದಗಳಿಂದ ನೆನಪಿಸಿಕೊಳ್ಳುತ್ತಾನೆ ಮತ್ತು ನಿಂದಿಸುತ್ತಾನೆ. ಈ ಸಂಘವು ಅಂತಹ ತತ್ವಗಳಿಗೆ ಬದ್ಧವಾಗಿರಲು ಸಾಧ್ಯವೇ? (ಅಲ್-ಬಲಾಗ್, ರೂಹಾನಿ ಖಝಾಈನ್, ಸಂಪುಟ-13, ಪುಟ-416)

ಅಂಜುಮನ್ ಧರ್ಮದ ಬಗ್ಗೆ ಗಮನ ಹರಿಸುವುದಿಲ್ಲ, ಅದರ ಒಬ್ಬ ಸದಸ್ಯನೂ ಸತ್ಯವನ್ನು ಹುಡುಕಲು ಆಗಮಿಸಲಿಲ್ಲ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಸರಪಳಿಯು ಎಂತಹ ಶ್ರೇಷ್ಠತೆಯ ವ್ಯಾಪ್ತಿಗೆ ತಲುಪಿದೆ ಎಂದು ಈ ಕುರುಡರಿಗೆ ಏನು ತಿಳಿದಿದೆ. ಮತ್ತು ಸತ್ಯವನ್ನು ಹುಡುಕುವ ಜನರು **ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್ವಾಜ** ಗೆ ಪ್ರತಿರೂಪವಾಗುತ್ತಿದ್ದಾರೆ. ಈ ಸಂಘವು ತನ್ನ ಸಣ್ಣ ನಿಲುವು ಮತ್ತು ದುರ್ಬಲ ಜೀವನದ ಸೂರ್ಯನ ಮೇಲೆ ಉಗುಳಲು ಕಾರಣವೇನು? ಇಂತಹವರು ಧರ್ಮದ ಕಡೆ ಗಮನ ಹರಿಸದೇ ಇರಲು ಇದೇ ಕಾರಣವಲ್ಲವೇ? ದೂರದ ಊರುಗಳಿಂದ ನೂರಾರು ಜನ ಬಂದು ಮಾರ್ಗದರ್ಶನ ಪಡೆಯುತ್ತಿದ್ದರೂ ಈ ಸಂಘದ ಒಬ್ಬ ಸದಸ್ಯರೂ ನಮ್ಮ ಬಳಿಗೆ ಬಂದು ನಮ್ಮ ಹಕ್ಕೊತ್ತಾಯಕ್ಕೆ ಕಾರಣ ಕೇಳುತ್ತಿಲ್ಲ. ಒಬ್ಬ ವ್ಯಕ್ತಿಯು ಅವರ ನಡುವೆ ನಿಂತು, ನೀವು ಅನುಸರಿಸಲು ಸೂಚಿಸಲಾದ ವಾಗ್ದಾತ್ತ ಮಸೀಹನು ನಾನು ಎಂದು ಹೇಳುವುದು ಧರ್ಮನಿಷ್ಠೆಯ ಸಂಕೇತವೇ? ಅವರು ಹಕ್ಕನ್ನು ನಿರಾಕರಿಸಲು ಅಥವಾ ದುರುದ್ದೇಶದಿಂದ ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ. ಇದು ಇಸ್ಲಾಮ್ ಧರ್ಮವೇ? (ಅದೇ ಪುಟ-422)

ಬೆಂಬಲವನ್ನು ಹೇಳಿಕೊಂಡು ನಿರಾಕರಿಸಿದ ಮೊದಲಿಗರು ಎಂಬ ದೇವರ ಆರೋಪದಲ್ಲಿ ಈ ಜನರು ಇದ್ದಾರೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್ ಇಸ್ಲಾಂನ ಹೆಸರಿನಲ್ಲಿ ಮುಸ್ಲಿಮರ ಸಂಪತ್ತನ್ನು ತೆಗೆದುಕೊಳ್ಳುತ್ತದೆ, ಈ ಜನರು ಇಸ್ಲಾಂ ಧರ್ಮದ ಉಪಕಾರಿ ಆಗಿದ್ದಾರೆಯೇ? ಈ ಜನರು ಸಿರಾತೆ ಮುಸ್ತಖೀಮ್ ಅನ್ನು ಬೆಂಬಲಿಸುತ್ತಿದ್ದಾರೆಯೇ? ಇಸ್ಲಾಮಿಗೆ ಬಂದ ಕಷ್ಟಗಳು ಅವರಿಗೆ ನೆನಪಿದೆಯೇ ಮತ್ತು ಅದನ್ನು ನವೀಕರಿಸುವುದು ದೇವರ ಅಭ್ಯಾಸವೇನು? ನಾನು ಬರದಿದ್ದರೆ ಇಸ್ಲಾಮಿನ ಬೆಂಬಲದ ಅವರ ಹಕ್ಕುಗಳು ಸ್ವಲ್ಪಮಟ್ಟಿಗೆ ತೋರಿಕೆಯಾಗುತ್ತಿತ್ತು ಎಂದು ನಾನು ಪ್ರಾಮಾಣಿಕವಾಗಿ ಹೇಳಬಲ್ಲೆ ಆದರೆ ಈಗ ಈ ಜನರು ನಕ್ಷತ್ರ ಬಂದಾಗ ದೇವರ ಆಪಾದನೆಗೆ ಒಳಗಾಗಿದ್ದಾರೆ. ಅವರನ್ನು ಬೆಂಬಲಿಸುವುದಾಗಿ ಹೇಳಿಕೊಳ್ಳುತ್ತಾ ಆಕಾಶದಿಂದ ಹೊರಬಂದ ಅವರು ಅದನ್ನು ನಿರಾಕರಿಸಿದವರಲ್ಲಿ ಮೊದಲಿಗರಾಗಿದ್ದಾರೆ. (ಕಿಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ-19, ಪುಟ-8)

ಇನ್ಶಾಅಲ್ಲಾಹ್, ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್‌ನ ಬೆಂಬಲಿಗರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವಿರುದ್ಧ ಹೊರಿಸಿರುವ ಆರೋಪಗಳಿಗೆ ಹಝ್ರತ್ ಮಸೀಹ್ ಮೌಊದ್(ಅ) ಅವರ ಪ್ರತಿಕ್ರಿಯೆಯನ್ನು ನಾವು ಮುಂದಿನ ಸಂಚಿಕೆಯಲ್ಲಿ ಓದುಗರಿಗೆ ಪ್ರಸ್ತುತಪಡಿಸುತ್ತೇವೆ, ಇನ್ಶಾ ಅಲ್ಲಾ.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಸರ್ವಶಕ್ತನಾದ ಅಲ್ಲಾಹನನ್ನು ಹತಾಶಗೊಳಿಸುವುದು ಅವಿಶ್ವಾಸಿಗಳ C¨ ÀÁVz É£ÀÄäz ÉÃ ÀÄ **ಅಲಾ ಕುಲ್ಲಿ ಶೈಯಿನ್ ಖದೀರ್** ಆಗಿದ್ದಾನೆ. ಪವಿತ್ರ ಖುರ್‌ಆನ್‌ನ ಅನುವಾದವನ್ನು ಸಹ ಓದಿರಿ ಮತ್ತು ನಮಾಝುನ್ನು ಸರಿಯಾಗಿ ನಿರ್ವಹಿಸಿರಿ ಮತ್ತು ಅದರ ಅರ್ಥವನ್ನು ಅರ್ಥಮಾಡಿಕೊಳ್ಳಿ. ನಿಮ್ಮ ಸ್ವಂತ ಭಾಷೆಯಲ್ಲಿ ಪ್ರಾರ್ಥಿಸಿ. ಖುರ್‌ಆನ್ ಅನ್ನು ಸಾಮಾನ್ಯ ಪುಸ್ತಕವಾಗಿ ಓದಬೇಡಿ, ಆದರೆ ಅದನ್ನು ಸರ್ವಶಕ್ತನಾದ ಅಲ್ಲಾಹನ ವಾಕ್ಯವಾಗಿ ಓದಿರಿ. ಪ್ರವಾದಿ(ಸ)ರವರು ನಮಾಝಿನಲ್ಲಿ ಅದನ್ನು ಪಠಿಸುತ್ತಿದ್ದಂತೆಯೇ ಪಠಿಸಿರಿ ಅದಲ್ಲದೆ ತಮ್ಮ ಅವಶ್ಯಕತೆಗಳನ್ನು ನಮಾಝಿನಲ್ಲಿ ತಮ್ಮ ಭಾಷೆಯಲ್ಲಿ ಪಠಿಸಿರಿ, ಅಲ್ಲಾಹನಲ್ಲಿ ಬೇಡಿಕೊಳ್ಳಿರಿ ಇದರಲ್ಲಿ ಯಾವ ರೀತಿಯ ಮುಜುಗರವಿಲ್ಲ ಇದರಿಂದ ನಮಾಝ್ ಎಂದಿಗೂ ವ್ಯರ್ಥವಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಜನರು ನಮಾಝುನ್ನು ಹಾಳು ಮಾಡಿದ್ದಾರೆ. ನಮಾಝು ಏನು ಮಾಡುತ್ತಾರೆ ಕೇವಲ ಡಿಕ್ಕಿ ಹೊಡೆತಗಳನ್ನು ಹೊಡೆಯುತ್ತಾರೆ, ನಮಾಝುನ್ನು ಹುಂಜದಂತೆ ಚುಚ್ಚುವ ಮೂಲಕ ಪ್ರಾರ್ಥನೆಗಳನ್ನು ತ್ವರಿತವಾಗಿ ನಿರ್ವಹಿಸುತ್ತಾರೆ. ಮತ್ತು ಹಿಂದೆ ಪ್ರಾರ್ಥನೆ ಮಾಡಲು ಕುಳಿತುಕೊಳ್ಳುತ್ತಾರೆ. ನಮಾಝ್‌ನ ನಿಜವಾದ ತಿರುಳು ಮತ್ತು ಅದರ ಆತ್ಮವು ದುಆ ಆಗಿದೆ. ನಮಾಝ್‌ನಿಂದ ಹೊರಗೆ ಬಂದು ಪ್ರಾರ್ಥನೆ ಮಾಡುವುದರಿಂದ ನಿಜವಾದ ಅರ್ಥವನ್ನು ಎಲ್ಲಿ ಪಡೆಯಬಹುದು?

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ಇಂತಹ ಪ್ರಾರ್ಥನೆಗಳು ಮತ್ತು ಪವಿತ್ರ ಖುರ್‌ಆನ್‌ನ ಧ್ಯಾನವು ನಮ್ಮ ನಿಜವಾದ ಈದ್ ಮತ್ತು ಶಾಶ್ವತ ಈದ್ ಆಗಿರುತ್ತದೆ. ಈ ರಮಝಾನ್‌ನಲ್ಲಿ ಇಂತಹ ಈದ್ ಆಚರಿಸಲು ನಾವು ಪ್ರತಿಜ್ಞೆ ಮಾಡಿದ್ದೇವೆಯೇ? ಇಲ್ಲದಿದ್ದರೆ, ಇಂದು ನಾವು ನಮ್ಮ ಪ್ರಾರ್ಥನೆಗಳನ್ನು ಉತ್ತಮವಾಗಿ ನಿರ್ವಹಿಸಲು ಮತ್ತು ಪವಿತ್ರ ಖುರ್‌ಆನ್ ಅನ್ನು ಓದಲು ಮತ್ತು ಧ್ಯಾನಿಸಲು ನಮ್ಮ ಈದ್ ಸಂತೋಷಗಳನ್ನು ಶಾಶ್ವತಗೊಳಿಸಬೇಕು ಎಂದು ಪ್ರತಿಜ್ಞೆ ಮಾಡಬೇಕು ಮತ್ತು ಅದು ಅದರ ಒಂದು ರೂಪವಾಗಿದೆ.

ಪವಿತ್ರ ಖುರ್‌ಆನ್‌ನ ಮಹತ್ವವನ್ನು ವಿವರಿಸುತ್ತಾ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಪವಿತ್ರ ಖುರ್‌ಆನ್‌ನ **'ಖುರ್‌ಆನ್'** ಪದವನ್ನು ಧ್ಯಾನಿಸಿದೆ ಮತ್ತು ಈ ಅನುಗ್ರಹದಾಯಕ ಪದದಲ್ಲಿ ಒಂದು ದೊಡ್ಡ ಭವಿಷ್ಯವಾಣಿಯಿದೆ ಎಂದು ನನಗೆ ಸ್ಪಷ್ಟವಾಯಿತು. ಅಂದರೆ ಇದು ಪವಿತ್ರ ಖುರ್‌ಆನ್ ಅಂದರೆ ಓದಲು ಯೋಗ್ಯವಾದ ಗ್ರಂಥವಾಗಿದೆ ಮತ್ತು ಒಂದು ಕಾಲದಲ್ಲಿ ಇದು ಓದಲು ಅತ್ಯಂತ ಯೋಗ್ಯವಾದ ಗ್ರಂಥವಾಗಿರುವುದು ಮತ್ತು ಇನ್ನಿತರ ಪುಸ್ತಕಗಳನ್ನು ಓದುವಾಗ ಅದರೊಂದಿಗೆ ಹಂಚಿಕೊಳ್ಳಲಾಗುತ್ತದೆ. ಪವಿತ್ರ ಖುರ್‌ಆನ್‌ಗೆ ಗಮನ ಕೊಡದ ಮತ್ತು ಹಗಲು ರಾತ್ರಿ ಇತರ ಪುಸ್ತಕಗಳ ಮೇಲೆ ಒಲವು ತೋರುವವನು ಮಹಾನ್ ನಂಬಿಕೆಯಿಲ್ಲದವನಾಗಿರುತ್ತಾನೆ. ನಮ್ಮ ಜಮಾಅತ್ತಿನವರಿಗೆ ತಮ್ಮ ತುಂಬು ಹೃದಯದಿಂದ ಪವಿತ್ರ ಖುರ್‌ಆನ್‌ನ ಅಧ್ಯಾಯನದಲ್ಲಿ ನಿರತರಾಗಿರಬೇಕು. ಇಂದಿನಕಾಲದಲ್ಲಿ ಪವಿತ್ರ ಖುರ್‌ಆನ್‌ನ ಆಯುಧವನ್ನು ತೆಗೆದುಕೊಂಡರೆ ಮಾತ್ರ ನಿಮಗೆ ವಿಜಯ ದೊರಕುವುದು. ಮತ್ತು ಈ ಪ್ರಕಾಶದ ಮುಂದೆ ಯಾವ ಕತ್ತಲೆಯೂ ನಿಲ್ಲಲಾರದು.

ಅದೇ ರೀತಿ ಪವಿತ್ರ ಖುರ್‌ಆನಿನ ಯಾವುದೇ ಭಾಗವನ್ನು ನೆನಪಿಸಿಕೊಳ್ಳದವನು ನಿರ್ಜನವಾದ ಮನೆಯಂತೆ ಎಂದು ಪ್ರವಾದಿ[ಸ] ಒಮ್ಮೆ ಹೇಳಿದರು. ಅದೇ ರೀತಿ ಪ್ರವಾದಿ[ಸ] ಇನ್ನೊಮ್ಮೆ ಹೇಳುತ್ತಾರೆ ಪವಿತ್ರ ಖೂರ್‌ಆನ್ ಅನ್ನು ತ್ವರಿತವಗಿ ಓದಬೇಡಿರಿ ಬದಲಿಗೆ ಅರ್ಥೈಸಿಕೊಳ್ಳುತ್ತ ಪಠಿಸಿರಿ.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ಈ ರಮಝಾನ್‌ನಲ್ಲಿ ಪವಿತ್ರ ಖುರ್‌ಆನ್ ಪಠಣದತ್ತ ಗಮನ ಸೆಳೆಯಲಾಗಿದೆ. ಕೆಲವರು ಕೆಲವು ಭಾಗವನ್ನು ನೆನಪಿಟ್ಟುಕೊಳ್ಳಲು ಪ್ರಯತ್ನಿಸಿರಬಹುದು, ಹೀಗೆ ಅದನ್ನು ನೆನಪಿಟ್ಟುಕೊಳ್ಳುವುದು, ಅದನ್ನು ಪುನರಾವರ್ತಿಸಬೇಕು ಹೀಗೆ ಅದು ನೆನಪಿನಲ್ಲಿ ಉಳಿಯುತ್ತದೆ ಮತ್ತು ನಂತರ ಪವಿತ್ರ ಖುರ್‌ಆನ್‌ನ ಬೋಧನೆಗಳ ಬಗ್ಗೆ ಚಿಂತಿಸಲು ಪ್ರಯತ್ನಿಸಿ. ಅದರ ಆದೇಶಗಳ ಬಗ್ಗೆ ಚಿಂತಿಸಿ. ಪ್ರವಾದಿ[ಸ.ಅ] ಮತ್ತು ಅವರ ನಿಜವಾದ ಗುಲಾಮ ಹೇಳುವಂತೆ ಇದರ ಮೇಲೆ ಆಲೋಚಿಸಿ. ಮತ್ತು ನಾವು ಪವಿತ್ರ ಖುರ್‌ಆನ್ ಅನ್ನು ಕಂಠಪಾಠ ಮಾಡಲು ಮತ್ತು ಧ್ಯಾನಿಸುವುದು ಮತ್ತು ಸಾಧ್ಯವಾದಷ್ಟು ಅದನ್ನು ಓದುವತ್ತ ಗಮನ ಹರಿಸಿದಾಗ ನಾವು ಅದರ ಹಖ್ಖನ್ನು ಈಡೇರಿಸಬಹುದು. ಮತ್ತು ಆಗ ಮಾತ್ರ ನಾವು ಈ ರಮಝಾನ್ ನಮ್ಮಲ್ಲಿ ಸಂಭವಿಸಿದ ಶುದ್ಧ ಬದಲಾವಣೆಗಳನ್ನು ತಂದಿದೆ ಅದರ ಕಾರಣದಿಂದ ನಾವು ಪವಿತ್ರ ಖುರ್‌ಆನ್ ಅನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಗಮನ ಸೆಳೆದಿದ್ದೇವೆ, ಇದು ನಿಜವಾಗಿ ನಮ್ಮ ಈದ್ ಆಗಿದೆ ಎಂದು ಹೇಳಬಹುದು. ಮತ್ತು ನಾವು ಈ ಈದ್ ಅನ್ನು ಇಂದು ಆಚರಿಸುವ ಮೂಲಕ ಕೊನೆಗೊಳಿಸಬಾರದು ಬದಲಿಗೆ ಸರ್ವಶಕ್ತನಾದ ಅಲ್ಲಾಹನ ಗ್ರಂಥವನ್ನು ಪ್ರತಿದಿನ ಓದಿ ಆನಂದಿಸುವ ಮೂಲಕ ಮತ್ತು ಆನಂದಿಸಲು ಮಾತ್ರವಲ್ಲದೆ ಅದರ ಬೋಧನೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಆಧ್ಯಾತ್ಮಿಕ ಪ್ರಗತಿ ಇರುತ್ತದೆ ಎಂದು ಅರ್ಥ ಮಾಡಿಕೊಳ್ಳಬೇಕು ಹೀಗೆ ನಮ್ಮ ಪ್ರತಿದಿನವೂ ಈದ್ ಸಂತೋಷವನ್ನು ತರುವ ದಿನವಾಗಿರುತ್ತದೆ.

ದಾಸರ ಹಖ್ಖುಗಳನ್ನು ಈಡೇರಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಓರ್ವ ಮುಸಲ್ಮಾನನು ಅಲ್ಲಾಹನ ಹಕ್ಕುಗಳು ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವುದಕ್ಕೆ ಸಂಪೂರ್ಣವಾಗಿ ಸಿದ್ಧನಾಗಿರಬೇಕು ಎಂದು ನೆನಪಿಡಿ. ಹೇಗೆ ಆತನು ಅಲ್ಲಾಹನ ಬಗ್ಗೆ ತನ್ನ ನಾಲಿಗೆಯಿಂದ ಅದ್ವೈತನು ಮತ್ತು ಆರಾಧನೆಗೆ ಅವನ ಹೊರತು ಯಾರೂ ಇಲ್ಲ ಎಂದು ಭಾವಿಸುತ್ತಾನೊ ಅದೇ ರೀತಿ ತನ್ನ ಕಾರ್ಯಗಳಲ್ಲಿಯೂ ಹಾಗೆಯೇ ತೋರಿಸಬೇಕು. ಮತ್ತು ಅವನ ಸೃಷ್ಟಿಯೊಂದಿಗೆ ಸಹಾನುಭೂತಿ ಮತ್ತು ಮೃದುತ್ವದಿಂದ ವರ್ತಿಸಬೇಕು. ಮತ್ತು ತನ್ನ ಸಹೋದರರ ಬಗ್ಗೆ ಮತ್ತು ಇತರರನ್ನು ನಿಂದಿಸುವುದರಿಂದ ಯಾವುದೇ ರೀತಿಯ ದ್ವೇಷ, ಅಸೂಯೆ ಮತ್ತು ಹೊಟ್ಟೆ ಕಿಚ್ಚನ್ನು ಹೊಂದಿರಬಾರದು, ಸಂಪೂರ್ಣವಾಗಿ ಪ್ರತ್ಯೇಕಿಸಬೇಕು. ಅನೇಕ ಜನರು ಹೇಗಿದ್ದಾರೆ ಎಂದರೆ ಅವರು ಪರಸ್ಪರ ವೈರತ್ವವನ್ನು ಹೊಂದಿರುತ್ತಾರೆ ಮತ್ತು ತನಗಿಂತ ದುರ್ಬಲ ಮತ್ತು ಬಡವರನ್ನು ಕೀಳಾಗಿ ಕಾಣುತ್ತಾರೆ ಮತ್ತು ಅವರನ್ನು ತಿರಸ್ಕಾರದಿಂದ ನಡೆಸಿಕೊಳ್ಳುತ್ತಾರೆ. ಮತ್ತು ಪರಸ್ಪರರ ಬಗ್ಗೆ ಹಿಂದಿನಿಂದ ದೋಷಿಸುತ್ತಾರೆ ಮತ್ತು ಅವರ ಮನಸ್ಸಿನಲ್ಲಿ ದ್ವೇಷ ಮತ್ತು ದುರುದ್ದೇಶ ಇರುತ್ತದೆ ಆದರೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: ನೀವು ನಿಮ್ಮ ನಡುವೆ ಪರಸ್ಪರ ಒಬ್ಬರಂತೆ ಆಗಿರಿ ಮತ್ತು ನೀವು ಒಬ್ಬರಂತೆಯೇ ಆದರೆ ನೀವು ಈಗ ನಿಮ್ಮ ಆತ್ಮಗಳನ್ನು ಶುದ್ಧೀಕರಿಸಿದ್ದೀರಿ ಎಂದು ಹೇಳಲು ಸಾಧ್ಯವಾಗುತ್ತದೆ ಏಕೆಂದರೆ ನಿಮ್ಮ ನಡುವಿನ ವಿಷಯವು ಎಲ್ಲಿಯುವರೆಗೆ ಸ್ಪಷ್ಟವಾಗುವುದಿಲ್ಲವೊ ಅಲ್ಲಿಯುವರೆಗೆ, ಈ ವಿಷಯುವು ಸರ್ವಶಕ್ತನಾದ ಅಲ್ಲಾಹನೊಂದಿಗೆಯು ಸ್ಪಷ್ಟವಾಗುವುದಿಲ್ಲ.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಶಯದಂತೆ ನಮ್ಮನ್ನು ರೂಪಿಸಿಕೊಂಡಾಗ ಇದು ನಮಗೆ ನಿಜವಾದ ಸಂತೋಷ ಮತ್ತು ಈದ್ ದಿನವಾಗಿದೆ ಮತ್ತು ಅದಕ್ಕಾಗಿ ನಾವು ನಮ್ಮ ಸಹೋದರರ ಹಖ್ಖುಗಳನ್ನು ಈಡೇರಿಸುತ್ತಿದ್ದೇವೆಯೇ ಎಂದು ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು. ಅಥವಾ ನಾವು ಈ ಹಖ್ಖುಗಳನ್ನು ಮುಂದಿನ ದಿನಗಳಲ್ಲಿ ಈಡೇರಿಸಲು ಪ್ರಯತ್ನಿಸುವೆವು ಎಂದು ವಾಗ್ದಾನ ಮಾಡುತ್ತಿದ್ದೇವೆಯೇ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಾನವಕುಲದ ಬಗ್ಗೆ ಸಹಾನುಭೂತಿಯನ್ನು ತೋರಿಸುವುದು ಒಂದು ದೊಡ್ಡ ಆರಾಧನೆಯಾಗಿದೆ ಮತ್ತು ಇದು ಸರ್ವಶಕ್ತನಾದ ಅಲ್ಲಾಹನ ಸಂತೋಷವನ್ನು ಪಡೆಯುವ ಒಂದು ದೊಡ್ಡ ಸಾಧನವಾಗಿದೆ. ಬಡವರನ್ನು ಚೆನ್ನಾಗಿ ನಡೆಸಿಕೊಳ್ಳದೆ ಅವರನ್ನು ಧಿಕ್ಕರಿಸುವವರು ತಮ್ಮನ್ನು ತಾವು ತೊಂದರೆಗೆ ಸಿಲುಕಿಕೊಳ್ಳಬಹುದು ಎಂದು ನಾನು ಹೆದರುತ್ತೇನೆ. ಅಲ್ಲಾಹನು ದಯಪಾಲಿಸಿದವರ ಮೇಲೆ ಕೃತಜ್ಞತೆಯೆಂದರೆ ಅವರು ತಮ್ಮ ಸೃಷ್ಟಿಕರ್ತನ ಸೃಷ್ಟಿನೊಂದಿಗೆ ದಯೆ ತೋರಬೇಕು ಮತ್ತು ಅಲ್ಲಾಹನು ನೀಡಿದ ಈ ಕೃಪೆಗೆ ಅಹಂಕಾರ ತೋರಬಾರದು ಮತ್ತು ಬಡವರನ್ನು ಅನಾಗರಿಕರಂತೆ ತುಳಿಯಬಾರದು.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ಬಡವರ ಮತ್ತು ನಿರ್ಗತಿಕರ ಸಹಾಯವು ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಪ್ರೀತಿಯನ್ನು ಆಕರ್ಷಿಸುವಂತಿರಬೇಕು ಮತ್ತು ಅದು ಸಂಭವಿಸಿದಾಗ ಅದು ನಿಜವಾದ ಈದ್ ದಿನವಾಗಿರುತ್ತದೆ. ಜಮಾಅತ್ತಿನಲ್ಲಿರುವ ವ್ಯಕ್ತಿಗಳು ಸಹ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ, ಆದರೆ ಜಮಾಅತ್ತಿನಲ್ಲಿಯೂ ಹಣವಿದೆ ಅಲ್ಲಿ ಸ್ಥಾನಮಾನ ಹೊಂದಿರುವವರು ಸಹ ಏನಾದರೂ ಪಾವತಿಸಬೇಕು. ರೋಗಿಗಳ ಪರಿಹಾರ ನಿಧಿ. ಅನಾಥರ ನಿಧಿ. ಬಡವರಿಗಾಗಿ ನಿಧಿ ಇದೆ. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ನಿಧಿ ಇದೆ ಮತ್ತು ಸಹಾಯವನ್ನು ನೀಡುವ ಹಲವಾರು ಸ್ಥಳಗಳಿವೆ. ಈ ನಿಟ್ಟಿನಲ್ಲಿಯೂ ಜಮಾಅತ್‌ನ ಸದಸ್ಯರು ಗಣ್ಯರತ್ತ ಗಮನ ಹರಿಸಬೇಕು.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ಇದು ನಿಜವಾದ ಈದ್‌ನ ಸಂತೋಷವನ್ನು ನೀಡಬಲ್ಲ ಬೋಧನೆಯಾಗಿದೆ. ಅದಕ್ಕೆ ತಕ್ಕಂತೆ ನಮ್ಮ ಬದುಕನ್ನು ಅಳವಡಿಸಿಕೊಂಡರೆ ನಾವೇ ನಿಜವಾದ ಸಂಭ್ರಮಿಸುವವರು. ವರ್ಷದ ಎರಡು ಈದ್‌ಗಳು ಮಾತ್ರವಲ್ಲದೆ ಪ್ರತಿದಿನವೂ ನಮಗೆ ಈದ್‌ನ ದಿನವಾಗಿರುತ್ತದೆ ಏಕೆಂದರೆ ಸರ್ವಶಕ್ತನಾದ ಅಲ್ಲಾಹನ ನಿಜವಾದ ಸೇವಕನಾಗಲು ನಾವು ಆರಾಧನೆಯ ಹಕ್ಕನ್ನು ಪೂರೈಸಲು ಪ್ರಯತ್ನಿಸುತ್ತೇವೆ, ಅದರ ಮೂಲಕ ಸರ್ವಶಕ್ತನಾದ ಅಲ್ಲಾಹನು ನಮ್ಮನ್ನು ಮೊದಲಿಗಿಂತ ಹೆಚ್ಚು ಅನುಗ್ರಹಿಸುತ್ತಾನೆ. ನಾವು ಪವಿತ್ರ ಖುರ್‌ಆನ್ ಅನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಮತ್ತು ಅದರಂತೆ ಕಾರ್ಯನಿರ್ವಹಿಸಲು ಪ್ರಯತ್ನಿಸಿದರೆ, ಸರ್ವಶಕ್ತನಾದ ಅಲ್ಲಾಹನು ನಮ್ಮನ್ನು ಆತನ ಅನುಗ್ರಹಗಳ ವಾರಸುದಾರರನ್ನಾಗಿ ಮಾಡುತ್ತಾನೆ. ನಾವು ದಾಸರ ಹಖ್ಖನ್ನು ಈಡೇರಿಸಲು ಪ್ರಯತ್ನಿಸಿದರೆ ಸರ್ವಶಕ್ತನಾದ ಅಲ್ಲಾಹನು ಪ್ರೀತಿ ನಮ್ಮನ್ನು ನೋಡುತ್ತದೆ ಮತ್ತು ಇವುಗಳು ನಿಜವಾದ ಈದ್ ಅನ್ನು ಪಡೆಯುತ್ತವೆ. ಇದು ನಾವು ಪಡೆಯಲಿರುವ ನಿಜವಾದ ಈದ್ ಎಂದು ನಾವು ಪ್ರಾರ್ಥಿಸಬೇಕು ಮತ್ತು ಶ್ರಮಿಸಬೇಕು.

## ಸದಖತುಲ್ ಫಿತರ್ ಪಾಲನೆ

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ "ಫಿತ್ರಾನ" ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ **"ಸದಖತುಲ್ ಫಿತರ್"** ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋದಿ, ಅಕ್ಕಿ) ಯು ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 56/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ. **(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 21 April 2022, Issue No. 16

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

# ಮನುಷ್ಯನಲ್ಲಿ ಶುದ್ಧವಾದ ಬದಲಾವಣೆಗಳು ಶಾಶ್ವತವಾಗಿ ಸೃಷ್ಟಿಯಾದಾಗ ಮಾತ್ರ ರಮಝಾನ್‌ನ ಅನುಗ್ರಹಗಳು ಲಭಿಸುತ್ತದೆ ಮತ್ತು ಈ ಬದಲಾವಣೆಗಳು ಶಾಶ್ವತವಾಗಿ ಜೀವನದ ಭಾಗವಾದಾಗ ಮಾತ್ರ ಈದ್‌ನ ಸಂತೋಷಗಳು ಲಭ್ಯವಾಗುತ್ತದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–05–2021** ರಂದು ನೀಡಿದ **ಖುತ್‌ಬ ಈದುಲ್ ಫಿತರ್‌**ನ ಸಾರಾಂಶ

ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್–ಫಾತಿಹಾ ಪಠಿಸಿದ ನಂತರ ಹುಝೂರ್ ಅನ್ವರ್[ಅತಬಿಅ] ಹೇಳಿದರು: ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಾಗಿದೆ ಅಲ್ಲಾಹನು ನಮಗೆ ರಮಝಾನ್‌ನ ಪವಿತ್ರ ಮಾಸ ಕಳೆಯಲು ಹಾಗೂ ಇಂದು ಈದ್ ದಿನವನ್ನು ಆಚರಿಸಲು ತೌಫೀಖ್ ನೀಡಿದನು. ಆದರೆ ಈ ರಮಝಾನ್‌ನ ಉದ್ದೇಶವು ಇದೇ ಆಗಿದಿಯೇ? ಸರ್ವಶಕ್ತನಾದ ಅಲ್ಲಾಹನು ನಾವು 29, 30 ದಿನಗಳ ಕಾಲ ಉಪವಾಸ ಮಾಡಿ, ಈದ್ ಆಚರಿಸಲು, ಸಂತೋಷವನ್ನು ಆಚರಿಸಲು ಮತ್ತು ಉತ್ತಮ ಭೋಜನಗಳನ್ನು ತಿನ್ನಲು, ಕುಡಿಯಲು, ಕ್ರೀಡೆಗಳನ್ನು ಆಡಬೇಕೆಂದು ಬಯಸಿದ್ದಾನೆಯೇ? ವಾಸ್ತವವಾಗಿ, ರಮಝಾನ್‌ನ ಉಪವಾಸ ಮತ್ತು ಈ ಈದ್‌ನ ಉದ್ದೇಶವನ್ನು ಅರ್ಥಮಾಡಿಕೊಂಡಾಗ ಮಾತ್ರ ನಾವು ಸರ್ವಶಕ್ತನಾದ ಅಲ್ಲಾಹನ ಈ ಅನುಗ್ರಹಗಳನ್ನು ಸ್ವೀಕರಿಸುತ್ತೇವೆ ಮತ್ತು ಈ ಅನುಗ್ರಹಗಳು ಮತ್ತು ಶುದ್ಧ ಬದಲಾವಣೆಗಳನ್ನು ನಾವು ನಮ್ಮೊಳಗೆ ಸಾಧಿಸಿದ್ದೇವೆ ಎಂದಾದರೆ ಮೂವತ್ತು ದಿನಗಳ ಉಪವಾಸಗಳ ನಂತರ ಈ ವಿಷಯಗಳು ನಮ್ಮಲ್ಲಿ ವ್ಯಕ್ತವಾಗಬೇಕು.

ಆದ್ದರಿಂದ, ಒಬ್ಬ ವ್ಯಕ್ತಿಯಲ್ಲಿ ಶುದ್ಧ ಬದಲಾವಣೆಗಳು ಶಾಶ್ವತವಾಗಿ ಸೃಷ್ಟಿಯಾದಾಗ ಮಾತ್ರ ರಮಝಾನ್‌ನ ಅನುಗ್ರಹವು ಲಭಿಸುತ್ತದೆ ಮತ್ತು ಈ ಬದಲಾವಣೆಗಳು ಶಾಶ್ವತವಾಗಿ ಜೀವನದ ಭಾಗವಾದಾಗ ಈದ್‌ನ ಸಂತೋಷವೂ ಲಭಿಸುತ್ತದೆ. ಪ್ರವಾದಿ[ಸ.ಅ] ರವರ ನೈಜ ಗುಲಾಮ ಹಾಗೂ ಪ್ರಸ್ತುತ ಕಾಲಘಟ್ಟದ ಇಮಾಮರನ್ನು ನಾವು ಸ್ವೀಕರಿಸಿದ್ದೇವೆ ಮತ್ತು ಅವರು ನಮ್ಮನ್ನು ಈ ವಿಷಯದ ಕುರಿತು ನಾವು ಹೇಗೆ ನೈಜ ಮುಮಿನ್ ಆಗಬಹುದು ಎಂದು ಮಾರ್ಗದರ್ಶನವನ್ನು ನೀಡಿದ್ದಾರೆ. ಅವರ ಅಧ್ಯಾಪನೆಗಳ ಬೆಳಕಿನಲ್ಲಿ ನಾವು ರಮಝಾನ್‌ನ ಅನುಗ್ರಹಗಳನ್ನು ಹೇಗೆ ಶಾಶ್ವತವಾಗಿ ಜಾರಿಗೊಳಿಸಬೇಕು ಮತ್ತು ಹೇಗೆ ನೈಜವಾಗಿಯೂ ಸಂತೋಷವಾಗಿರಬಹುದು ಎಂಬುದನ್ನು ನಾನು ಕೆಲವು ಉಲ್ಲೇಖಗನ್ನು ಪ್ರಸ್ತಾಪಿಸುವೆನು. ನಿಜವಾದ ಈದ್ ಅನ್ನು ಆಚರಿಸಲು ನಾವು ಯಾವ ಮಾನದಂಡಗಳನ್ನು ಹೊಂದಿರಬೇಕು?

ಹುಝೂರ್ ಅನ್ವರ್[ಅತಬಿಅ]ರವರು ಹೇಳಿದರು: ನಾವು ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸುತ್ತೇವೆ ಮತ್ತು ಆತನನ್ನು ಪ್ರೀತಿಸುತ್ತೇವೆ ಎಂದು ಹೇಳಿಕೊಳ್ಳುತ್ತೇವೆ, ಆದರೆ ಅಲ್ಲಾಹನನ್ನು ಪಡೆಯುವ ಈ ಪ್ರೀತಿಯ ಮಾನದಂಡ ಏನಾಗಿರಬೇಕು ಎಂಬುದನ್ನು ವಿವರಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಿಜವಾದ ಏಕದೇವೋಪಾಸನೆಯನ್ನು ಸ್ಥಾಪಿಸಲು, ಸರ್ವಶಕ್ತನಾದ ಅಲ್ಲಾಹನ ಪ್ರೀತಿಯಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವುದು ಅವಶ್ಯಕ ಮತ್ತು ಪ್ರಾಯೋಗಿಕ ಭಾಗದಲ್ಲಿ ಪರಿಪೂರ್ಣವಾಗದ ಹೊರತು ಈ ಪ್ರೀತಿಯನ್ನು ಸಾಬೀತುಪಡಿಸಲಾಗುವುದಿಲ್ಲ. ಓರ್ವ ವ್ಯಕ್ತಿಯು ಕಲ್ಲು ಸಕ್ಕರೆಯ ಹೆಸರನ್ನು ಹೇಳುತ್ತಲೇ ಇದ್ದರೆ, ಅದು ಎಂದಿಗೂ ಸಿಹಿ ವಿಷಯವಾಗುವುದಿಲ್ಲ ಅಥವಾ ಅವನು ತನ್ನ ನಾಲಿಗೆಯಿಂದ ಇನ್ನೊಬ್ಬರ ಸ್ನೇಹವನ್ನು ಒಪ್ಪಿಕೊಂಡರೆ ಆದರೆ ತೊಂದರೆಯ ಸಮಯದಲ್ಲಿ ಅವನಿಗೆ ಸಹಾಯ ಮಾಡಿ ಮತ್ತು ಅವನ ಕೈಹಿಡಿಯದಿದ್ದರೆ ಆ ಸ್ನೇಹಿತ ಪ್ರಾಮಾಣಿಕನಾಗಿರಲು ಸಾಧ್ಯವಿಲ್ಲ. ಅದೇ ರೀತಿ ಪರಮಾತ್ಮನ ಅದ್ವೈತದ ಮೌಖಿಕ ನಿವೇದನೆ ಮತ್ತು ಅದರೊಂದಿಗೆ ಪ್ರೀತಿಯ ಮೌಖಿಕ ನಿವೇದನೆಯೂ ಇದ್ದರೆ ಪ್ರಯೋಜನವಿಲ್ಲ, ಆದರೆ ಈ ಭಾಗವು ಮೌಖಿಕ ನಿವೇದನೆಗಿಂತ ಪ್ರಾಯೋಗಿಕ ಭಾಗವನ್ನು ಬಯಸುತ್ತದೆ. ಇದರ ಅರ್ಥ ಮೌಖಿಕ ನಿವೇದನೆಯ ಪ್ರಯೋಜನವಿಲ್ಲ ಎಂದಲ್ಲ. ಇಲ್ಲ ನನ್ನ ಉದ್ದೇಶ ಮೌಖಿಕ ತಪ್ಪೊಪ್ಪಿಗೆಯೊಂದಿಗೆ ಪ್ರಾಯೋಗಿಕ ದೃಢೀಕರಣ ಇರಬೇಕು, ಆದ್ದರಿಂದ ತಮ್ಮ ಜೀವನವನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುವುದು ಅವಶ್ಯಕವಾಗಿದೆ ಮತ್ತು ಇದು ಇಸ್ಲಾಂ ಆಗಿದೆ, ಇದೇ ಉದ್ದೇಶಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಆದುದರಿಂದ, ಯಾರು ಈ ಸಮಯದಲ್ಲಿ ಅಲ್ಲಾಹನು ಈ ಉದ್ದೇಶಕ್ಕಾಗಿ ಹೊರಡಿಸಿದ ಕಾರಂಜಿಯ ಬಳಿಗೆ ಬರುವುದಿಲ್ಲ, ಅವನು ಖಂಡಿತವಾಗಿಯೂ ಅದೃಷ್ಟವಂತನಾಗಿ ಉಳಿಯುತ್ತಾನೆ.

ನಮಾಝ್‌ನ ಪ್ರಾಮುಖ್ಯತೆಯ ಬಗ್ಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝ್ ಬಹಳ ಮುಖ್ಯವಾದ ವಿಷಯವಾಗಿದೆ ಮತ್ತು ನಂಬಿಕೆಯುಳ್ಳವರ ಆರೋಹಣವಾಗಿದೆ. ಸರ್ವಶಕ್ತನಾದ ಅಲ್ಲಾಹನಿಂದ ಬೇಡಿಕೊಳ್ಳಲು ನಮಾಝ್ ಅತ್ಯುತ್ತಮ ಮಾರ್ಗವಾಗಿದೆ. ನಮಾಝ್ ಎಂದರೆ ಡಿಕ್ಕಿ ಹೊಡೆತವಲ್ಲ ಅಥವಾ ಹುಂಜದಂತೆ ಕಚ್ಚುವುದು ಅಲ್ಲ. ನಮಾಝ್ ಸರ್ವಶಕ್ತನಾದ ಅಲ್ಲಾಹನ ಉಪಸ್ಥಿತಿಯಾಗಿದೆ ಮತ್ತು ಸರ್ವಶಕ್ತನಾದ ಅಲ್ಲಾಹನನ್ನು ಸ್ತುತಿಸುವ ಮತ್ತು ತನ್ನ ಪಾಪಗಳನ್ನು ಕ್ಷಮಿಸುವ ಸಂಯುಕ್ತ ರೂಪವನ್ನು ನಮಾಝ್ ಎಂದು ಕರೆಯಲಾಗುತ್ತದೆ. ಆದ್ದರಿಂದ ಬಹಳ ಉತ್ತಮವಾಗಿ ನಮಾಝನ್ನು ನಿರ್ವಹಿಸಬೇಕು. ನೀವು ಸರ್ವಶಕ್ತನಾದ ಅಲ್ಲಾಹನಿಗೆ ವಿಧೇಯತೆಯಲ್ಲಿ ಕೈಜೋಡಿಸಿ ನಿಂತಿರುವಿರಿ ಎಂದು ನಿಮ್ಮ ಮುಖವು ಸ್ಪಷ್ಟವಾಗಿ ತೋರಿಸುವ ರೀತಿಯಲ್ಲಿ ಎದ್ದುನಿಲ್ಲಬೇಕು ಮತ್ತು ನಿಮ್ಮ ಬಾಗುವಿಕೆಯಿಂದ ನಿಮ್ಮ ಹೃದಯವು ಬಗ್ಗುತ್ತಿದೆ ಮತ್ತು ಸಜದ ಮಾಡಿದರೆ ಓರ್ವ ವ್ಯಕ್ತಿಯ ಹೃದಯವು ಭಯಭೀತನಾಗುವ ರೀತಿಯಲ್ಲಿರಬೇಕು ಮತ್ತು ನಮಾಝಿನಲ್ಲಿ ತನ್ನ ಆಧ್ಯಾತ್ಮಿಕತೆ ಹಾಗೂ ಲೌಕಿಕತೆಗಾಗಿ ದುಆ ಮಾಡಿರಿ.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ನಾವು ಅಂತಹ ನಮಾಝ್‌ಗಳನ್ನು ಪಡೆದರೆ ಆ ದಿನಗಳು ನಮ್ಮ ನಿಜವಾದ ಈದ್‌ನ ದಿನಗಳಾಗಿವೆ. ನಮ್ಮ ಪರಿಶೀಲನೆಯ ಅವಶ್ಯಕತೆ ಇದೆ. ನಾವು ನಿಜವಾದ ಈದ್ ಅನ್ನು ಆಚರಿಸಲು ಹಾಗೂ ಅದರ ಮೂಲ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದೇವೆಯೇ? ಅಥವಾ ಮುಂದಿನ ದಿನಗಳಲ್ಲಿ ಇದನ್ನು ಅನುಸರಿಸುವ ಮೂಲಕ ಸರ್ವಶಕ್ತನಾದ ಅಲ್ಲಾಹನ ಸಂತೋಷವನ್ನು ಪಡೆಯಲು ನಾವು ಪ್ರಯತ್ನಿಸುತ್ತೇವೆ ಎಂದು ಈ ರಮಝಾನ್‌ನಲ್ಲಿ ಪ್ರತಿಜ್ಞೆ ಮಾಡಿದ್ದೇವೆಯೇ?

ಓರ್ವ ನಿಜವಾದ ಮುಸ್ಲಿಂ ಹೇಗಿರಬೇಕು ಎಂಬುದರ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಅವಿಧೇಯತೆಯಲ್ಲಿ ಎಷ್ಟೇ ವಿಶ್ರಾಂತಿ ಮತ್ತು ಸಾಂತ್ವನವನ್ನು ವಾಗ್ದಾನ ನೀಡಿದರೂ ಅಸಹಕಾರವನ್ನು ತನಗೆ ಮರಣದ ಕಾರಣವೆಂದು ನಿಜವಾದ ಮುಸಲ್ಮಾನನು ಪರಿಗಣಿಸುತ್ತಾನೆ. ಆದ್ದರಿಂದ, ನಿಜವಾದ ಮುಸ್ಲಿಮನಾಗಲು, ಸರ್ವಶಕ್ತ ಅಲ್ಲಾಹನಿಗೆ ಪ್ರೀತಿ ಮತ್ತು ವಿಧೇಯತೆ ಯಾವುದೇ ಪ್ರತಿಫಲ ಅಥವಾ ಶಿಕ್ಷೆಯ ಭಯ ಮತ್ತು ಭರವಸೆಯ ಮೇಲೆ ಆಧಾರಿತವಾಗಿರಬಾರದು, ಆದರೆ ಭೌತಿಕ ಲಕ್ಷಣ ಮತ್ತು ಪ್ರಕೃತಿಯು ಅಂಶವಾಗಿ ಅಂತಹ ಸ್ವಭಾವವನ್ನು ಪಡೆದುಕೊಳ್ಳುವುದು ಅವಶ್ಯಕ. ನಂತರ ಪ್ರೀತಿಯ ಬದಲು ಅದು ತನಗಾಗಿ ಒಂದು ಸ್ವರ್ಗವನ್ನು ಸೃಷ್ಟಿಸುತ್ತದೆ ಮತ್ತು ಅದು ನಿಜವಾದ ಸ್ವರ್ಗವಾಗಿದೆ. ಈ ಮಾರ್ಗವನ್ನು ಅನುಸರಿಸದ ಹೊರತು ಯಾವುದೇ ವ್ಯಕ್ತಿ ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ನನ್ನೊಂದಿಗೆ ಸಂಬಂಧ ಹೊಂದಿರುವ ನಿಮಗೆ ಈ ಮಾರ್ಗವನ್ನು ಅನುಸರಿಸಲು ಬೋಧಿಸುತ್ತೇನೆ ಏಕೆಂದರೆ ಅದು ಸ್ವರ್ಗಕ್ಕೆ ನಿಜವಾದ ಮಾರ್ಗವಾಗಿದೆ.

ಹುಝೂರ್ ಅನ್ವರ್[ಅತಬಿಅ] ಹೇಳಿದರು: ಆದ್ದರಿಂದ ಈ ಸ್ವರ್ಗವೆ ನಿಜವಾದ ಈದ್‌ನ ಸಂತೋಷವಾಗಿದೆ ಅದನ್ನು ನಾವು ಪಡೆಯಬೇಕು. ಈ ರೀತಿಯ ಈದ್ ಅನ್ನು ಆಚರಿಸಲು ನಾವು ಸಿದ್ಧರಿದ್ದೇವೆಯೇ? ಈ ಸ್ವರ್ಗಕ್ಕೆ ಪ್ರವೇಶಿಸಲು ಪ್ರಯತ್ನಿಸುತ್ತಿರುವಿರಾ? ಎಂದು ನಾವು ನಮ್ಮ ಪರಿಶೀಲಿಸಿಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಪವಿತ್ರ ಖುರ್‌ಆನ್ ಅನ್ನು ಪಠಿಸಿರಿ ಮತ್ತು ಅಲ್ಲಾಹನಿಂದ ಎಂದಿಗೂ ಹತಾಶೆ ಆಗಬೇಡಿ. ನಂಬಿಕೆಯುಳ್ಳವನು ಅಲ್ಲಾಹನಿಂದ ಎಂದಿಗೂ ಹತಾಶನಾಗುವುದಿಲ್ಲ.

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.